Swabhimani Sahakari
Pages : 40 / 12₹

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 20
Issue - 01
January - 2023

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಹೊಳೆಯಾಗ ನೀರು ತುಂಬಿ
ಹೊಲದಾಗ ಬೆಳೆ ತುಂಬಿ
ಊರೂರ ಗುಡಿ ಮನೆ ತುಂಬಿ ।
ಜನ ತುಂಬಿ
ಸಂಕ್ರಾಂತಿ ಬಂತು ಸಿರಿತಂತು ।



ಜನವರಿ 12
ಸ್ವಾಮಿ ವಿವೇಕಾನಂದರ ಜಯಂತಿ
ರಾಷ್ಟ್ರೀಯ ಯುವ ದಿನ



ಜನವರಿ 1
ಸೌಹಾರ್ದ ಸಹಕಾರಿ
ದಿನಾಚರಣೆ

ಸೌಹಾರ್ದ ಸಹಕಾರಿಗಳ
ಸಂಖ್ಯೆ : 5753

ಇ-ಸ್ಟಾಂಪಿಂಗ್
ಕೇಂದ್ರಗಳ ಸಂಖ್ಯೆ : 1587

ಜನವರಿ 26, ಗಣರಾಜ್ಯೋತ್ಸವ



**ಜಿ. ನಂಜನಗೌಡ**

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಹೊಸ ಕ್ಯಾಲೆಂಡರ ವರ್ಷ 2023 ರ ಹಾಗೂ ಸಂಕ್ರಾಂತಿ ಹಬ್ಬದ ಶುಭಾಶಯಗಳು. 2022 ರಲ್ಲಿ ನಡೆಸಿದ ಎಲ್ಲ ಅಭಿವೃದ್ಧಿಪರ ಚಟುವಟಿಕೆಗಳನ್ನು ಮುಂದುವರೆಸಿಕೊಂಡು 2023ರ ಸಾಲಿನಲ್ಲಿ ಹೆಚ್ಚಿನ ಕ್ರೀಯಾಯೋಜನೆಗಳನ್ನು ಸಿದ್ಧಪಡಿಸಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಬಗ್ಗೆ ಚಿಂತನೆ ಮಾಡೋಣ. ಸಂಕ್ರಾಂತಿ ಹಬ್ಬ ಎಳ್ಳು ಬೆಲ್ಲಗಳನ್ನು ಹಂಚಿಕೊಂಡು ಗ್ರಾಹಕರು ಸದಸ್ಯರು ಆಡಳಿತ ಮಂಡಳಿಯವರು ಸಿಬ್ಬಂದಿಯವರು ಎಲ್ಲರೂ ಸೇರಿ ಒಟ್ಟಾಗಿ ಸಹಕಾರಿಯ ಅಭಿವೃದ್ಧಿಯತ್ತ ಕಾರ್ಯನಿರ್ವಹಿಸೋಣ.

## 2023 ಹೊಸ ವರ್ಷ – ಸಹಕಾರಿಗಳ ಜೀವನದಲ್ಲಿ ತರಲಿ ಹರುಷ. ದೇಶದ ಗೃಹ ಹಾಗೂ ಸಹಕಾರ ಸಚಿವ ಶ್ರೀ ಅಮಿತ್ ಶಾ ಭೇಟಿ. ಐತಿಹಾಸಿಕ ಘಟನಾವಳಿ. ಸೌಹಾರ್ದ ಸಹಕಾರಿಗಳು ವಿಸ್ತೃತ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸಲಹೆ. ದೇಶದ ಸಮಗ್ರ ಸಹಕಾರ ಚಳುವಳಿಯ ಅಭಿವೃದ್ಧಿಯ ಬಗ್ಗೆ ಕೇಂದ್ರದ ಕಾರ್ಯಕ್ರಮಗಳ ಸಮಗ್ರ ಮಾಹಿತಿ ನೀಡಿದ ಅಮಿತ್ ಶಾ ರವರಿಗೆ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಕೃತಜ್ಞತೆಗಳು.

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಹೊಸ ಕ್ಯಾಲೆಂಡರ್ ವರ್ಷ 2023 ರ ಹಾಗೂ ಸಂಕ್ರಾಂತಿ ಹಬ್ಬದ ಶುಭಾಶಯಗಳು. 2022 ರಲ್ಲಿ ನಡೆಸಿದ ಎಲ್ಲ ಅಭಿವೃದ್ಧಿಪರ ಚಟುವಟಿಕೆಗಳನ್ನು ಮುಂದುವರೆಸಿಕೊಂಡು 2023ರ ಸಾಲಿನಲ್ಲಿ ಹೆಚ್ಚಿನ ಕ್ರೀಯಾಯೋಜನೆಗಳನ್ನು ಸಿದ್ಧಪಡಿಸಿ ಪರಿಣಾಮಕಾ–ರಿಯಾಗಿ ಅನುಷ್ಠಾನಗೊಳಿಸುವ ಬಗ್ಗೆ ಚಿಂತನೆ ಮಾಡೋಣ. ಸಂಕ್ರಾಂತಿ ಹಬ್ಬ ಎಳ್ಳು ಬೆಲ್ಲಗಳನ್ನು ಹಂಚಿಕೊಂಡು ಗ್ರಾಹಕರು ಸದಸ್ಯರು ಆಡಳಿತ ಮಂಡಳಿಯವರು ಸಿಬ್ಬಂದಿಯವರು ಎಲ್ಲರೂ ಸೇರಿ ಒಟ್ಟಾಗಿ ಸಹಕಾರಿಯ ಅಭಿವೃದ್ಧಿಯತ್ತ ಕಾರ್ಯನಿರ್ವಹಿಸೋಣ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ 'ಸೌಹಾರ್ದ ಸಹಕಾರಿ ಸೌಧ'ಕ್ಕೆ ದಿನಾಂಕ 31 ಡಿಸೆಂಬರ್ 2022ರಂದು ಮಾನ್ಯ ಕೇಂದ್ರ ಗೃಹ ಹಾಗೂ ಸಹಕಾರ ಸಚಿವರಾದ ಶ್ರೀ ಅಮಿತ್ ಶಾರವರು ಭೇಟಿ ನೀಡಿ, ಸೌಹಾರ್ದ ಸಹಕಾರಿ ಕ್ಷೇತ್ರದ ಚಟುವಟಿಕೆಗಳನ್ನು ಅಧ್ಯಯನ, ಸೌಹಾರ್ದ ಸಹಕಾರಿ ಕ್ಷೇತ್ರದ ಹುಟ್ಟು, ಬೆಳವಣಿಗೆ ಹಾಗೂ ಪ್ರಗತಿಗಳನ್ನು ಮತ್ತು ಸಂಯುಕ್ತ ಸಹಕಾರಿಯ ಹಾಗೂ ಸಮಗ್ರ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯ ವಿವರಗಳನ್ನು ಪಿಪಿಟಿಯ ಮೂಲಕ ಮಾನ್ಯ ಸಚಿವರಿಗೆ ವಿವರಣೆ ನಂತರ ಸಚಿವರು ಮಾತನಾಡಿ ಸೌಹಾರ್ದ ಸಹಕಾರಿಗಳು ವಿಸ್ತೃತ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳಲು ಸಲಹೆ ಇವೆಲ್ಲವೂ ಸಂಯುಕ್ತ ಸಹಕಾರಿಯ ಇತಿಹಾಸದ ಮರೆಯಲಾಗದ ಘಟನಾವಳಿ.

ಶ್ರೀ ಅಮಿತ್ ಶಾರವರು ರಾಷ್ಟ್ರದಲ್ಲಿ ಸಹಕಾರ ಚಳುವಳಿಗೆ ಒಂದು ಉತ್ತಮ ದಿಕ್ಸೂಚಿಯನ್ನು ಸಿದ್ಧಪಡಿಸಲಾಗುತ್ತಿದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಒಂದೇ ಮಾದರಿಯ ಉಪವಿಧಿಗಳು, ಒಂದೇ ಮಾದರಿಯ ಕಾಮನ್ ಸಾಫ್ಟ್‌ವೇರ್, ಗ್ಯಾಸ್ ಏಜೆನ್ಸಿ ಪಡೆಯುವ ಮೂಲಕ ಸಿಲೆಂಡರ್ ವಿತರಿಸಲು ವ್ಯವಸ್ಥೆ, ನೀರು ಸರಬರಾಜು ವ್ಯವಸ್ಥೆ ಹೀಗೆ ಅನೇಕ ಚಟುವಟಿಕೆಗಳನ್ನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಹಮ್ಮಿಕೊಳ್ಳುವ ನಿಟ್ಟಿನಲ್ಲಿ ಕೇಂದ್ರ ಸಹಕಾರ ಸಚಿವಾಲಯ ಕಾರ್ಯನಿರ್ವಹಿಸುತ್ತಿದೆ. ಸಮಗ್ರ ಸಹಕಾರ ಚಳುವಳಿಯ ಅಭಿವೃದ್ಧಿಯ ನೀಲನಕ್ಷೆಯ ಬಗ್ಗೆ ಚಿಂತನೆ ಮಾಡೋಣ, ಸಹಕಾರ ಕ್ಷೇತ್ರವನ್ನು ಪರಿಶುದ್ಧತೆಯತ್ತ ಸಾಗಿಸೋಣ, ಪ್ರತಿಯೊಂದು ಪಂಚಾಯಿತಿಗೆ ಒಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಅವಶ್ಯಕ, ಅದನ್ನು ಕಾರ್ಯಗತ ಮಾಡೋಣ ಎಂದು ತಿಳಿಸಿರುವುದು ಸಹಕಾರಿಗಳಿಗೆ ಉತ್ತಮ ಮಾರ್ಗದರ್ಶನ ಮಾಡಿದಂತಾಗಿದೆ ಎಂದು ನಾನು ಭಾವಿಸುತ್ತೇನೆ. ಕಾರ್ಯಕ್ರಮದಲ್ಲಿ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ, ಮಾನ್ಯ ಸಹಕಾರ ಸಚಿವರಾದ ಶ್ರೀ ಎಸ್.ಟಿ.ಸೋಮಶೇಖರ್, ಮಾನ್ಯ ಉನ್ನತ ಶಿಕ್ಷಣ ಮತ್ತು ಐ.ಟಿ. ಬಿ.ಟಿ. ಹಾಗೂ ಕೌಶಲ್ಯಾಭಿವೃದ್ಧಿ ಸಚಿವರಾದ ಡಾ॥ ಸಿ.ಎನ್.ಅಶ್ವಥನಾರಾಯಣ, ರಾಜ್ಯದ ಮಾನ್ಯ ಗೃಹ ಸಚಿವರಾದ ಶ್ರೀ ಅರಗ ಜ್ಞಾನೇಂದ್ರ, ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರಾದ ಶ್ರೀ ಮುರುಗೇಶ್ ನಿರಾಣಿ, ಮಾನ್ಯ ಸಂಸದರಾದ ಶ್ರೀ ನಳೀನ್‌ಕುಮಾರ್ ಕಟೀಲ್, ಮಾಜಿ ಕೇಂದ್ರ ಸಚಿವರು ಹಾಗೂ ಮಾನ್ಯ ಸಂಸದರಾದ ಶ್ರೀ ಡಿ.ವಿ.ಸದಾನಂದ ಗೌಡ, ಮಾನ್ಯ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಪ್ರಹ್ಲಾದ ಜೋಷಿರವರು ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ ಉಮಾಶಂಕರ ಸಹಕಾರ ಸಂಘಗಳ ನಿಬಂಧಕರಾದ ಕ್ಯಾಪ್ಟನ್ ಡಾ. ರಾಜೇಂದ್ರ ಹಲವು ಗಣ್ಯರು ಹಿರಿಯ ಅಧಿಕಾರಿಗಳು ಭಾಗವಹಿಸಿರುವುದು ಸೌಹಾರ್ದ ಸಹಕಾರಿ ಕ್ಷೇತ್ರದ ಹಾಗೂ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಕಾರ್ಯಕ್ರಮದ ಅಚ್ಚುಕಟ್ಟಾದ ಶಿಸ್ತಿನ ವ್ಯವಸ್ಥೆ ಎಲ್ಲರಿಂದಲೂ ಪ್ರಶಂಸೆಗೆ ಪಾತ್ರರಾಗಿರುವುದು ಶ್ಲಾಘನೀಯ. ಸಹಕರಿಸಿದ ಎಲ್ಲರಿಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಕೃತಜ್ಞತೆಗಳನ್ನು ತಿಳಿಸುತ್ತದೆ.

## ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು

ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು

ಶ್ರೀ ವಿ.ಜೆ. ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ :
080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop

### ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ........................................ 2
ಸಂಪಾದಕೀಯ........................................ 3
ಜ್ಞಾನ ಜ್ಯೋತಿ........................................ 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... ........................................ 05–24,
ಆರ್.ಬಿ.ಐ ಸುತ್ತೋಲೆ ........................................ 25

**ಲೇಖನಗಳು :**

ಸಹಕಾರ ಸಂಸ್ಥೆಗಳಲ್ಲಿ ಹಣಕಾಸು ನಿರ್ವಹಣೆ ..... ........................................ 30–33
21ನೇ ತಂಡದ ವ್ಯಕ್ತಿತ್ವ ವಿಕಸನ ತರಬೇತಿಯ ಅಧ್ಯಯನ ಪ್ರವಾಸ ಅನುಭವ ............ 35–37
ಎಳ್ಳು ಬೆಲ್ಲ ಸಕ್ಕರೆ ಅಚ್ಚು, ಸಹಿ ಹಂಚುವ ಸಂಕ್ರಾಂತಿ ........................................ 39

# ಸಂಪಾದಕೀಯ

## ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ವಾರ್ಷಿಕ ಸಭೆ : ಸೌಹಾರ್ದ ಸಹಕಾರಿಗಳ ಗುಣಮಟ್ಟ ಸುಧಾರಣೆಗೆ ಆದ್ಯತೆ ಇರಲಿ

ಪ್ರತಿ ವರ್ಷದಂತೆ ಈ ಬಾರಿಯೂ ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕ ವಾರ್ಷಿಕ ಸಭೆಗಳನ್ನು ರಾಜ್ಯಾದ್ಯಂತ ಡಿಸೆಂಬರ್ 2022 ಮಾಹೆಯಲ್ಲಿ ಬೆಂಗಳೂರು ವಿಭಾಗದಲ್ಲಿ 8, ಮೈಸೂರು ವಿಭಾಗದಲ್ಲಿ 12, ಬೆಳಗಾವಿ ವಿಭಾಗದಲ್ಲಿ 11 ಹಾಗೂ ಕಲಬುರಗಿ ವಿಭಾಗದಲ್ಲಿ 9 ಒಟ್ಟಾರೆ 40 ಸ್ಥಳಗಳಲ್ಲಿ ಸಭೆಗಳನ್ನು ಏರ್ಪಡಿಸಲಾಗಿತ್ತು. ಉದ್ದೇಶ ಕೇವಲ ಸಭೆಗಳನ್ನು ನಡೆಸುವುದಲ್ಲ. ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ರಾಜ್ಯದ ಸೌಹಾರ್ದ ಸಹಕಾರಿ ತನ್ನ ಉತ್ತಮ ಗುಣಮಟ್ಟವನ್ನು ಕಾಪಾಡಿಕೊಂಡು ಮುಂದೆ ಸಾಗಬೇಕಿದೆ. ಸೌಹಾರ್ದ ಸಹಕಾರಿಗಳ ಮುಖ್ಯ ಕಾರ್ಯನಿರ್ವಾಹಕರ ಪ್ರಮುಖ ಜವಾಬ್ದಾರಿಗಳನ್ನು ಪುನರ್‌ಮನನ ಮಾಡುವುದರ ಜೊತೆಗೆ ಶಾಸನಾತ್ಮಕ ಕಾರ್ಯಗಳನ್ನು ಮತ್ತೊಮ್ಮೆ ಮೆಲುಕು ಹಾಕುವ, ಸೌಹಾರ್ದ ಸಹಕಾರಿಗಳ ಆರ್ಥಿಕ ಸಬಲತೆಯ ಮಾನದಂಡಗಳ ವಿವರಣೆ ನೀಡುವುದು, ಸೌಹಾರ್ದ ಸಹಕಾರಿಗಳ ಹಣಕಾಸಿನ ನಿರ್ವಹಣೆಯ ಮಹತ್ವ ಮತ್ತು ಸಂಯುಕ್ತ ಸಹಕಾರಿಯ ಪಾವತಿಗಳನ್ನು "ಇಜೀ ಪೇ" ಮೂಲಕ ಹೇಗೆ ಪಾವತಿಸಬೇಕು ತಾಂತ್ರಿಕತೆಯನ್ನು ಹೇಗೆ ರೂಢಿಸಿಕೊಳ್ಳಬೇಕು ಎಂಬ ಬಗ್ಗೆ ವಿಶೇಷ ಮಾಹಿತಿಯನ್ನು ನೀಡುವುದಾಗಿತ್ತು. ಸಂಯುಕ್ತ ಸಹಕಾರಿಯ ಅನುಭವಿ ಅಧಿಕಾರಿಗಳ ಜೊತೆಗೆ ಚಾರ್ಟೆರ್ಡ ಅಕೌಂಟೆಂಟರುಗಳಿಂದ ಹಾಗೂ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿಗಳನ್ನು ಕೊಡಿಸುವ ಪ್ರಯತ್ನ ಮಾಡಿರುವುದನ್ನು ಸೌಹಾರ್ದ ಸಹಕಾರಿಗಳು ಗಮನಿಸಬೇಕು.

ಸೌಹಾರ್ದ ಸಹಕಾರಿ ಕ್ಷೇತ್ರದ ಸೇನಾನಿಗಳೆಂದು ಕರೆಯಲ್ಪಡುವ ಮುಖ್ಯ ಕಾರ್ಯನಿರ್ವಾಹಕರು ಪ್ರತಿ ವರ್ಷಕ್ಕಿಂತಲೂ ಈ ಬಾರಿಯ ಸಭೆ ಹೆಚ್ಚಿನ ಮಹತ್ವವನ್ನು ನೀಡಬೇಕಿದೆ. ರಾಜ್ಯದ ಕೆಲವೇ ಕೆಲವು ಸಹಕಾರಿಗಳು ತಮ್ಮ ಠೇವಣಿದಾರರಿಗೆ ಸದಸ್ಯರಿಗೆ ಅವರ ಠೇವಣಿಗಳನ್ನು ಹಿಂದುರುಗಿಸಲು ವಿಫಲವಾಗಿರುವ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳ ಬಗ್ಗೆ ಸರಕಾರ ಹಾಗೂ ಕೆಲವು ಸಹಕಾರಿಗಳು ಅಸಮಾಧಾನ ವ್ಯಕ್ತವಾಗುತ್ತಿರುವುದನ್ನು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಗಂಭೀರವಾಗಿ ಪರಿಗಣಿಸಿದೆ. ಈ ನಿಟ್ಟಿನಲ್ಲಿ ಮುಖ್ಯ ಕಾರ್ಯನಿರ್ವಾಹಕರುಗಳು ತಮ್ಮ ತಮ್ಮ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳಲ್ಲಿ ಉತ್ತಮ ಆಡಳಿತ ವ್ಯವಸ್ಥೆಯ ಜೊತೆಗೆ ಪಾರದರ್ಶತೆಗೆ ವೃತ್ತಿಪರತೆಗೆ ಆದ್ಯತೆ ನೀಡಿ ಸಹಕಾರಿಗಳನ್ನು ಉತ್ತಮ ಆರ್ಥಿಕ ಸಂಘಟನೆಗಳನ್ನಾಗಿಸುವ ಜವಾಬ್ದಾರಿ ನಿಮ್ಮೆಲ್ಲರ ಮೇಲಿದೆ ಈ ಜವಾಬ್ದಾ–ರಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವಲ್ಲಿ ನಿಮಗೆ ನಿರಂತರ ಮಾರ್ಗದರ್ಶನವನ್ನು ಸಂಯುಕ್ತ ಸಹಕಾರಿ ನೀಡುತ್ತಿದೆ. ಅದರ ಸಂಪೂರ್ಣ ಪ್ರಯೋಜನ ಪಡೆಯಬೇಕು. ಸೌಹಾರ್ದ ಸಹಕಾರಿ ಕ್ಷೇತ್ರದ ಪ್ರಗತಿಯಿಂದ ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ವಿಶ್ವಾಸಾರ್ಹತೆ ಹೆಚ್ಚಿಸುವ ಮತ್ತು ಉತ್ತಮ ಗುಣಮಟ್ಟ ಕಾಯ್ದುಕೊಳ್ಳುವ ಗುರುತರ ಜವಾಬ್ದಾರಿ ಮುಖ್ಯಕಾರ್ಯನಿರ್ವಾಹಕರ ಮೇಲಿದೆ ಎಂಬುದನ್ನು ತಿಳಿಸುವ ವಾರ್ಷಿಕ ಸಭೆಗಳನ್ನು ಗಂಭೀರವಾಗಿ ಪರಿಗಣಿಸಿ ಸೌಹಾರ್ದ ಸಹಕಾರಿಗಳ ಸದಸ್ಯರ ಆಡಳಿತ ಮಂಡಳಿಯ ಹಾಗೂ ಸಂಯುಕ್ತ ಸಹಕಾರಿಯ ಆಶಯದಂತೆ ಕಾರ್ಯನಿರ್ವಹಿಸುವ ಮುಖ್ಯ ಕಾರ್ಯನಿರ್ವಾಹಕರು ಸಕಾರಾತ್ಮಕವಾಗಿ ಸ್ಪಂದಿಸುವುದು ಅಗತ್ಯ.



## ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ. ವಿಜಯಪುರ
ಪ್ರವಚನ ಸಂಗ್ರಹ : ಶ್ರೀಮತಿ ಸವಿತ ಎನ್. ಇ.

## "ದೃಷ್ಟಿಯಂತೆ ಸೃಷ್ಟಿ"

ನಮ್ಮ ದೃಷ್ಟಿಯಂತೆ ಸೃಷ್ಟಿ ಕಾಣುವುದು ನಮ್ಮ ದೃಷ್ಟಿ ಬದಲಾದರೆ ಸೃಷ್ಟಿಯು ಬದಲಾಗುವುದು. ಕಲ್ಲನ್ನು ಕಲ್ಲು ಎಂಬಂತೆ ಕಂಡರೆ ಕಲ್ಲು ಕಲ್ಲಾಗಿಯೇ ಉಳಿಯುತ್ತದೆ, ಕಲ್ಲಿಗೊಂದು ರೂಪವನ್ನು ನೀಡಿ ದೇವರೆಂದು ಕಂಡರೆ ಕಲ್ಲು ಸಹ ದೇವರಾಗುತ್ತದೆ. ಅದೇ ರೀತಿಯಲ್ಲಿ ನಾವು ಪ್ರಪಂಚವನ್ನು ಒಳ್ಳೆಯ ದೃಷ್ಟಿಯಿಂದ ಕಾಣಬೇಕು, ಪ್ರಪಂಚವನ್ನು ಅಷ್ಟೇ ಅಲ್ಲ ಪ್ರತಿಯೊಂದು ವಸ್ತು, ವ್ಯಕ್ತಿ, ವಿಷಯ, ವಿಚಾರಗಳ ಜೊತೆಗೆ ಜೀವನದಲ್ಲಿ ಎದುರಾಗುವ ಪರಿಸ್ಥಿತಿಗಳನ್ನು ಸಹ ನಾವೆಲ್ಲರೂ ಒಳ್ಳೆಯ ದೃಷ್ಟಿಯಿಂದಲೇ ಕಾಣಬೇಕೆಂಬುದು ನನ್ನ ಅಭಿಪ್ರಾಯವಾಗಿದೆ. ಒಳಿತು ಕೆಡುಕುಗಳು, ಕಷ್ಟ ಸುಖಗಳು, ನೋವು ನಲಿವುಗಳು ಪ್ರತಿಯೊಬ್ಬರ ಜೀವನದಲ್ಲಿಯೂ ಬಂದು ಹೋಗುತ್ತಿರುತ್ತವೇ, ಇವುಗಳನ್ನು ನಾವು ಬಯಸದೆ ಬರುವ ಅತಿಥಿಗಳಂತೆ ಕಾಣಬೇಕು.

ಒಂದು ವಸ್ತುವನ್ನು ಕೊಳ್ಳುವ ಮುಂಚೆಯೇ, ಅದರ ಬಳಕೆಯ ಬಗ್ಗೆ ಕನಸನ್ನು ಕಾಣುತ್ತೇವೆ ಇಲ್ಲವೇ ಕಲ್ಪನೆ ಮಾಡಿಕೊಳ್ಳುತ್ತೇವೇ. ಆ ವಸ್ತುವನ್ನು ಕೊಂಡುಕೊಂಡ ನಂತರ ಪ್ರಾರಂಭದಲ್ಲಿ ಅತಿಯಾಗಿ ಬಳಕೆ ಸಹ ಮಾಡುತ್ತೇವೆ. ಕೆಲ ಕಾಲದ ನಂತರ ಆ ವಸ್ತುವಿನ ಬಗೆಗಿನ ಆಸಕ್ತಿ ಕಡಿಮೆಯಾಗುತ್ತದೆ, ಅದೇ ರೀತಿಯಲ್ಲಿ ನಾವು ಒಬ್ಬ ವ್ಯಕ್ತಿಯನ್ನು ಪ್ರಾರಂಭದಲ್ಲಿ ಬಹಳವಾಗಿ ನಂಬುತ್ತೇವೆ ನಂತರ ಆ ವ್ಯಕ್ತಿಯ ವ್ಯಕ್ತಿತ್ವದ ಪರಿಚಯವಾಗಿ ಆ ವ್ಯಕ್ತಿಯ ಮೇಲಿನ ನಂಬಿಕೆ ಸಹ ಕಡಿಮೆಯಾಗುತ್ತದೆ. ಹೊಸ ಹೊಸ ವಿಷಯ ವಿಚಾರಗಳನ್ನು ತಿಳಿಯುವಲ್ಲಿಯೂ, ಸಹ ನಾವು ಇದೆ ರೀತಿಯಲ್ಲಿ ವರ್ತಿಸುವ ಮನಸ್ಥಿತಿಯನ್ನು ಹೊಂದಿದ್ದೇವೆ.

ಪರಿಸ್ಥಿತಿಯು ವಸ್ತು, ವ್ಯಕ್ತಿ, ವಿಷಯ, ವಿಚಾರಗಳ ಮೇಲೆ ಪ್ರಭಾವವನ್ನು ಬೀರುತ್ತದೆ. ಏಕೆಂದರೆ ನಮ್ಮಂತೆ ಅವುಗಳು ಸಹ ಪರಿಸ್ಥಿತಿಯ ಕೈಗೊಂಬೆಗಳಾಗಿರುತ್ತವೆ. ನಾವು ಸಮಯ ಸಂದರ್ಭಗಳಿಗೆ ಅನುಸಾರವಾಗಿ ನಮ್ಮ ದೃಷ್ಟಿಯನ್ನು ಬದಲಾಯಿಸುತ್ತಾ ಸಾಗಬೇಕು. ಕಷ್ಟದ ಪರಿಸ್ಥಿತಿ ಬಂದಾಗ ಕುಗ್ಗದೆ ಈ ಪರಿಸ್ಥಿತಿ ಶಾಶ್ವತವಾಗಿ ಇರುವುದಿಲ್ಲ ಎಂಬ ದೃಷ್ಟಿಯಿಂದ ಕಷ್ಟಗಳನ್ನು ಎದುರಿಸಲು ಸಿದ್ದರಾಗಿರಬೇಕು, ಅದನ್ನು ಬಿಟ್ಟು ಅಯ್ಯೋ ನನಗೆ ಕಷ್ಟ ಬಂದಿದೆ ಎಂದು ಇದೆ ಪರಿಸ್ಥಿತಿ ಶಾಶ್ವತವಾಗಿ ಇರುತ್ತದೆ, ಎಂಬ ದೃಷ್ಟಿಯಿಂದ ನೋಡಿದರೆ ಮುಂದೆ ಬರುವ ಸುಖದ ಸಮಯವನ್ನು ಸವಿಯಲು ಆಗುವುದಿಲ್ಲ. ಅದೇ ರೀತಿಯಲ್ಲಿ ಸುಖವು ಬಂದಾಗ ಹಿಗ್ಗಬಾರದು ಏಕೆಂದರೆ ಕಷ್ಟದ ರೀತಿಯಲ್ಲಿ ಸುಖದ ಸಮಯವು ಸಹ ಬದಲಾಗುತ್ತದೆ, ಈ ಜಗತ್ತಿನಲ್ಲಿ ಯಾವುದು ಶಾಶ್ವತವಾಗಿ ಇರುವುದಿಲ್ಲ ಎಂಬ ನೈಜತೆಯನ್ನು ಅರಿತು ಬಾಳುವವರಿಗೆ ಯಾವುದೇ ಪರಿಸ್ಥಿತಿ ಆಗಲಿ ಪರಿಣಾಮವನ್ನು ಬೀರಲು ಸಾಧ್ಯವಿಲ್ಲ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

**ದಾವಾ ದಾಖಲಾತಿಗಳು :** ಒಟ್ಟು ದಾಖಲಾದ ದಾವಾ ಪ್ರಕರಣಗಳ ಒಟ್ಟು 25270 ಆಗಿರುತ್ತದೆ. ಇವುಗಳ ಪೈಕಿ 14,236 ಪ್ರಕರಣಗಳು ಇತ್ಯರ್ಥಗೊಂಡಿವೆ. ವಿಚಾರಣಾ ಹಂತದಲ್ಲಿರುವ ಪ್ರಕರಣಗಳು ಒಟ್ಟು 11,034

**ಡಿಸೆಂಬರ್ ತಿಂಗಳ ಪ್ರಕರಣಗಳು :** ದಾವಾಪ್ರಕರಣ 770 ಇತ್ಯರ್ಥಗೊಂಡ ಪ್ರಕರಣಗಳು 358

**ಅಮಲ್ಜಾರಿ ಪ್ರಕರಣಗಳು :** ಒಟ್ಟು 5,379 ಅಮಲ್ಜಾರಿ ಪ್ರಕರಣಗಳು ದಾಖಲಾಗಿದ್ದು, ಇವುಗಳ ಪೈಕಿ 1018 ಪ್ರಕರಣಗಳು ಇತ್ಯರ್ಥಗೊಂಡಿದ್ದು. 4361 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಸಹಕಾರಿಗಳ ನಿಬಂಧಕರುಗಳ ಕಛೇರಿಗಳಲ್ಲಿ ದಾಖಲಾಗಿದ್ದ 1023 ಅಮಲ್ಜಾರಿ ಪ್ರಕರಣಗಳು ಸೌಹಾರ್ದ ಸಹಕಾರಿಗಳ ನ್ಯಾಯಾಲಯಕ್ಕೆ ವರ್ಗಾವಣೆಯಾಗಿದ್ದು ಇವುಗಳ ಪೈಕಿ 581 ಪ್ರಕರಣಗಳು ಇತ್ಯರ್ಥಗೊಂಡಿದ್ದು 442 ಪ್ರಕರಣಗಳು ಪ್ರಗತಿಯಲ್ಲಿರುತ್ತದೆ. ಡಿಸೆಂಬರ್ ತಿಂಗಳಿನಲ್ಲಿ 47 ಅಮಲ್ಜಾರಿ ಪ್ರಕರಣ ದಾಖಲಾಗಿರುತ್ತವೆ.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಗೆ ಮಾನ್ಯ ಕೇಂದ್ರ ಗೃಹ ಹಾಗೂ ಸಹಕಾರ ಸಚಿವರಾದ ಶ್ರೀ ಅಮಿತ್ ಶಾರವರ ಭೇಟಿ

## ಸೌಹಾರ್ದ ಸಹಕಾರಿಗಳು ಸಹಕಾರ ಕ್ಷೇತ್ರದ ಮುಖ್ಯವಾಹಿನಿಯಲ್ಲಿ ತೊಡಗಿಸಿಕೊಂಡು ವಿಸ್ತೃತ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಸಲಹೆ

### ದೇಶಕ್ಕೊಂದು ಸಹಕಾರ ನೀತಿ – ಶ್ರೀ ಅಮಿತ್ ಶಾ, ಕೇಂದ್ರ ಗೃಹ ಹಾಗೂ ಸಹಕಾರ ಸಚಿವರು.



**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ 'ಸೌಹಾರ್ದ ಸಹಕಾರಿ ಸೌಧ'ಕ್ಕೆ ದಿನಾಂಕ 31 ಡಿಸೆಂಬರ್ 2022ರಂದು ಮಾನ್ಯ ಕೇಂದ್ರ ಗೃಹ ಹಾಗೂ ಸಹಕಾರ ಸಚಿವರಾದ ಶ್ರೀ ಅಮಿತ್ ಶಾರವರು ಭೇಟಿ ನೀಡಿ, ಸೌಹಾರ್ದ ಸಹಕಾರಿ ಕ್ಷೇತ್ರದ ಚಟುವಟಿಕೆಗಳನ್ನು ಅಧ್ಯಯನ ಮಾಡಿದರು. ಸೌಹಾರ್ದ ಸಹಕಾರಿ ಕ್ಷೇತ್ರದ ಹುಟ್ಟು, ಬೆಳವಣಿಗೆ ಹಾಗೂ ಪ್ರಗತಿಗಳನ್ನು ಮತ್ತು ಸಂಯುಕ್ತ ಸಹಕಾರಿಯ ಹಾಗೂ ಸಮಗ್ರ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯ ವಿವರಗಳನ್ನು ಪಿಪಿಟಿಯ ಮೂಲಕ ಮಾನ್ಯ ಸಚಿವರಿಗೆ ವಿವರಿಸಲಾಯಿತು. ಪ್ರಾರಂಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ.ನಂಜನಗೌಡರವರು ಸ್ವಾಗತ ಮತ್ತು ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಅಮಿತ್ ಶಾರವರು ಮಾತನಾಡುತ್ತಾ ರಾಷ್ಟ್ರದಲ್ಲಿ ಸಹಕಾರ ಚಳುವಳಿಗೆ ಒಂದು ಉತ್ತಮ ದಿಕ್ಸೂಚಿಯನ್ನು ಸಿದ್ಧಪಡಿಸಲಾಗುತ್ತಿದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಒಂದೇ ಮಾದರಿಯ ಉಪವಿಧಿಗಳು, ಒಂದೇ ಮಾದರಿಯ ಕಾಮನ್ ಸಾಫ್ಟ್‌ವೇರ್, ಗ್ಯಾಸ್ ಏಜೆನ್ಸಿ ಮೂಲಕ ವಿತರಿಸಲು ವ್ಯವಸ್ಥೆ, ನೀರು ಸರಬರಾಜು ವ್ಯವಸ್ಥೆ ಹೀಗೆ ವಿಸ್ತೃತ ಚಟುವಟಿಕೆಗಳನ್ನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ಹಮ್ಮಿಕೊಳ್ಳುವ ನಿಟ್ಟಿನಲ್ಲಿ ಕೇಂದ್ರ ಸಹಕಾರ ಸಚಿವಾಲಯ ಕಾರ್ಯನಿರ್ವಹಿಸುತ್ತಿದೆ. ಸಮಗ್ರ ಸಹಕಾರ ಚಳುವಳಿಯ ಅಭಿವೃದ್ಧಿಯ ನೀಲನಕ್ಷೆಯ ಬಗ್ಗೆ ಚಿಂತನೆ ಮಾಡೋಣ, ಸಹಕಾರ ಕ್ಷೇತ್ರವನ್ನು ಪರಿಶುದ್ಧತೆಯತ್ತ ಸಾಗಿಸೋಣ, ಪ್ರತಿಯೊಂದು ಪಂಚಾಯಿತಿಗೆ ಒಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಅವಶ್ಯಕ, ಅದನ್ನು ಕಾರ್ಯಗತ ಮಾಡೋಣ ಎಂದು ತಿಳಿಸಿದರು.

ಸೌಹಾರ್ದ ಸಹಕಾರಿಗಳ ಆದಾಯ ತೆರಿಗೆ ಸಡಲಿಕೆ ವಿಷಯಗಳಿಗೆ ಸಂಬಂಧಿಸಿದಂತೆ ಮನವಿ ಪತ್ರಗಳನ್ನು ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ, ಮಾನ್ಯ ಸಹಕಾರ ಸಚಿವರಾದ ಶ್ರೀ ಎಸ್.ಟಿ.ಸೋಮಶೇಖರ್, ಮಾನ್ಯ ಉನ್ನತ ಶಿಕ್ಷಣ ಮತ್ತು ಐ.ಟಿ. ಬಿ.ಟಿ. ಹಾಗೂ ಕೌಶಲ್ಯಾಭಿವೃದ್ಧಿ ಸಚಿವರಾದ ಡಾ॥ ಸಿ.ಎನ್.ಅಶ್ವಥನಾರಾಯಣ, ರಾಜ್ಯದ ಮಾನ್ಯ ಗೃಹ ಸಚಿವರಾದ ಶ್ರೀ ಅರಗ ಜ್ಞಾನೇಂದ್ರ, ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವರಾದ ಶ್ರೀ ಮುರುಗೇಶ್ ನಿರಾಣಿ, ಮಾನ್ಯ ಸಂಸದರಾದ ಶ್ರೀ ನಳೀನ್‌ಕುಮಾರ್ ಕಟೀಲ್, ಮಾಜಿ ಕೇಂದ್ರ ಸಚಿವರು ಹಾಗೂ ಮಾನ್ಯ ಸಂಸದರಾದ ಶ್ರೀ ಡಿ.ವಿ.ಸದಾನಂದ ಗೌಡ, ಮಾನ್ಯ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಪ್ರಹ್ಲಾದ ಜೋಷಿರವರು ಉಪಸ್ಥಿತರಿದ್ದರು.

ಮಾನ್ಯ ಸಹಕಾರ ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಉಮಾಶಂಕರ್ ಐಎಎಸ್, ಮಾನ್ಯ ಸಹಕಾರಿಗಳ ನಿಬಂಧಕರಾದ ಕ್ಯಾಪ್ಟನ್ ಡಾ. ರಾಜೇಂದ್ರ ಐಎಎಸ್, ಸಹಕಾರ ಇಲಾಖೆಯ ಹಿರಿಯ ಅಧಿಕಾರಿಗಳು, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳು, ಸಂಯುಕ್ತ ಸಹಕಾರಿಯ ಮಾನ್ಯ ನಿಕಟಪೂರ್ವ ಅಧ್ಯಕ್ಷರುಗಳಾದ ಶ್ರೀ ಮನೋಹರ ಮಸ್ಕಿ, ಶ್ರೀ ವಿಶ್ವನಾಥ ಚ. ಹಿರೇಮಠ, ಶ್ರೀ ಎಸ್. ಆರ್.ಸತೀಶ್ಚಂದ್ರ, ಶ್ರೀ ಗುರುನಾಥ ಜ್ಯಾಂತಿಕರ, ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ರಾಜ್ಯದ ಸೌಹಾರ್ದ ಸಹಕಾರಿ ಒಕ್ಕೂಟಗಳ ಅಧ್ಯಕ್ಷರುಗಳು, ಸಹಕಾರ ಭಾರತಿಯ ಮಾನ್ಯ ನಿಕಟ ಪೂರ್ವ ಕೇಂದ್ರ ಅಧ್ಯಕ್ಷರಾದ ಶ್ರೀ ರಮೇಶ್ ವೈದ್ಯ, ಕರ್ನಾಟಕ ಸಹಕಾರ ಭಾರತಿಯ ಮಾನ್ಯ ಅಧ್ಯಕ್ಷರಾದ ಶ್ರೀ ರಾಜಶೇಖರ್ ಶೀಲವಂತ್ ಇವರುಗಳು ಭಾಗವಹಿಸಿದ್ದರು.

ಕಾರ್ಯಕ್ರಮದ ನಿರೂಪಣೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ನಡೆಸಿಕೊಟ್ಟರು.



ಪಿ.ಪಿ.ಟಿ ಮೂಲಕ ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳನ್ನು ವೀಕ್ಷಿಸಿದ ಕೇಂದ್ರ ಗೃಹ ಸಚಿವರು, ಮುಖ್ಯಮಂತ್ರಿಗಳು, ಸಂಸದರು, ಸಚಿವರುಗಳು.

## ಮುಖ್ಯಮಂತ್ರಿ ಶ್ರೀ ಬಸವರಾಜ ಬೊಮ್ಮಾಯಿ ಹಾಗೂ ಸಹಕಾರಿ ಸಚಿವರಾದ ಶ್ರೀ ಎಸ್. ಟಿ. ಸೋಮಶೇಖರ ಇವರಿಂದ ಸಂಯುಕ್ತ ಸಹಕಾರಿಯ ಕ್ಯಾಲೆಂಡರ್ ಹಾಗೂ ಡೈರಿ ಬಿಡುಗಡೆ





**ಬೆಳಗಾವಿ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ 2023ರ ಕ್ಯಾಲೆಂಡರ್ ಹಾಗೂ ಡೈರಿಯನ್ನು ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಯಿಯವರು ಹಾಗೂ ಮಾನ್ಯ ಸಹಕಾರ ಸಚಿವರಾದ ಶ್ರೀ ಎಸ್. ಟಿ ಸೋಮಶೇಖರ್‌ರವರು ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಕೌಶಲ್ಯಾಭಿವೃದ್ಧಿ ಸಚಿವರಾದ ಶ್ರೀ ಅಶ್ವತ್ಥನಾರಾಯಣರವರು, ಮಾಜಿ ಉಪಮುಖ್ಯಮಂತ್ರಿ ಶ್ರೀ ಲಕ್ಷ್ಮಣ ಸವದಿ, ಮಾಜಿ ಮುಖ್ಯ ಸಚೇತಕರಾದ ಶ್ರೀ ಮಹಾಂತೇಶ ಕವಟಗಿಮಠ, ಕೆ.ಎಲ್.ಇ ಸಂಸ್ಥೆಯ ಕಾರ್ಯಾಧ್ಯಕ್ಷರಾದ ಶ್ರೀ ಪ್ರಭಾಕರ ಕೋರೆ ಹಾಗೂ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ, ಶ್ರೀ ಜಗದೀಶ ಕವಟಗಿಮಠ, ಹಾಗೂ ಮಲ್ಲಿಕಾರ್ಜುನ ಹೊರಕೇರಿ, ಹಾಗೂ ಬೆಳಗಾವಿ–ಕಲಬುರಗಿ ಪ್ರಾಂತದ ಟಾಸ್ಕ್ ಫೋರ್ಸ್ ವಿಭಾಗದ ಮುಖ್ಯಸ್ಥರಾದ ಶ್ರೀ ಶ್ರೀಕಾಂತ ಬರುವೆ ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ ಹೊಂಗಲ್, ಮುಂತಾದವರು ಉಪಸ್ಥಿತರಿದ್ದರು.

## ಸಹಕಾರ ಮತ್ತು ಬ್ಯಾಂಕಿಂಗ್ ಮ್ಯಾನೇಜ್ ಮೆಂಟ್ ಡಿಪ್ಲೋಮಾ ಕೋರ್ಸ್ ನಡೆಸಲು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಹಾಗೂ ಸಂಯುಕ್ತ ಸಹಕಾರಿ ನಡುವೆ ಒಡಂಬಡಿಕೆ




ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವ ವಿದ್ಯಾಲಯ, ಗದಗ ಇವರ ಸಂಯುಕ್ತ ಆಶ್ರಯದಲ್ಲಿ ಸಹಕಾರ ಮತ್ತು ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ (Diploma in Co-operation and Banking Management) ನ ಕೋರ್ಸ್‌ನ್ನು ನಡೆಸುವ ಬಗ್ಗೆ ದಿನಾಂಕ 05.01.2023ರಂದು ವಿಶ್ವವಿದ್ಯಾಲಯದ ರೈತ ಭವನದ ಸಭಾಂಗಣದಲ್ಲಿ ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೋ. ಬಸವರಾಜ ಲಕ್ಕಣ್ಣವರ ಮತ್ತು ಸೌಹಾರ್ದ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ರವರು ಒಡಂಬಡಿಕೆಗೆ ಸಹಿ ಹಾಕಿದರು. ಸಮಾರಂಭದಲ್ಲಿ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ನಾಗರಾಜ ದೇಶಪಾಂಡೆರವರು, ಕುಲಪತಿಗಳಾದ ಶ್ರೀ ವಿಷ್ಣುಕಾಂತ ಚಟಪಲ್ಲಿಯವರು, ಪ್ರೋ ಎಸ್.ಎಸ್ ಹೂಗಾರರವರು ಶೈಕ್ಷಣಿಕ ಪರಿಷತ್ ಸದಸ್ಯ, ಕೆಎಸ್‌ಆರ್‌ಪಿಆರ್‌ಯು, ಗದಗ, ಸೌಹಾರ್ದ ಸಂಯುಕ್ತ ಸಹಕಾರಿಯ ಉಪ ಪ್ರಧಾನ ವ್ಯವಸ್ಥಾಪಕರಾದ ಶ್ರೀ ರಘುನಂದನ್ ಕೆ, ತರಬೇತಿ ಅಧಿಕಾರಿಯಾದ ಶ್ರೀ ವಿ ಜೆ ಕಾರಕೂನ, ಡಾ. ಅಭಯಕುಮಾರ ಗಸ್ತಿ ಮುಂತಾದವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಕುಲಪತಿಗಳಾದ ಶ್ರೀ ವಿಷ್ಣುಕಾಂತ ಚಟಪಲ್ಲಿಯವರು ಮಾತನಾಡಿ ಸಹಕಾರ ಕ್ಷೇತ್ರ ದಿಂದ ಗ್ರಾಮೀಣ ಅಭಿವೃದ್ಧಿ ಸಾಧ್ಯ. ತರಬೇತಿ ಪಡೆದ ಕೌಶಲ್ಯವನ್ನು ಹೊಂದಿರುವ ಸ್ಪರ್ಧಾತ್ಮಕ ಮಾನವ ಸಂಪನ್ಮೂಲ ಸಹಕಾರ ಕ್ಷೇತ್ರಕ್ಕೆ ಇಂದು ಅಗತ್ಯ ಇದೆ. ಈ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿಯೊಂದಿಗೆ ಶಿಕ್ಷಣ ಕೋರ್ಸ್‌ನ್ನು ಆರಂಭಿಸುವ ಮೂಲಕ ಸಹಕಾರ ಕ್ಷೇತ್ರದಲ್ಲಿ ವಿಶ್ವವಿದ್ಯಾಲಯವನ್ನು

ತೊಡಗಿಸಿಕೊಳ್ಳುವಿಕೆಯ ಮೂಲಕ ಹೊಸ ಆಯಾಮವನ್ನು ಇಂದು ತೆರೆಯಲಾಗಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಇವರು ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಕುರಿತು ಮಾತನಾಡಿ ವಿಶ್ವವಿದ್ಯಾಲಯದ ಸಹಭಾಗಿತ್ವದಲ್ಲಿ "Diploma in Cooperation and Banking Management" ಕೋರ್ಸ್ ನಡೆಸುವುದರಿಂದ ಪ್ರಮಾಣ ಪತ್ರದ ಮಹತ್ವ ಹಾಗೂ ಸಹಕಾರಿ ಹಿರಿಮೆ ಹೆಚ್ಚಾಗುತ್ತಿದೆ. ಹಾಗೂ ಈ ಕೋರ್ಸ್‌ನ ಅನುಷ್ಠಾನಕ್ಕೆ ಇಂದು ಒಪ್ಪಂದದ ಮೂಲಕ ಚಾಲನೆ ನೀಡಿರುವುದು ಸೌಹಾರ್ದ ಸಹಕಾರ ಕ್ಷೇತ್ರಕ್ಕೆ ಗರಿಮೆ ತಂದಿದೆ ಎಂದರು.

ಪ್ರೋ. ಬಸವರಾಜ, ಎಲ್. ಲಕ್ಕಣ್ಣವರ, ಕುಲಸಚಿವರು, ಕ.ರಾ.ಗ್ರಾ. ಮತ್ತು ಪಂ.ರಾ.ವಿ.ವಿ. ಗದಗ ಇವರು ಸ್ವಾಗತ ಕೋರಿದರು. ಡಾ. ಅಭಯಕುಮಾರ ಗಸ್ತಿ, ಸಂಯೋಜಕರು, ಕ.ರಾ.ಗ್ರಾ. ಮತ್ತು ಪಂ.ರಾ.ವಿ.ವಿ. ಗದಗ ಇವರು ಈ ಕೋರ್ಸನ ಸಂಯೋಜಕರಾಗಿ ಈ ಒಪ್ಪಂದಕ್ಕೆ ಬೇಕಾದ ಅನುಕೂಲತೆಗಳನ್ನು ಹಾಗೂ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲು ಸಹಕರಿಸಿ ಸದರಿ ಸಮಾರಂಭದ ವಂದನಾರ್ಪಣೆಯನ್ನು ನೆರವೇರಿಸಿದರು.

## ಸಹಕಾರ ಹಾಗೂ ಬ್ಯಾಂಕಿಂಗ್ ಮೆನೆಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ ಪ್ರವೇಶಕ್ಕೆ ನೋಂದಾವಣಿ

## Admission Notice for the Diploma in Cooperation and Banking Management Course.

**ಆತ್ಮೀಯ ಸಹಕಾರಿ ಬಂಧುಗಳೇ,**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗದಗ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಜಂಟಿಯಾಗಿ ಸಹಕಾರ ಹಾಗೂ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಕೋರ್ಸ್‌ನ ಒಂದನೇ ತಂಡವು ಇದೇ ಜನವರಿ 2023 ರಿಂದ ಪ್ರಾರಂಭವಾಗಲಿದೆ.

ಈ ತಂಡಕ್ಕೆ ಸಹಕಾರಿ ಸದಸ್ಯರು, ಸಹಕಾರ ಸಂಘಗಳ ಸಿಬ್ಬಂದಿಯವರು, ಯುವಕರು, ಪ್ರವೇಶ ಪಡೆಯಬಹುದಾಗಿದೆ. ಈ ಡಿಪ್ಲೋಮಾ ಕೋರ್ಸ್ 2 ಸೆಮಿಸ್ಟರ್‌ದ್ದಾಗಿರುತ್ತದೆ. 6 ವಿಷಯಗಳ ಪಠ್ಯಕ್ರಮ ಹಾಗೂ 2 ವಿಷಯಗಳು ಪ್ರಾಯೋಗಿಕವಾಗಿದ್ದು ಒಟ್ಟಾರೆ 8 ವಿಷಯಗಳದ್ದಾಗಿದೆ.

ಈ ಕೋರ್ಸಿಗೆ ಪ್ರವೇಶ ಪಡೆಯಲು ರೂ. 8500/– ಶುಲ್ಕವನ್ನು Finance Officer, KSRDPR University, Gadag ಹೆಸರಿಗೆ ಡಿ.ಡಿ ಯೊಂದಿಗೆ ಪ್ರವೇಶ ಅರ್ಜಿಯನ್ನು ದಿನಾಂಕ 25.01.2023 ರೊಳಗಾಗಿ **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು, ಸೌಹಾರ್ದ ಸಹಕಾರ ಸೌಧ, 17–18ನೇ ಅಡ್ಡ ರಸ್ತೆ ಮಧ್ಯೆ, ಮಾರ್ಗೋಸ ರಸ್ತೆ, ಬೆಂಗಳೂರು – 560 055** ವಿಳಾಸಕ್ಕೆ ಕಳುಹಿಸುವುದು. ಡಿಸಿಬಿಎಮ್ ಕೋರ್ಸಿನ ವಿವರ ಹಾಗೂ ಅರ್ಜಿಗಳನ್ನು ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.souharda.coop ಹಾಗೂ www.ksrdpru.ac.in ನಲ್ಲಿ ಪ್ರಕಟಿಸಲಾಗಿದೆ.

**ಕೋರ್ಸಿಗೆ ಪ್ರವೇಶಕ್ಕೆ ವಿದ್ಯಾರ್ಹತೆ :**

- **ಸಹಕಾರ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಪಿಯುಸಿ ಆಗಿರಬೇಕು ಅಥವಾ ಎಸ್.ಎಸ್.ಎಲ್.ಸಿ ವಿದ್ಯಾರ್ಹತೆ ಯೊಂದಿಗೆ ಸಹಕಾರಿ ಸಂಸ್ಥೆಗಳಲ್ಲಿ 3 ವರ್ಷದ ಅನುಭವ ವಿರಬೇಕು.**
- **ಸಹಕಾರಿಗಳಿಗೆ, ಯುವಕರಿಗೆ, ಸಿಬ್ಬಂದಿಯೇತರಿಗೆ ಪಿ.ಯು.ಸಿ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು.**

**ವಂದನೆಗಳೊಂದಿಗೆ,**

ಸಹಿ/–
**(ಶರಣಗೌಡ ಜಿ. ಪಾಟೀಲ)**
**ವ್ಯವಸ್ಥಾಪಕ ನಿರ್ದೇಶಕರು**

# ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ಕುಪ್ಪಳ್ಳಿಯಲ್ಲಿ ಏರ್ಪಡಿಸಿದ್ದ 21ನೇ ತಂಡದ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಮುಕ್ತಾಯ

ದಿನಾಂಕ 08.12.2022 ರಿಂದ 17.12.2022 ರ ವರೆಗೆ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ರಾಷ್ಟ್ರಕವಿ ಕುವೆಂಪುರವರ ಶತಮಾನೋತ್ಸವ ಭವನ ಕುಪ್ಪಳ್ಳಿಯಲ್ಲಿ ರಾಜ್ಯದ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ಏರ್ಪಡಿಸಿದ್ದ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮ ದಿನಾಂಕ 17.12.2022 ರಂದು ಸಮಾರೋಪ ಕಾರ್ಯಕ್ರಮದೊಂದಿಗೆ ಮುಕ್ತಾಯವಾಯಿತು.

## ಉದ್ಘಾಟನಾ ಕಾರ್ಯಕ್ರಮ






## ಸಿಬ್ಬಂದಿಯ ಕ್ಷಮತೆ ಹೆಚ್ಚಿಸಲು ಸಹಕಾರಿ : ಶ್ರೀ ಚೆನ್ನವೀರಪ್ಪ

ಕಾರ್ಯಕ್ರಮದ ಉದ್ಘಾಟಕರಾಗಿ ಶಿವಮೊಗ್ಗ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಚೆನ್ನವೀರಪ್ಪನವರು ಆಗಮಿಸಿದ್ದರು. ಕಾರ್ಯಕ್ರಮದ ಉದ್ಘಾಟನೆ ಮಾಡಿ ಮಾತನಾಡಿದ ಶ್ರೀಯುತರು ವ್ಯಕ್ತಿತ್ವ ವಿಕಸನ ತರಬೇತಿ ಅತ್ಯಂತ ಅವಶ್ಯಕ. ಒಂದು ಸಂಸ್ಥೆಯ ಅಭಿವೃದ್ಧಿ ವಿಶೇಷವಾಗಿ ಸಿಬ್ಬಂದಿಯ ಕ್ಷಮತೆಯನ್ನು ಅವಲಂಬಿಸುತ್ತದೆ. ಸಿಬ್ಬಂದಿಯವರು ಕ್ರೀಯಾಶೀಲರಾಗಿರುವುದು ಸಂಸ್ಥೆಯ ಆರೋಗ್ಯ ಸೂಚಕವಾಗಿರುತ್ತದೆ. ಆದ್ದರಿಂದ ಸಿಬ್ಬಂದಿಯವರಿಗೆ ಇಂತಹ ತರಬೇತಿ ಕಾರ್ಯಕ್ರಮಗಳು ಅಗತ್ಯ ಎಂದು ತಿಳಿಸಿದರು. ಪ್ರಾರಂಭದಲ್ಲಿ ಶಿಬಿರಾರ್ಥಿ ಶ್ರೀಮತಿ ಕಾವೇರಿಯವರು ಪ್ರಾರ್ಥನೆ ಮಾಡಿದ ನಂತರ ಸ್ವಾಗತ ಕಾರ್ಯಕ್ರಮದ ಬಳಿಕ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲರವರಿಂದ ಪ್ರಾಸ್ತಾವಿಕ ನೆರವೇರಿತು.

## ತರಬೇತಿ ವ್ಯಕ್ತಿತ್ವ ವಿಕಸನಕ್ಕೆ ಪೂರಕ : ಶ್ರೀ ಶರಣಗೌಡ ಜಿ. ಪಾಟೀಲ



ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಜಿ. ಪಾಟೀಲರವರು ಮಾತನಾಡಿ ಸಂಯುಕ್ತ ಸಹಕಾರಿಯ ವಿವಿಧ ತರಬೇತಿಗಳ ವಿವರ ನೀಡಿದರು ಮತ್ತು ಸಂಯುಕ್ತ ಸಹಕಾರಿಯ ಕಾರ್ಯಕ್ರಮಗಳಲ್ಲಿ ಅತ್ಯಂತ ಪ್ರಮುಖವಾಗಿರುವುದು ಶಿಕ್ಷಣ ಹಾಗೂ ತರಬೇತಿ ಮತ್ತು ಪ್ರಚಾರ. ಈ ವ್ಯವಸ್ಥೆ ಸರಿಯಾಗಿ ಕಾರ್ಯನಿರ್ವಹಿಸಿದರೆ ಮಾತ್ರ ಶಾಸನಗಳು ಶಾಸನಬದ್ಧ ಕಾರ್ಯಗಳು ಸುಗಮವಾಗಿ ನಡೆಯುತ್ತವೆ. ಅಲ್ಲಿರುವ ವ್ಯಕ್ತಿಗಳ ವಿಕಸನವಾಗುತ್ತದೆ. ಆದ್ದರಿಂದ ಈ ವ್ಯಕ್ತಿತ್ವ ವಿಕಸನ ತರಬೇತಿ ಸಿಬ್ಬಂದಿಯ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿದೆ



## ತರಬೇತಿ ಪಡೆದು ಉತ್ತಮ ಸಿಬ್ಬಂದಿಯಾಗಿ ಕಾರ್ಯನಿರ್ವಹಿಸಿ : ಶ್ರೀ ವಾಸುದೇವ, ಸಹಕಾರ ಸಂಘಗಳ ಉಪನಿಬಂಧಕರು

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಶಿವಮೊಗ್ಗ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ವಾಸುದೇವರವರು ಅತ್ಯಂತ ಉನ್ನತ ಮಟ್ಟದ ತರಬೇತಿ ಇದಾಗಿದೆ. ಉತ್ತಮ ವಿಷಯಗಳಿವೆ. ಉತ್ತಮ ಸಂಪನ್ಮೂಲ ವ್ಯಕ್ತಿಗಳನ್ನು ಬರಮಾಡಿಕೊಳ್ಳುತ್ತಿದ್ದಾರೆ. ಉತ್ತಮ ಪರಿಸರವಿದೆ. ತಾವುಗಳೆಲ್ಲ ತರಬೇತಿ ಪಡೆದು ಉತ್ತಮ ಸಿಬ್ಬಂದಿಯಾಗಿ ಕಾರ್ಯನಿರ್ವಹಿಸಿ ಎಂದು ಕರೆನೀಡಿದರು. ಹಾಗೂ ಸರಕಾರ ಪುನರ್ ಪ್ರಾರಂಭಿಸಿರುವ ಯಶಸ್ವಿನಿ ಆರೋಗ್ಯ ರಕ್ಷಣೆ ಯೋಜನೆಗೆ ಅನುಷ್ಠಾನಕ್ಕೆ ಆದ್ಯತೆ ನೀಡಿ ಎಂದು ಮನವಿ ಮಾಡಿದರು. ವಿಕಸನ ತರಬೇತಿ ಸಿಬ್ಬಂದಿಯ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿದೆ



## ಸೌಹಾರ್ದ ಸಹಕಾರಿ ಕ್ಷೇತ್ರದ ಗುಣಮಟ್ಟ ಸುಧಾರಿಸಲು ತರಬೇತಿ ಅಗತ್ಯ:

### ಶ್ರೀ ಎ.ಆರ್ ಪ್ರಸನ್ನಕುಮಾರ, ಉಪಾಧ್ಯಕ್ಷರು, ಸಂಯುಕ್ತ ಸಹಕಾರಿ, ಬೆಂಗಳೂರು

ರಾಜ್ಯದ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿ ಉತ್ತಮ ಆಡಳಿತ ಮಂಡಳಿ ಹಾಗೂ ಸಹಕಾರಿಗಳ ಉತ್ತಮ ಸಿಬ್ಬಂದಿಯವರನ್ನು ಅವಲಂಬಿಸಿರುತ್ತದೆ. ಸಂಯುಕ್ತ ಸಹಕಾರಿಯ ವತಿಯಿಂದ ಈ ಕ್ಷೇತ್ರದ ಪ್ರತಿಯೊಬ್ಬರಿಗೂ ಶಿಕ್ಷಣ ಹಾಗೂ ತರಬೇತಿಯನ್ನು ನೀಡಲಾಗುತ್ತದೆ. ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳು ಕೇವಲ ಉದ್ಘಾಟನೆಯೊಂದಿಗೆ ಮುಕ್ತಾಯವಾಗುವುದಿಲ್ಲ. ಪೂರ್ಣಪ್ರಮಾಣದ ತರಬೇತಿ ಕಾರ್ಯಕ್ರಮಗಳನ್ನೂ ಏರ್ಪಡಿಸುತ್ತ ಬಂದಿದ್ದೇವೆ. ಸಂಯುಕ್ತ ಸಹಕಾರಿಯ ತರಬೇತಿ ಕಾರ್ಯಕ್ರಮಗಳ ಬಗ್ಗೆ ಉತ್ತಮ ಪ್ರತಿಕ್ರಿಯೆ, ಶ್ಲಾಘನೆಗಳು ಇವೆ. ವಿಶೇಷವಾಗಿ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮ 2017ರಲ್ಲಿ ನಿಲ್ಲಿಸಲಾಗಿತ್ತು. ಸೌಹಾರ್ದ ಸಹಕಾರಿಗಳ ಬೇಡಿಕೆಗನುಸಾರವಾಗಿ ನಮ್ಮ ಆಡಳಿತ ಮಂಡಳಿಯವರು ಬಂದ ಮೇಲೆ ಮತ್ತೆ ಈ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದೇವೆ. ಇದಕ್ಕೆ ಒಳ್ಳೆಯ ಪ್ರತಿಕ್ರಿಯೆ ಬಂದಿದೆ. ಉತ್ತಮ ವಿಷಯಗಳನ್ನು ಆಯ್ಕೆ ಮಾಡಿದ್ದೇವೆ. ಉತ್ತಮ ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಇವುಗಳ ಸಂಪೂರ್ಣ ಪ್ರಯೋಜನ ಪಡೆದು ಉತ್ತಮ ಶಿಬಿರಾರ್ಥಿಗಳಾಗಿ. ನಿಮ್ಮ ಸಹಕಾರಿಗಳ ಆಸ್ತಿಯಾಗಿ ಹೊರಹೊಮ್ಮಿ. ಸಹಕಾರಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಿ. ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಯುಕ್ತ ಸಹಕಾರಿ ನಿರ್ದೇಶಕರಾದ ಶ್ರೀ ಸಿ. ಪಿ ವಿಜಯರವರು, ಕುವೆಂಪು ಪ್ರತಿಷ್ಠಾನದ ಕಾರ್ಯದರ್ಶಿ ಶ್ರೀ ಕಡಿದಾಳ ಪ್ರಕಾಶರವರು ಚಿಕ್ಕಮಗಳೂರು ಜಿಲ್ಲಾ ಸಹಕಾರಿ ಯೂನಿಯನ್ನಿನ ಅಧ್ಯಕ್ಷ ಶ್ರೀ ಜಿ.ಎಸ್.ಮಹಾಬಲರವರು, ಶಿಬಿರಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು. ಶ್ರೀ ಉಪಪ್ರಧಾನ ವ್ಯವಸ್ಥಾಪಕರಾದ ರಘುನಂದನರವರು ವಂದನಾರ್ಪಣೆ ಸಲ್ಲಿಸಿದರು. ಶಿಬಿರದಲ್ಲಿ 19 ಜಿಲ್ಲೆಗಳಿಂದ 32 ಸೌಹಾರ್ದ ಸಹಕಾರಿಗಳಿಂದ 51 ಸಿಬ್ಬಂದಿಯವರು ಭಾಗವಹಿಸಿದ್ದರು.

### ಶಿಬಿರದ ಪ್ರತಿದಿನದ ಕಾರ್ಯಕ್ರಮಗಳು

ಪ್ರತಿ ದಿನದ ಶಿಬಿರಾರ್ಥಿಗಳಿಗಾಗಿ ಬೆಳಿಗ್ಗೆ ಯೋಗ ತರಬೇತಿ, ಶಿಬಿರಾರ್ಥಿಗಳಲ್ಲಿ ತಂಡಗಳನ್ನಾಗಿ ವಿಂಗಡಿಸಿ ಪ್ರತಿದಿನದ ವ್ಯವಸ್ಥೆಗಳ, ಸಮಯ ಪಾಲನೆಯ, ಊಟ ಉಪಹಾರ ವ್ಯವಸ್ಥೆಗಳ ಹಾಗು ಸಾಂಸ್ಕೃತಿಕ ಕಾರ್ಯಕ್ರಮಗಳ ವ್ಯವಸ್ಥೆಯ ಜವಾಬ್ದಾರಿಯನ್ನು ನೀಡಲಾಗಿತ್ತು. ಪ್ರತಿದಿನ ಬೆಳಿಗ್ಗೆ ಪ್ರಾರ್ಥನೆ, ಸಹಕಾರ ಗೀತೆ, ಸುವಿಚಾರ, ಮಿಲಿ, ತತ್ರಕ್ಷಣ ಮಿಲಿ ಹಾಗೂ ಅತಿಥಿಗಳಿಗೆ ಸ್ವಾಗತ ಅತಿಥಿಗಳ ಪರಿಚಯ ಕಾರ್ಯಕ್ರಮದ ಜವಾಬ್ದಾರಿಯನ್ನು ನಿರ್ವಹಿಸುವುದಾಗಿತ್ತು. ಹಾಗೇ ಪ್ರತಿ ತಂಡವೂ ಪ್ರತಿದಿನದ ಕಾರ್ಯಕ್ರಮಗಳ ಸಮಗ್ರ ವರದಿಯನ್ನು ಮರುದಿನ ಬೆಳಿಗ್ಗೆ ತರಬೇತಿ ಪ್ರಾರಂಭಕ್ಕೆ ಮೊದಲು ನೀಡುವುದಾಗಿತ್ತು.

### ವಿಷಯಗಳು

ಕಾರ್ಯಕ್ರಮದಲ್ಲಿ ಸಹಕಾರ, ಸಹಕಾರ ಸಂಘ, ಸಹಕಾರ ಚಳುವಳಿ ನಡೆದು ಬಂದದಾರಿ, ಸಹಕಾರ ತತ್ವಗಳು, ಸಹಕಾರ ಕಾಯ್ದೆಗಳು ಸೌಹಾರ್ದ ಸಹಕಾರಿ ಕಾಯದೆ, ಆಡಳಿತ ವ್ಯವಸ್ಥೆ, ಲೆಕ್ಕಪತ್ರ ವ್ಯವಸ್ಥೆ, ಲೆಕ್ಕ ಪರಿಶೋಧನೆ ವ್ಯವಸ್ಥೆ, ಸಭೆಗಳು, ಕ್ರೀಯಾಯೋಜನೆ, ವ್ಯಕ್ತಿತ್ವ ವಿಕಸನಕ್ಕೆ ಪೂರಕ ವಿಷಯಗಳು, ಸಂಯುಕ್ತ ಸಹಕಾರಿ ಕಾರ್ಯಚಟುವಟಿಕೆಗಳು, ಪ್ರಾಯೋಗಿಕಗಳನ್ನು ವ್ಯವಸ್ಥೆಮಾಡಲಾಗಿತ್ತು.

### ಸಂಪನ್ಮೂಲ ವ್ಯಕ್ತಿಗಳು

ಸಂಯುಕ್ತ ಸಹಕಾರಿಯ 14 ಅಧಿಕಾರಿಗಳು ಹಾಗೂ 14 ಜನ ಬಾಹ್ಯ ವಿಷಯ ತಜ್ಞರು ಸೇರಿದಂತೆ ಒಟ್ಟು 28 ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿ ಉಪನ್ಯಾಸಗಳನ್ನು ಹಾಗೂ ಪ್ರಾಯೋಗಿಕಗಳನ್ನು ನೀಡಿದರು.

### ಪ್ರಾಯೋಗಿಕಗಳು

ತರಬೇತಿ ಅವಧಿಯಲ್ಲಿ ಆಡಳಿತ ಮಂಡಳಿ ಸಭೆಗಳನ್ನು ನಡೆಸುವುದು, ವಾರ್ಷಿಕ ಸಾಮಾನ್ಯ ಸಭೆಗಳ ನೋಟೀಸು ಸಿದ್ಧತೆ ಮಾಡುವುದು ಆಡಳಿತ ಮಂಡಳಿ ಸಭೆ ನೋಟೀಸು ಸಿದ್ಧಪಡಿಸುವುದು, ನಡಾವಳಿಗಳನ್ನು ಬರೆಯುವುದು, ಅಂತಿಮ ಲೆಕ್ಕ ಪತ್ರಗಳನ್ನು ಸಿದ್ಧಪಡಿಸುವುದು, ಸ್ವಾಟ್ ಅನಾಲಿಸಿಸ್, ಕ್ರೀಯಾ ಯೋಜನೆ ಸಿದ್ಧಪಡಿಸುವುದು, ಉತ್ತಮ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಾಹಕರ ಜೊತೆಗೆ ಸಂವಾದ ಕಾರ್ಯಕ್ರಮ ಹಾಗೂ ಸಭೆ ಸಮಾರಂಭಗಳ ನಿರ್ವಹಣೆಗಳ ಪ್ರಾಯೋಗಿಕಗಳನ್ನು ನಡೆಸಲಾಯಿತು.

## ಶಿಬಿರಕ್ಕೆ ಭೇಟಿ ಶಿಬಿರಾರ್ಥಿಗಳ ಜೊತೆಗೆ ವಿಚಾರ ವಿನಿಮಯ ಮಾಡಿದ ಗೃಹ ಸಚಿವರು

## ಕ್ರಿಯಾಶೀಲ ವ್ಯಕ್ತಿತ್ವ ನಿರ್ಮಾಣ ತರಬೇತಿಯಿಂದ ಮಾತ್ರ ಸಾಧ್ಯ : ಗೃಹ ಸಚಿವ ಶ್ರೀ ಅರಗ ಜ್ಞಾನೇಂದ್ರ



ಒಂದು ಸಂಸ್ಥೆಯ ಅಥವಾ ವ್ಯವಸ್ಥೆಯ ಉತ್ತಮ ಕಾರ್ಯನಿರ್ವಹಣೆಗೆ ಅಲಿನ ಅರಿತ ಆಡಳಿತ ಮಂಡಳಿಯವರ ಜೊತೆಗೆ ನುರಿತ ಕ್ರಿಯಾಶೀಲ ಸಿಬ್ಬಂದಿಯವರು ಕಾರಣರಾಗುತ್ತಾರೆ. ಆದ್ದರಿಂದ ಕ್ರಿಯಾಶಿಲ ವ್ಯಕ್ತಿತ್ವ ನಿರ್ಮಾಣಕ್ಕೆ ತರಬೇತಿ ಅಗತ್ಯ ಎಂದು ತಿಳಿಸಿ ಸಂಯುಕ್ತ ಸಹಕಾರಿಯವರು ಉತ್ತಮ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದಾರೆ. ಇದರ ಪೂರ್ಣ ಪ್ರಯೋಜನ ಪಡೆದುಕೊಳ್ಳಲು ತಿಳಿಸಿದರು. ಸಹಕಾರಿ ಸಂಸ್ಥೆಗಳ ಉದ್ದೇಶ ಕಾರ್ಯಚಟುವಟಿಕೆಗಳು ಸಮಾಜಮುಖಿಯಾಗಿ ಸಮಾಜದ ಕಟ್ಟ ಕಡೆಯ ವ್ಯಕ್ತಿಗೆ ಪ್ರಯೋಜನ ಸಿಗುವಂತೆ ಸಹಕಾರಿಗಳು ಕಾರ್ಯನಿರ್ವಹಿಸಬೇಕು ಎಂದು ತಿಳಿಸುತ್ತ ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಸರಕಾರ ಬದ್ಧವಾಗಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ತೀರ್ಥಹಳ್ಳಿಯ ಅನೇಕ ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

### ಅಧ್ಯಯನ ಪ್ರವಾಸ

ಶಿಬಿರಾರ್ಥಿಗಳಿಗಾಗಿ ಅಧ್ಯಯನ ಪ್ರವಾಸವನ್ನು ತೀರ್ಥಹಳ್ಳಿ ತಾಲ್ಲೂಕಿನ ಸಮ್ಮಿಲನ ಕೃಷಿಕ ಸಂಸ್ಕರಣ ಸೌಹಾರ್ದ ಸಹಕಾರಿ ನಿ., ಕೋಟೆಗದ್ದೆ, ಹೊಸನಗರ ತಾಲ್ಲೂಕಿನ ಅಮೃತ ದಿನಸಿ ಸೌಹಾರ್ದ ಸಹಕಾರಿ ನಿ., ಗರ್ತಿಗೆರೆ, ಅಮೃತ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಗರ್ತಿಗೆರೆ ತೀರ್ಥಹಳ್ಳಿ ತಾಲ್ಲೂಕಿನ ಶಾರದಾ ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ರಿಪ್ಪನ್ಪೇಟ ಶಾಖೆ ಶೀತಲಾಗಾರ ನಂತರ ಪ್ರಾಥಮಿಕ ಶಾಲಾ ಶಿಕ್ಷಕರ ಸೌಹಾರ್ದ ಸಹಕಾರಿಗಳನ್ನೂ ಭೇಟಿ ಮಾಡಲಾಯಿತು. ಜೊತೆಗೆ ನವಿಲಕಲ್‌ನಲ್ಲಿ ಸೂರ್ಯೋದಯ ವೀಕ್ಷಣೆ ಕವಲೇದುರ್ಗ ಕೋಟೆಗಳಿಗೆ ಭೇಟಿ ಮಾಡಲಾಯಿತು.

### ಸಾಂಸ್ಕೃತಿಕ ಕಾರ್ಯಕ್ರಮಗಳು

ಸಂಯುಕ್ತ ಸಹಕಾರಿಯ ವತಿಯಿಂದ ದಿನಾಂಕ 13-12-2022 ರಂದು ಶಿವಮೊಗ್ಗ ರಂಗಾಯಣ ವತಿಯಿಂದ ಹಕ್ಕಿ ಕಥೆ ಎಂಬ ನಾಟಕವನ್ನು ಪ್ರದರ್ಶನ ವ್ಯವಸ್ಥೆ ಮಾಡಲಾಗಿತ್ತು. ಈ ನಾಟಕವನ್ನು ನೋಡಲು ಸುತ್ತಲಿನ ಹಲವಾರು ಸೌಹಾರ್ದ ಸಹಕಾರಿಗಳ ಸಹಕಾರಿಗಳು ಸೇರಿದಂತೆ 125ಕ್ಕಿಂತಲೂ ಹೆಚ್ಚು ಜನರು ಉಪಸ್ಥಿತರಿದ್ದರು. ದಿನಾಂಕ 15-12-2022 ರಂದು ತೀಥ-ರ್ಹಳ್ಳಿಯ ಒಂದು ತಂಡದಿಂದ ಸುಗಮ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಉಳಿದ ದಿನಗಳಂದು ಶಿಬಿರಾರ್ಥಿಗಳೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವ್ಯವಸ್ಥೆಮಾಡಿದ್ದರು.

### ಪರೀಕ್ಷೆ

10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿಯಲ್ಲಿ ಅಳವಡಿಸಿದ ವಿಷಯಗಳ ಹಾಗೂ ಪ್ರಸ್ತುತ ಪಡಿಸಿದ ಉಪನ್ಯಾಸಗಳ ನಂತರ 10ನೇ ದಿನ 100 ಅಂಕಗಳ ಬಹು ಆಯ್ಕೆಯ ಪರೀಕ್ಷೆಯನ್ನು ಏರ್ಪಡಿಸಲಾಗಿತ್ತು. ಎಲ್ಲ ಶಿಬಿರಾರ್ಥಿಗಳು ಶಿಸ್ತಿನಿಂದ ಉತ್ಸಾಹದಿಂದ ಪರೀಕ್ಷೆಯಲ್ಲಿ ಪಾಲ್ಗೊಂಡರು. ನಂತರ ಮೌಲ್ಯಮಾಪನವನ್ನು ಮಾಡಲಾಗಿದೆ ಎಲ್ಲರೂ ಉತ್ತಮವಾಗಿಯೆ ಅಂಕಗಳನ್ನು ಪಡೆದಿರುತ್ತಾರೆ.

### ಶಿಬಿರಾರ್ಥಿಗಳ ಅನಿಸಿಕೆಗಳು

ಸಮಾರೋಪ ಕಾರ್ಯಕ್ರಮದಲ್ಲಿ ಹಾಗೂ ಅವರಿಗೆ ನೀಡಲಾಗಿದ್ದ ಅನಿಸಿಕೆ ಪತ್ರಗಳಲ್ಲಿ ಈ ತರಬೇತಿ ಕಾರ್ಯಕ್ರಮ ಅತ್ಯಂತ ಉತ್ತಮ ಹಾಗೂ ಉನ್ನತಮಟ್ಟದ್ದು ಹಾಗೂ ವಿಭಿನ್ನ ರೀತಿಯದ್ದಾಗಿತ್ತು. ಶಿಬಿರಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ತುಂಬಾ ಪ್ರಯೋಜನವಾಗಿತ್ತೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇಂತಹ ತರಬೇತಿಗಳನ್ನು ಜಿಲ್ಲಾಮಟ್ಟದಲ್ಲಿಯೂ ಏರ್ಪಡಿಸಬೇಕೆಂದು ಕೋರಿದ್ದಾರೆ.



ಯೋಗ



ತರಬೇತಿ



ಪ್ರಮಾಣ ಪತ್ರ ವಿತರಣೆ

## ಸಮಾರೋಪ ಕಾರ್ಯಕ್ರಮ

ಸಮಾರೋಪ ಕಾರ್ಯಕ್ರಮವನ್ನು ದಿನಾಂಕ 17-12-2022 ರಂದು ಮಧ್ಯಾಹ್ನ 2-30 ಕ್ಕೆ ಏರ್ಪಡಿಸಲಾಗಿತ್ತು. ಸಮಾರಂಭದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಎ. ಆರ್.ಪ್ರಸನ್ನಕುಮಾರರವರು ವಹಿಸಿದ್ದರು. ಕಾರ್ಯಕ್ರಮವನ್ನು ಸಂಪೂರ್ಣವಾಗಿ ಶಿಬಿರಾರ್ಥಿಗಳಿಂದಲೇ ಸಂಘಟಿಸಲಾಯಿತು. ಶಿಬಿರಾರ್ಥಿಗಳಿಂದ ಪ್ರಾರ್ಥನೆ, ಸ್ವಾಗತ ನಂತರ ಶಿಬಿರದ ವರದಿಯನ್ನು ಸಂಯುಕ್ತ ಸಹಕಾರಿಯ ಮೈಸೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರ ಇವರು ನೆರವೇರಿಸಿದರು. ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ಸಂಯುಕ್ತ ಸಹಕಾರಿ ವತಿಯಿಂದ ಒಂದು ಬ್ಯಾಗ್‌ಗಳನ್ನು ವಿತರಿಸಲಾಯಿತು.

### ಪರಿಣಾಮಕಾರಿ ತರಬೇತಿ : ಶ್ರೀ ಮಹೇಶ

ಸಮಾರೋಪ ಭಾಷಣ ಮಾಡಿದ ಮ್ಯಾಕ್ಸ್ ಉಪಾಧ್ಯಕ್ಷರಾದ ಶ್ರೀ ಮಹೇಶರವರು ಸಂಯುಕ್ತ ಸಹಕಾರಿಯ ಈ ತರಬೇತಿ ವ್ಯವಸ್ಥೆಗಳು, ಅಳವಡಿಸಿದ ವಿಷಯಗಳು, ಭಾಗವಹಿಸಿದ ಉಪನ್ಯಾಸಕಾರರು, ಶಿಬಿರಾರ್ಥಿಗಳ ಅಭಿಪ್ರಾಯಗಳು ಅಳವಡಿಸಿದ ಇತರೆ ಚಟುವಟಿಕೆಗಳು ಎಲ್ಲವೂ ಅತ್ಯಂತ ವಿಭಿನ್ನ ಹಾಗೂ ಉತ್ಕೃಷ್ಟವಾಗಿವೆ. ಇದೊಂದು ಅತ್ಯಂತ ಪರಿಣಾಮಕಾರಿಯಾದ ತರಬೇತಿ ಎಂದು ತಿಳಿಸಿದರು.

### ತರಬೇತಿ ಕಾರ್ಯಕ್ರಮಗಳ ಪೂರ್ಣ ಪ್ರಯೋಜನ ಪಡೆದುಕೊಳ್ಳಿ : ಶ್ರೀ ಎ.ಆರ್ ಪ್ರಸನ್ನಕುಮಾರ

ಸಮಾರೋಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ವಿತರಿಸಿದ ನಂತರ ಮಾತನಾಡಿದ ಶ್ರೀ ಪ್ರಸನ್ನಕುಮಾರರವರು ಸಂಯುಕ್ತ ಸಹಕಾರಿಯ ವತಿಯಿಂದ ರಾಜ್ಯದಾದ್ಯಂತ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಸೌಹಾರ್ದ ಸಹಕಾರಿಗಳು ಸಕ್ರೀಯವಾಗಿ ಭಾಗವಹಿಸಿ ತರಬೇತಿ ಕಾರ್ಯಕ್ರಮಗಳ ಪೂರ್ಣ ಪ್ರಯೋಜನ ಪಡೆದುಕೊಳ್ಳಬೇಕು. ತರಬೇತಿ ಕಾರ್ಯಕ್ರಮಗಳಿಂದಲೇ ಈ ಕ್ಷೇತ್ರದ ಅಭಿವೃದ್ಧಿ ಹಾಗೂ ಉತ್ತಮ ಗುಣಮಟ್ಟ ಸಾಧಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಶಿಬಿರಾಥಿಗಳನ್ನು ಕಳುಹಿಸಿಕೊಟ್ಟ ಸೌಹಾರ್ದ ಸಹಕಾರಿಗಳ ಪದಾಧಿಕಾರಿಗಳಿಗೆ ಕೃತಜ್ಞತೆಗಳನ್ನು ತಿಳಿಸಿದರು.

### ನೆನಪಿನ ಕಾಣಿಕೆ

ಶಿಬಿರಾರ್ಥಿಗಳು ತಮ್ಮ 21 ನೇ ತಂಡದ ನೆನಪಿನ ಕಾಣಿಕೆಯನ್ನು ಉಪಾಧ್ಯಕ್ಷರಾದ ಶ್ರೀ ಎ.ಆರ್ ಪ್ರಸನ್ನಕುಮಾರರವರಿಗೆ ನೀಡಿದರು.

### ಬಹುಮಾನಗಳು

- ಉತ್ತಮ ಪ್ರಾರ್ಥನೆ — **ಶ್ರೀ ಸುಮುಖ**
- ಉತ್ತಮ ಸುವಿಚಾರ — **ಶ್ರೀ ಅಭಿಷೇಕ**
- ಉತ್ತಮ ಮಿಲಿ — **ಶ್ರೀ ಮಲ್ಲಿಕಾರ್ಜುನ**
- ಉತ್ತಮ ಇನ್ಸ್ಟಂಟ ಮಿಲಿ — **ಶ್ರೀ ಅನೀಲ ಕುಮಾರ**
- ತಂಡದ ಉತ್ತಮ ವರದಿ — **ಸಹ್ಯಾದ್ರಿ ತಂಡ**
- ಉತ್ತಮ ವ್ಯವಸ್ಥಾಪನಾ ತಂಡ — **ಸಹ್ಯಾದ್ರಿ ತಂಡ**
- ಉತ್ತಮ ಸಮಯ ಪಾಲನೇ ತಂಡ — **ವಿಶ್ವಮಾನವ**
- ಉತ್ತಮ ಊಟೋಪಚಾರ ತಂಡ — **ಅಮೃತಯಾನ**
- ಉತ್ತಮ ಮನರಂಜನಾ ತಂಡ — **ಮಲ್ನಾಡು**

### ಉತ್ತಮ ಶಿಬಿರಾರ್ಥಿಗಳು

- ಪುರುಷ ವಿಭಾಗ : **ಶ್ರೀ ಉಮೇಶ ಮತ್ತು ಶ್ರೀ ವಿಜಯಕುಮಾರ**
- ಮಹಿಳಾ ವಿಭಾಗ : **ಶ್ರೀಮತಿ ಭಾರತಿ ಮತ್ತು ಶ್ರೀಮತಿ ಕಾವೇರಿ**

### ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆದ ಶಿಬಿರಾರ್ಥಿಗಳು

| ಕ್ರ. ಸಂ | ಹೆಸರು | ಪಡೆದ ಅಂಕಗಳು |
|---|---|---|
| | **ಸಂಯುಕ್ತ ಸಹಕಾರಿ ಶಿಬಿರಾರ್ಥಿಗಳು** | |
| 1 | ಶ್ರೀ ಹೆಚ್.ಎಮ್. ಕುಶಾಲ | 90 |
| 2 | ಶ್ರೀಮತಿ ನವ್ಯ ಹೆಚ್.ಎಸ್. | 89 |
| | **ಸೌಹಾರ್ದ ಸಹಕಾರಿಗಳ ಶಿಬಿರಾರ್ಥಿಗಳು.** | |
| 1 | ಶ್ರೀ ಬಸವರಾಜಗೌಡ. | 81 |
| 2 | ಶ್ರೀ ವಿವೇಕ ಭಟ್ಟ | 80 |
| 3 | ಶ್ರೀ ಅರುಣಾ. ಕೆ.. ಸಿ. | 79 |
| 4 | ಶ್ರೀ ಎಮ್. ಬಿ. ಪೋಲೀಸಪಾಟೀಲ್ | 79 |
| 5 | ಶ್ರೀ ಅಭಿಷೇಕ ಎಸ್. ಗಾಣಿಗ | 79 |
| 6 | ಶ್ರೀಮತಿ ಭಾರತಿ ಆರ್ | 79 |



21ನೇ ತಂಡದ ಶಿಬಿರಾರ್ಥಿ

# ಪ್ರವೇಶ ತರಬೇತಿ ಕಾರ್ಯಕ್ರಮ



**ದಕ್ಷಿಣ ಕನ್ನಡ** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತೀಯ ಕಛೇರಿ ಇದರ ವತಿಯಿಂದ ಉಡುಪಿ, ದಕ್ಷಿಣಕನ್ನಡ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ 2019–20ರಿಂದ ನೂತನವಾಗಿ ನೋಂದಣಿಯಾಗಿರುವ ಸೌಹಾರ್ದ ಸಹಕಾರಿಗಳಿಗಾಗಿ ದಿನಾಂಕ: 10.12.2022 ಹಾಗೂ 11.12.2022ರಂದು ಎರಡು ದಿನಗಳ ಪ್ರವೇಶ ತರಬೇತಿಯನ್ನು ಸಿ.ಒ.ಡಿ.ಪಿ ತರಬೇತಿ ಕೇಂದ್ರದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ನಂತರ ಮಾತನಾಡಿದ ಉಡುಪಿ ಜಿಲ್ಲಾ ಸೌಹಾರ್ದ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಗನ್ನಾಥ ಶೆಟ್ಟಿ ರವರು ಮೈಸೂರು ಪ್ರಾಂತದಲ್ಲಿ ಸೌಹಾರ್ದ ಚಳುವಳಿ ಬೆಳವಣಿಗೆಗೆ ಪೂರಕ ವಾತಾವರಣ ನಿರ್ಮಾಣವಾಗುತ್ತಿದ್ದು ತಮ್ಮೆಲ್ಲರ ಸಹಕಾರಿ ಅಗತ್ಯವಾಗಿದೆ ಎಂದು ತಿಳಿಸಿದರು. ನಂತರ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್ ಕೆ ರವರು ಮಾತನಾಡಿ ಸೌಹಾರ್ದ ಸಹಕಾರಿ ಕ್ಷೇತ್ರವು ಸಾಮಾಜಿಕವಾಗಿ ಕೆಲಸಗಳನ್ನು ಮಾಡಲು ಉತ್ತಮ ಅವಕಾಶವನ್ನು ನೀಡಿದೆ ಮತ್ತು ಸದಸ್ಯರಿಗೆ ಅವಶ್ಯವಿರುವ ಯೋಜನೆಗಳನ್ನು ರೂಪಿಸಿ ತಮ್ಮ ಸಹಕಾರಿ ಮೂಲಕ ಸದಸ್ಯರಿಗೆ ತಲುಪಿಸುವುದು ಪ್ರತಿ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರ ಕರ್ತವ್ಯವಾಗಿರುತ್ತದೆ ಎಂದು ತಿಳಿಸಿದರು ಜಿಲ್ಲಾ ಸಂಯೋಜಕರಾದ ಶ್ರೀ ವಿಜಯ್ ಬಿ.ಎಸ್., ಇವರು ಕಾರ್ಯಕ್ರಮ ನಿರೂಪಿಸಿ, ವಂದನಾರ್ಪಣೆ ನೆರವೇರಿಸಿದರು. ಸದರಿ ಕಾರ್ಯಗಾರಕ್ಕೆ ಮೂರು ಜಿಲ್ಲೆಗಳಿಂದ 74 ಪ್ರತಿನಿಧಿಗಳು ಭಾಗವಹಿಸಿದ್ದರು.



**ಧಾರವಾಡ** : ದಿನಾಂಕ 26 ನವೆಂಬರ್ 2022 ರಂದು ಕೆ.ಸಿ.ಸಿ ಬ್ಯಾಂಕ ಹುಬ್ಬಳ್ಳಿ ಇಲ್ಲಿ ಧಾರವಾಡ ಜಿಲ್ಲೆಯ ಎಲ್ಲ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಗಳಿಗಾಗಿ ಯಶಸ್ವಿನಿ ಯೋಜನೆ ಹಾಗೂ ಜಿಎಸ್‌ಟಿ ಮತ್ತು ಆದಾಯ ತೆರಿಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆ ಹಾಗೂ ಉದ್ಘಾಟನೆಯನ್ನು ಶ್ರೀ ಮಲ್ಲಿಕಾರ್ಜುನ ಹೊರಕೇರಿ, ಮಾನ್ಯ ನಿರ್ದೇಶಕರು ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ನೆರವೇರಿಸಿದರು, ಮುಖ್ಯ ಅತಿಥಿಗಳಾಗಿ ಶ್ರೀ ಗೋಪಾಲ ತೆಲ್ಲಾಗ್ರ್ ಹಾಗೂ ಶ್ರೀ ಅಮಿತ್ ಬಾಬ್ಜಿ ಮಾನ್ಯ ಲೆಕ್ಕಪರಿಶೋಧಕರು ಇವರು ಭಾಗವಹಿಸಿದ್ದರು.

"ಯಶಸ್ವಿನಿ ಯೋಜನೆ" ಕುರಿತು ಶ್ರೀ ಗೋಪಾಲ ತೆಲ್ಗಾರ್, ಸಹಕಾರ ಅಭಿವೃದ್ಧಿ ಅಧಿಕಾರಿಗಳು ಹಾವೇರಿ ಇವರು ಉಪನ್ಯಾಸ ನೀಡಿದರು ಹಾಗೂ ಜಿ ಎಸ್ ಟಿ ಮತ್ತು ಆದಾಯ ತೆರಿಗೆ, ಕುರಿತು ಶ್ರೀ ಅಮಿತ್ ಬಾಬ್ಜಿ ರವರು ಹಾಗೂ ದಾವಾ ದಾಖಲಾತಿ ಮತ್ತು ಸಾಲ ವಸೂಲಾತಿ ಕುರಿತು ಶ್ರೀ ಕಲ್ಮೇಶ ಎಸ್ ಎಮ್ ಇವರು ಉಪನ್ಯಾಸ ನೀಡಿದರು.

ಗದಗ ಜಿಲ್ಲೆಯ ಜಿಲ್ಲಾ ಸಂಯೋಜಕರಾದ ಶ್ರೀ ಕಲ್ಮೇಶ ಎಸ್ ಎಮ್ ರವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು, ಕಾರ್ಯಕ್ರಮದಲ್ಲಿ 108 ಸೌಹಾರ್ದ ಸಹಕಾರಿಗಳಿಂದ ಒಟ್ಟು 129 ಪ್ರತಿನಿಧಿಗಳು ಭಾಗವಹಿಸಿದರು.



**ವಿಜಯಪುರ** : ದಿನಾಂಕ 30 ನವೆಂಬರ್ ಹಾಗೂ 1 ಡಿಸೆಂಬರ್ 2022ರಂದು ಶ್ರೀ ಸಿದ್ಧೇಶ್ವರ ಮಂಗಲ ಕಲಾ ಭವನ, ವಿಜಯಪುರ ಇಲ್ಲಿ ವಿಜಯಪುರ ಜಿಲ್ಲೆಯ ನೂತನವಾಗಿ ನೋಂದಣಿಗೊಂಡ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ 2 ದಿನದ ಪ್ರವೇಶ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿರುತ್ತದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ರಾಮನಗೌಡ ಬ. ಪಾಟೀಲ ಯತ್ನಾಳ, ಮಾನ್ಯ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ನೆರವೇರಿಸಿದ್ದರು, ಎರಡು ದಿನಗಳ ವಿಶೇಷ ತರಬೇತಿಯಲ್ಲಿ 90 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ಬಾಗಲಕೋಟ :** ದಿನಾಂಕ 29 ನವೆಂಬರ್ 2022 ರಂದು ಬಾಗಲಕೋಟ ಜಿಲ್ಲೆಯ ಎಲ್ಲ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಯಶಸ್ವಿನಿ ಯೋಜನೆ ಹಾಗೂ ಜಿಎಸ್‌ಟಿ ಮತ್ತು ಆದಾಯ ತೆರಿಗೆ ತರಬೇತಿ ಕಾರ್ಯಕ್ರಮವನ್ನು ಆನ್ ಲೈನ್ ಮೂಲಕ ಆಯೋಜಿಸಲಾಗಿತ್ತು.

"ಯಶಸ್ವಿನಿ ಯೋಜನೆ" ಕುರಿತು ಶ್ರೀ ರಘುನಂದನ್ ಕೆ ಮಾನ್ಯ ಉಪಪ್ರಧಾನ ವ್ಯವಸ್ಥಾಪಕರು ಇವರು ಉಪನ್ಯಾಸ ನೀಡಿದರು ಹಾಗೂ ಜಿ ಎಸ್ ಟಿ ಮತ್ತು ಆದಾಯ ತೆರಿಗೆ, ಕುರಿತು ಶ್ರೀ ಮಧುಕರ್ ಹೆಗಡೆ ಮಾನ್ಯ ಸನ್ನದು ಲೆಕ್ಕಪರಿಶೋಧಕರು ಇವರು ಉಪನ್ಯಾಸ ನೀಡಿದರು.

ಬಾಗಲಕೋಟ ಜಿಲ್ಲೆಯ ಜಿಲ್ಲಾ ಸಂಯೋಜಕರಾದ ಶ್ರೀ ನಾಗರಾಜ ಜಿ ಹೆಚ್ ಹಾಗೂ ಶ್ರೀಮತಿ ರೇಷ್ಮಾ ಪಾಟೀಲ ರವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು, ಕಾರ್ಯಕ್ರಮದಲ್ಲಿ ಒಟ್ಟು 192 ಪ್ರತಿನಿಧಿಗಳು ಉಪಸ್ಥಿತ–ರಿದ್ದರು.

## ಆಡಳಿತ ಮಂಡಳಿ ಪರಿಣಿತಿ ಕಾರ್ಯಕ್ರಮ



**ಮಂಡ್ಯ :** ದಿನಾಂಕ: 19.11.2022ರಂದು ಮಂಡ್ಯ ಜಿಲ್ಲೆ ಸೌಹಾರ್ದ ಸಹಕಾರಿಗಳ ನಿರ್ದೇಶಕರುಗಳಿಗಾಗಿ ಆಯೋಜಿಸಿದ್ದ "ಆಡಳಿತ ಮಂಡಳಿ ಪರಿಣಿತಿ" ತರಬೇತಿಯ ಅಧ್ಯಕ್ಷತೆಯನ್ನು ಶ್ರೀಮತಿ ಭಾರತಿ ಜಿ. ಭಟ್ ರವರು, ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು ವಹಿಸಿ ಉದ್ಘಾಟನೆ ಮಾಡಿದರು. ಸದರಿ ತರಬೇತಿಯಲ್ಲಿ ಜಿಲ್ಲೆಯ 19 ಸಹಕಾರಿಗಳಿಂದ 80 ಪ್ರತಿನಿಧಿಗಳು ಇತರೇ 09 ಜನರು ಸೇರಿ ಒಟ್ಟು 89 ಜನರು ಹಾಜರಿದ್ದರು.

## ವಿಷಯಾಧಾರಿತ ತರಬೇತಿ ಕಾರ್ಯಕ್ರಮ



**ಮೈಸೂರು :** ದಿನಾಂಕ 16.12.2022ನೇ ಶುಕ್ರವಾರದಂದು ಮೈಸೂರಿನ ದಿ ಗ್ರೀನ್ ಹೆರಿಟೇಜ್ ಹೋಟೆಲ್‌ನಲ್ಲಿ ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಹಾಗೂ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಸಂಯುಕ್ತಾಶ್ರಯದಲ್ಲಿ ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳಿಗಾಗಿ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್. ಕೆ, ನಿಕಟಪೂರ್ವ ನಿರ್ದೇಶಕರಾದ ಡಾ. ಹೆಚ್. ವಿ.ರಾಜೀವ್, ಒಕ್ಕೂಟದ ಅಧ್ಯಕ್ಷರಾದ ಶ್ರೀ ಎಸ್.ಆರ್. ನಾರಾಯಣರಾವ್, ನಿರ್ದೇಶಕರಾದ ಶ್ರೀ ಹೆಚ್.ಎನ್.ನವೀನ್ ಇವರು ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಮಹೀಂದ್ರ ಇನ್ಸೂರೆನ್ಸ್ ಬ್ರೋಕರ್ಸ್ ಲಿ., ನ ಶ್ರೀ ಅಜಯ್, ಶ್ರೀ ಕನ್ನಿಕಾ ಪರಮೇಶ್ವರಿ ಕೋ–ಆಪರೇಟೀವ್ ಬ್ಯಾಂಕ್ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಶ್ರೀನಿವಾಸಮೂರ್ತಿ, ವಕೀಲರಾದ ಶ್ರೀ ಸೋಮಶೇಖರ್, ಶ್ರೀ ರಾಜನ್ ಬಾಬು ಇವರು ಹಾಗೂ ಒಕ್ಕೂಟದ ನಿರ್ದೇಶಕರುಗಳು, ಒಕ್ಕೂಟದ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಎಸ್. ಸಿ. ಭಗೀರಥ ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ್ ಇವರು ಉಪಸ್ಥಿತರಿದ್ದರು. ಸದರಿ ಕಾರ್ಯಕ್ರಮದಲ್ಲಿ 105 ಜನ ಪ್ರತಿನಿಧಿಗಳಿಗೆ ಭಾಗವಹಿಸಿದರು.



**ದಾವಣಗೆರೆ :** ದಿನಾಂಕ 14.12.2022 ರಂದು ದಾವಣಗೆರೆ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ,. ಇದರ ಆಡಳಿತ ಮಂಡಲಿ ಸಭೆ ಹಾಗೂ ಅಭಿನಂದನಾ ಸಭೆಯನ್ನು ಹರಿಹರ ನಗರದ ಹರಿಹರ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ನಿ,. ಇದರ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ದಾವಣಗೆರೆ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಹೆಚ್.ಎಮ್ ನಾಗರಾಜು ರವರು ವಹಿಸಿದ್ದರು. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಒಕ್ಕೂಟ ಅಭಿವೃದ್ಧಿಗೆ ಪೂರಕವಾಗುವಂತೆ ಕೆಲವು ಸಲಹೆ ಸೂಚನೆಗಳನ್ನು ನೀಡಿದರು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ದಾವಣಗೆರೆ ಜಿಲ್ಲಾ ನಿರ್ದೇಶಕರಾದ ಶ್ರೀ ಎಂ.ಆರ್ ಪ್ರಭುದೇವ್ ರವರು ಉಪಸ್ಥಿತರಿದ್ದರು.

## ಯಶಸ್ವಿನಿ ಸಹಕಾರಿ ಆರೋಗ್ಯ ರಕ್ಷಣಾ ಯೋಜನೆ ಕುರಿತು ವಿಷಯಾಧಾರಿತ ತರಬೇತಿ ಕಾರ್ಯಕ್ರಮ



**ಕೊಡಗು :** ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಮಾನ್ಯ ಅಧ್ಯಕ್ಷರು ಮತ್ತು ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಯಶಸ್ವಿನಿ ಸಹಕಾರಿ ಆರೋಗ್ಯ ರಕ್ಷಣಾ ಯೋಜನೆ ಕುರಿತ ವಿಷಯಾಧಾರಿತ ತರಬೇತಿ ಕಾರ್ಯಕ್ರಮವನ್ನು ದಿನಾಂಕ: 14.12.2022 ಬುಧವಾರ ಬೆಳಿಗ್ಗೆ 10:00 ಗಂಟೆಗೆ ಕೊಡಗು ವಿದ್ಯಾ ಇಲಾಖಾ ನೌಕರರ ಪತ್ತಿನ ಸೌಹಾರ್ದ ಸಹಕಾರಿ ಸಂಘದ ಗುರುಸದನ ಕಟ್ಟಡ, ಓಂಕಾರೇಶ್ವರ ದೇವಸ್ಥಾನದ ಎದುರು, ಲಕ್ಷ್ಮಿ ನರಸಿಂಹ ಕಲ್ಯಾಣ ಮಂಟಪದ ಪಕ್ಕ, ಮಡಿಕೇರಿ, ಕೊಡಗು ಇಲ್ಲಿ ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಆರ್ ಎಸ್ ರವರು ಉಪಸ್ಥಿತರಿದ್ದರು. ನಂತರ ಯಶಸ್ವಿನಿ ಸಹಕಾರಿ ಆರೋಗ್ಯ ರಕ್ಷಣಾ ಯೋಜನೆ ಕುರಿತು ಮಾನ್ಯ ಸಹಕಾರ ಸಂಘಗಳ ಉಪ ನಿಬಂಧಕರಾದ ಶ್ರೀ ಎಂ.ಎಸ್. ಕೃಷ್ಣಪ್ರಸಾದ್‌ರವರು ಮತ್ತು ಮಾನ್ಯ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಮೋಹನ್‌ರವರು ರವರು ಮಾಹಿತಿಯನ್ನು ನೀಡಿದರು. ಹಾಗೂ ಶ್ರೀಮತಿ ಶ್ಯಾಮಲಾ, ಮಾನ್ಯ ನಿವೃತ್ತ ಪ್ರಾಂಶುಪಾಲರು, ಇವರು ಸಹಕಾರಿಗಳಲ್ಲಿ ಹಣಕಾಸು ನಿರ್ವಹಣೆ ಕುರಿತು ಉಪನ್ಯಾಸ ನೀಡಿದರು. ಸದರಿ ಸಭೆಯಲ್ಲಿ 22 ಪ್ರತಿನಿಧಿಗಳು ಭಾಗವಹಿಸಿದ್ದರು.



**ಕೋಲಾರ :** ದಿನಾಂಕ 03.12.2022 ರಂದು ಕೋಲಾರ ಜಿಲ್ಲೆಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ ವತಿಯಿಂದ ಕೋಲಾರ ಜಿಲ್ಲೆಯ ಸಮನ್ವಯ ಸಮಿತಿ ಸಭೆಯನ್ನು ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಕೋಲಾರ ಜಿಲ್ಲೆಯ ಲೆಕ್ಕಪರಿಶೋಧನಾ ಉಪನಿರ್ದೇಶಕರಾದ ಶ್ರೀಮತಿ ಆರ್. ಮಂಗಳಗೌರಿ ರವರು ವಹಿಸಿದ್ದರು. ಸಹಕಾರಿಗಳ ಸಹಾಯಕ ನಿಬಂಧಕರಾದ ಶ್ರೀ ನಾಗರಾಜು ರವರು ಉಪಸ್ಥಿತರಿದ್ದರು.

## ಪ್ರವೇಶ ತರಬೇತಿ ಕಾರ್ಯಕ್ರಮ



**ಚಾಮರಾಜನಗರ :** ದಿನಾಂಕ: 24.11.2022ರಂದು ಶ್ರೀ ಕ್ಷೇತ್ರ ಕನಕಗಿರಿ, ಮಲೆಯೂರು, ಚಾಮರಾಜನಗರ ತಾ & ಜಿ ಇಲ್ಲಿ ನಡೆದ ಮಂಡ್ಯ & ಚಾಮರಾಜನಗರ ಜಿಲ್ಲೆ ಸೌಹಾರ್ದ ಸಹಕಾರಿಗಳ "ಪ್ರವೇಶ ತರಬೇತಿ" ಯ ಉದ್ಘಾಟನೆಯನ್ನು ಶ್ರೀ ಮಂಜುನಾಥ ರವರು, ಮಾನ್ಯ ಮೈಸೂರು ಪ್ರಾಂತೀಯ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು ಅಧ್ಯಕ್ಷತೆ ವಹಿಸಿ ನೆರವೇರಿಸಿದರು. ಚಾಮರಾಜನಗರ ಜಿಲ್ಲೆಯ 20 ಸಹಕಾರಿಗಳಿಂದ 36 ಪ್ರತಿನಿಧಿಗಳು ಮತ್ತು ಮಂಡ್ಯ ಜಿಲ್ಲೆಯ 08 ಸಹಕಾರಿಗಳಿಂದ 19 ಪ್ರತಿನಿಧಿಗಳು, ಇತರೆ 10 ಸೇರಿ ಒಟ್ಟು 65 ಜನರು ಭಾಗವಹಿಸಿ ಯಶಸ್ವಿಯಾಗಿ ಜರುಗಿತು.



ಶ್ರೀ ಭುವನೇಶ್ವರಿ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಸಹಕಾರಿಯಲ್ಲಿ 2023ರ ಕ್ಯಾಲೆಂಡರ್ ಬಿಡುಗಡೆಯನ್ನು ಸಂಸ್ಥೆಯ ಸದಸ್ಯರಾದ ಗಿರಿಜಮ್ಮ ರವರ ಇವರು ಬಿಡುಗಡೆ ಮಡಿದರು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಆರ್. ನಾರಾಯಣ್ ರವರು ಹಾಗೂ ನಿರ್ದೇಶಕರಾದ ಕೆ. ಶಿವಾನಂದ್, ಎಂ. ವಿಜಯಲಕ್ಷ್ಮಿ, ಶಾಂತಿ.ವಿ. ಹೆಗಡೆ, ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ. ಸಿ. ಆಶಾ ಹಾಗೂ ಎನ್. ಎಸ್. ನಾಗರತ್ನಮ್ಮ ಆರ್. ಚೈತನ್ಯ ರವರು ಉಪಸ್ಥಿತರಿದ್ದರು.

# ಯಶಸ್ವಿನಿ ಯೋಜನೆ ಕುರಿತು ಪ್ರಗತಿ ಪರಿಶೀಲನಾ ಸಭೆ



ದಿನಾಂಕ 09.12.2022 ರಂದು ಚಳ್ಳಕೆರೆ ನಗರದಲ್ಲಿರುವ ಕಂಭಳಿ ಭವನದ ಸಭಾಂಗಣದಲ್ಲಿ ಚಳ್ಳಕೆರೆ ಮತ್ತು ಮೊಳಕಲ್ಮೂರು ತಾಲೂಕಿನ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆ ಕುರಿತು ಪ್ರಗತಿ ಪರಿಶೀಲನಾ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಹೆಚ್. ಮೂರ್ತಿ ರವರು ವಹಿಸಿದ್ದರು. ಸಭೆಯಲ್ಲಿ ಚಿತ್ರದುರ್ಗ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಟಿ.ಮಧು ಶ್ರೀನಿವಾಸ್ ರವರು, ಜಿಲ್ಲೆಯ ಸಹಕಾರಿ ಅಭಿವೃದ್ಧಿ ಅಧಿಕಾರಿಗಳಾದ ಶ್ರೀಮತಿ ಸುಮಿತ್ರಾ ರವರು. ಮೊಳಕಾಲ್ಮೂರು ತಾಲುಕಿನ ಸಹಕಾರಿ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಬಶೀರ್ ಖಾನ್ ಹಾಗೂ ಸೌಹಾರ್ದ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ರವರು ಭಾಗವಹಿಸಿದ್ದರು.



**ಬೆಂಗಳೂರು** : ದಿನಾಂಕ 16.12.2022 ರಂದು ಬೆಂಗಳೂರು ನಗರದ(4ನೇ ವಲಯ) ಸೌಹಾರ್ದ ಸಹಕಾರಿಗಳಿಗಾಗಿ ಸೌಹಾರ್ದ ಸಹಕಾರಿಗಳ ಯಶಸ್ವಿನಿ ಯೋಜನೆ ಕುರಿತು ಪ್ರಗತಿ ಪರಿಶೀಲನಾ ಸಭೆಯನ್ನು ಸೌಹಾರ್ದ ಸಹಕಾರಿ ಸೌಧ, ಮಲ್ಲೇಶ್ವರಂ, ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಬೆಂಗಳೂರು ನಗರದ 4ನೇ ವಲಯದ ಉಪನಿಬಂಧಕರಾದ ಶ್ರೀ ಪಿ. ಶಶಿಧರ್ ರವರು ವಹಿಸಿ ಸೌಹಾರ್ದ ಸಹಕಾರಿಗಳಿಗೆ ಯಶಸ್ವಿನಿ ಯೋಜನೆ ನೋಂದಣಿ ಕುರಿತು ಮಾಹಿತಿ ನೀಡಿದರು.



**ಚಿತ್ರದುರ್ಗ** : ದಿನಾಂಕ 08.12.2022 ರಂದು ಚಿತ್ರದುರ್ಗ ಸಹಕಾರ ಯೂನಿಯನ್ ನಿ,. ಇದರ ಸಭಾಂಗಣದಲ್ಲಿ ಚಿತ್ರದುರ್ಗ ಮತ್ತು ಹಿರಿಯೂರು ತಾಲೂಕಿನ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆ ಕುರಿತು ಪ್ರಗತಿ ಪರಿಶೀಲನಾ ಸಭೆಯು ಜರುಗಿತು. ಸಭೆಯ ಅದ್ಯಕ್ಷತೆಯನ್ನು ಮಾನ್ಯ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ಹೆಚ್. ಮೂರ್ತಿ ರವರು ವಹಿಸಿದ್ದರು. ಸಭೆಯಲ್ಲಿ ಚಿತ್ರದುರ್ಗ ಡಿ.ಸಿ.ಸಿ ಬ್ಯಾಂಕಿನ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಇಲ್ಯಾಸ್ ಉಲ್ಲಾಸ್ ಷರೀಫ್, ಚಿತ್ರದುರ್ಗ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಟಿ.ಮಧು ಶ್ರೀನಿವಾಸ್ ರವರು, ಜಿಲ್ಲೆಯ ಸಹಕಾರಿ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಕೃಷ್ಣಮೂರ್ತಿ ರವರು ಹಾಗೂ ಸೌಹಾರ್ದ ಜಿಲ್ಲಾ ಸಂಯೋಜಕರಾದ ಶ್ರೀ ನಟರಾಜ ಇವರು ಭಾಗವಹಿಸಿದ್ದರು.



**ಬೆಂಗಳೂರು** : ದಿನಾಂಕ 19.12.2022 ರಂದು ಬೆಂಗಳೂರು ನಗರದ(2ನೇ ವಲಯ) ಸೌಹಾರ್ದ ಸಹಕಾರಿಗಳಿಗಾಗಿ ಸೌಹಾರ್ದ ಸಹಕಾರಿಗಳ ಯಶಸ್ವಿನಿ ಯೋಜನೆ ನೋಂದಣಿ ಕುರಿತು ಪ್ರಗತಿ ಪರಿಶೀಲನಾ ಸಭೆಯನ್ನು ಸೌಹಾರ್ದ ಸಹಕಾರಿ ಸೌಧ, ಮಲ್ಲೇಶ್ವರಂ, ಇಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಬೆಂಗಳೂರು ನಗರದ 2ನೇ ವಲಯದ ಉಪನಿಬಂಧಕರಾದ ಶ್ರೀ ಎಂ.ಪಿ. ಮಂಜುನಾಥ್ ರವರು ವಹಿಸಿ ಸೌಹಾರ್ದ ಸಹಕಾರಿಗಳಿಗೆ ಯಶಸ್ವಿನಿ ಯೋಜನೆ ನೋಂದಣಿ ಕುರಿತು ಮಾಹಿತಿ ನೀಡಿದರು. ಸಹಾಯಕ ನಿಬಂಧಕರಾದ ಶ್ರೀಮತಿ ಕವಿತಾ ರವರು, ಬೆಂಗಳೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸಂಜಯ ಕೋರಟಕರ ಹಾಗೂ ಜಿಲ್ಲಾ ಸಂಯೋಜಕರಾದ ಶ್ರೀ ರಾಜೇಶ್ ಕೆ.ಎಮ್. ಇವರು ಉಪಸ್ಥಿತರಿದ್ದರು.

# ರಾಜ್ಯದ ವಿವಿಧ ಭಾಗಗಳಲ್ಲಿ ಸೌಹಾರ್ದ ಸಹಕಾರಿಗಳ 2022-23ನೇ ಸಾಲಿನ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಪ್ರಗತಿ ಪರಿಶೀಲನಾ ಸಭೆಗಳ ವಿವರಗಳು

| ಕ್ರ. ಸಂ. | ದಿನಾಂಕ | ಜಿಲ್ಲೆ/ತಾಲ್ಲೂಕು | ಭಾಗವಹಿಸಿದ ಸೌಹಾರ್ದ ಸಹಕಾರಿಗಳ ಸಂಖ್ಯೆ | ಭಾಗವಹಿಸಿದ ಮುಖ್ಯಕಾರ್ಯ ನಿರ್ವಾಹಕರ ಸಂಖ್ಯೆ ಹಾಗೂ ಇತರರು |
|---|---|---|---|---|
| ಬೆಂಗಳೂರು ವಿಭಾಗ | | | | |
| 01 | 22.12.2022 | ಬೆಂಗಳೂರು ನಗರ (1&4ನೇ ವಲಯ) ಹಾಗೂ ಬೆಂಗಳೂರು ಗ್ರಾಮಾಂತರ | 88 | 88 |
| 02 | 27.12.2022 | ತುಮಕೂರು | 128 | 152 |
| 03 | 28.12.2022 | ಚಿಕ್ಕಬಳ್ಳಾಪುರ | 19 | 36 |
| 04 | 29.12.2022 | ದಾವಣಗೆರೆ | 60 | 60 |
| 05 | 30.12.2022 | ಚಿತ್ರದುರ್ಗ | 48 | 65 |
| 06 | 30.12.2022 | ಕೋಲಾರ | 17 | 32 |
| 07 | 02.01.2023 | ಶಿವಮೊಗ್ಗ | 91 | 110 |
| 08 | 05.01.2023 | ಬೆಂಗಳೂರು ನಗರ (2&3ನೇ ವಲಯ) ಹಾಗೂ ರಾಮನಗರ | 91 | 91 |
| ಮೈಸೂರು ವಿಭಾಗ | | | | |
| 09 | 21.12.2022 | ಚಾಮರಾಜನಗರ | 20 | 32 |
| 10 | 30.12.2022 | ಹಾಸನ | 29 | 40 |
| 11 | 27.12.2022 | ಮಂಡ್ಯ | 15 | 41 |
| 12 | 22.12.2022 ರಿಂದ 24.12.2022 ಹಾಗೂ 29.12.2022 | ಉಡುಪಿ | 140 | 150 |
| 13 | 27.12.2022 | ಮಂಗಳೂರು | 75 | 85 |
| 14 | 04.01.2023 ಮತ್ತು 05.01.2023 | ಚಿಕ್ಕಮಗಳೂರು | 30 | 35 |
| 15 | 31.12.2022 | ಮೈಸೂರು | 42 | 48 |
| 16 | 28.12.2022 | ಮಡಿಕೇರಿ | 14 | 29 |
| ಬೆಳಗಾವಿ ವಿಭಾಗ | | | | |
| 17 | 27.12.2022 | ಬೆಳಗಾವಿ, ಬೈಲಹೊಂಗಲ, ಸವದತ್ತಿ, ಖಾನಾಪುರ, ರಾಮದುರ್ಗ ಹಾಗೂ ಯರಗಟ್ಟಿ | 130 | 150 |

| | | | | |
|---|---|---|---|---|
| 18 | 28.12.2022 | ಹುಕ್ಕೇರಿ | 142 | 160 |
| 19 | 29.12.2022 | ಗೋಕಾಕ ಹಾಗೂ ಮೂಡಲಗಿ | 115 | 115 |
| 20 | 30.12.2022 | ಚಿಕ್ಕೋಡಿ, ಅಥಣಿ, ನಿಪ್ಪಾಣಿ, ರಾಯಬಾಗ ಹಾಗೂ ಕಾಗವಾಡ | 132 | 147 |
| 21 | 30.12.2022 | ವಿಜಯಪುರ | 229 | 317 |
| 22 | 31.12.2022 | ಬಾಗಲಕೋಟ | 271 | 290 |
| 23 | 27.12.2022 | ಹಾವೇರಿ | 130 | 139 |
| 24 | 28.12.2022 | ಗದಗ | 38 | 50 |
| 25 | 30.12.2022 | ಧಾರವಾಡ | 88 | 96 |
| 26 | 29.12.2022 | ಉತ್ತರ ಕನ್ನಡ (ಕಾರವಾರ, ಅಂಕೋಲಾ, ಕುಮುಟಾ, ಹೊನ್ನಾವರ, ಭಟ್ಕಳ ಮತ್ತು ಜೊಯಿಡಾ) | 120 | 90 |
| 27 | 30.12.2022 | ಉತ್ತರ ಕನ್ನಡ (ಶಿರಸಿ, ಸಿದ್ದಾಪುರ, ಯಲ್ಲಾಪುರ, ದಾಂಡೇಲಿ, ಹಳಿಯಾಳ ಮತ್ತು ಮುಂಡಗೋಡ) | 60 | 40 |
| ಕಲಬುರಗಿ ವಿಭಾಗ | | | | |
| 28 | 21.12.2022 | ಕಲಬುರಗಿ | 70 | 90 |
| 29 | 26.12.2022 | ಬೀದರ | 70 | 85 |
| 30 | 27.12.2022 | ಬಳ್ಳಾರಿ | 58 | 58 |
| 31 | 28.12.2022 | ರಾಯಚೂರು ಜಿಲ್ಲೆಯ ಲಿಂಸೂಗುರು, ಮಸ್ಕಿ, ಸಿಂಧನೂರು ತಾಲೂಕುಗಳು | 127 | 143 |
| 32 | 29.12.2022 | ರಾಯಚೂರು ಜಿಲ್ಲೆಯ ರಾಯಚೂರು, ಮಾನವಿ, ಸಿರವಾರ, ತಾಲೂಕುಗಳು | 103 | 124 |
| 33 | 29.12.2022 | ಹೊಸಪೇಟೆ | 58 | 58 |
| 34 | 30.12.2022 | ಯಾದಗಿರಿ | 43 | 43 |
| 36 | 30.12.2022 | ಕೊಪ್ಪಳ ಜಿಲ್ಲೆಯ ಕೊಪ್ಪಳ, ಕುಷ್ಟಗಿ. ಯಲಬುರ್ಗಾ ಕುಕನೂರು ತಾಲೂಕುಗಳು | 150 | 150 |
| 36 | 03.01.2023 | ಕೊಪ್ಪಳ ಜಿಲ್ಲೆಯ ಗಂಗಾವತಿ ಕಾರಟಗಿ, ಕನಕಗಿರಿ. | 130 | 130 |

## ಯಶಸ್ವಿನಿ ಯೋಜನೆ ಪ್ರಗತಿ ಪರಿಶೀಲನಾ ಸಭೆಯ ವಿವರಗಳು

| ಕ್ರ.ಸಂ. | ದಿನಾಂಕ | ಜಿಲ್ಲೆ/ತಾಲ್ಲೂಕು |
|---|---|---|
| ಬೆಂಗಳೂರು ವಿಭಾಗ | | |
| 01 | 08.12.2022 | ತುಮಕೂರು |
| 02 | 08.12.2022 | ಚಿತ್ರದುರ್ಗ ಮತ್ತು ಹಿರಿಯೂರು ತಾಲ್ಲೂಕು |
| 03 | 09.12.2022 | ಚಳ್ಳಕೆರೆ ಮತ್ತು ಮೊಳಕಲ್ಲೂರು ತಾಲ್ಲೂಕು |
| 04 | 16.12.2022 | ಬೆಂಗಳೂರು ನಗರದ (4ನೇ ವಲಯ) |
| 05 | 19.12.2022 | ಬೆಂಗಳೂರು ನಗರದ (2ನೇ ವಲಯ) |

# ರಾಜ್ಯದ ವಿವಿಧ ಭಾಗಗಳಲ್ಲಿ ಸೌಹಾರ್ದ ಸಹಕಾರಿಗಳ 2022-23ನೇ ಸಾಲಿನ ಮುಖ್ಯ ಕಾರ್ಯನಿರ್ವಾಹಕರ ವಾರ್ಷಿಕ ಪ್ರಗತಿ ಪರಿಶೀಲನಾ ಸಭೆಯ ಪೋಟೋಗಳು



ಬೆಳಗಾವಿ



ಬೆಂಗಳೂರು



ಧಾರವಾಡ



ಉಡುಪಿ




ದಕ್ಷಿಣ ಕನ್ನಡ



ವಿಜಯಪುರ



ಚಿತ್ರದುರ್ಗ




ತುಮಕೂರು



ಮಂಡ್ಯ



ಮೈಸೂರು


ಬಾಗಲಕೋಟ


ಶಿವಮೊಗ್ಗ


ಕೊಪ್ಪಳ


ಬೆಂಗಳೂರು ನಗರ ಮತ್ತು ರಾಮನಗರ


ಕೊಡಗು


ಹಾಸನ


ಮಂಡ್ಯ


ಬೆಳಗಾವಿ



**ಚಾಮರಾಜನಗರ :** ನವ್ಯ ಕರ್ನಾಟಕ ಸೌಹಾರ್ದ ಸಹಕಾರಿ ಸಂಘ ನಿ., ಚಾಮರಾಜನಗರ ಇದರ ಕಛೇರಿಯಲ್ಲಿ ಸಹಕಾರಿಯ 12ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮ ಹಾಗೂ ಸೌಹಾರ್ದ ಸಹಕಾರಿ ದಿನಾಚರಣೆಯ ಅಂಗವಾಗಿ ಧ್ವಜಾರೋಹಣ ಕಾರ್ಯಕ್ರಮವನ್ನು ಸಹಕಾರಿ ಅಧ್ಯಕ್ಷರಾದ ಎಂ ನಂಜುಂಡಸ್ವಾಮಿ ರವರು, ನಿರ್ದೇಶಕರಾದ ಎಂ ಮಹೇಶ್, ಡಿಪಿ ಪ್ರಕಾಶ್, ಅರುಣ ಎಸ್, ಕರುಣಾಕರ ಕೆ.ಎಸ್, ರತ್ನಮ್ಮ ಬಿ ಪ್ರಭುಸ್ವಾಮಿ, ಬಸವಣ್ಣ ಎಸ್ ಪಿ ನೆರವೇರಿಸಿದರು.



**ಕೊಡಗು :** ಕೊಡಗು ಸೌಹಾರ್ದ ಪತ್ತಿನ ಸಹಕಾರಿಯು 22ನೇ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ನೆರವೇರಿಸಿದರು.

# ಕರ್ನಾಟಕ ರಾಜ್ಯ ಸೌಹಾರ್ದ

ಶಾಸನಬದ್ಧ

ಸ್ವಾಯತ್ತತೆ, ಸ್ವಯಂ ಆಡಳಿತ,



### ಜನವರಿ - 2023

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | 31 | | | | |

### ಫೆಬ್ರವರಿ - 2023

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | | | | |

### ಮೇ - 2023

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | 1 | 2 | 3 | 4 | 5 | 6 |
| 7 | 8 | 9 | 10 | 11 | 12 | 13 |
| 14 | 15 | 16 | 17 | 18 | 19 | 20 |
| 21 | 22 | 23 | 24 | 25 | 26 | 27 |
| 28 | 29 | 30 | 31 | | | |

### ಜೂನ್ - 2023

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | | 1 | 2 | 3 |
| 4 | 5 | 6 | 7 | 8 | 9 | 10 |
| 11 | 12 | 13 | 14 | 15 | 16 | 17 |
| 18 | 19 | 20 | 21 | 22 | 23 | 24 |
| 25 | 26 | 27 | 28 | 29 | 30 | |

### ಸೆಪ್ಟೆಂಬರ್ - 2023

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

### ಅಕ್ಟೋಬರ್ - 2023

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 1 | 2 | 3 | 4 | 5 | 6 | 7 |
| 8 | 9 | 10 | 11 | 12 | 13 | 14 |
| 15 | 16 | 17 | 18 | 19 | 20 | 21 |
| 22 | 23 | 24 | 25 | 26 | 27 | 28 |
| 29 | 30 | 31 | | | | |

### ಸಂಯುಕ್ತ ಸಹಕಾರಿಯ ರಜಾ ದಿನಗಳು

1. ಜನವರಿ 26 ಗಣರಾಜ್ಯೋತ್ಸವ
2. ಫೆಬ್ರವರಿ 18 ಮಹಾಶಿವರಾತ್ರಿ
3. ಮಾರ್ಚ್ 22 ಚಂದ್ರಮಾನ ಯುಗಾದಿ
4. ಏಪ್ರಿಲ್ 07 ಗುಡ್ ಫ್ರೈಡೇ
5. ಏಪ್ರಿಲ್ 14 ಡಾ.ಬಿ.ಆರ್.ಅಂಬೇಡ್ಕರ್
6. ಮೇ 01 ಕಾರ್ಮಿಕರ ದಿನಾಚರಣೆ
7. ಜೂನ್ 29 ಬಕ್ರೀದ್
8. ಆಗಸ್ಟ್ 15 ಸ್ವಾತಂತ್ರ್ಯ ದಿನಾಚರಣೆ

ವಾರದ ಎಲ್ಲಾ ಭಾನುವಾರಗಳು

“ಸೌಹಾರ್ದ ಸಹಕಾರಿ ಸೌಧ”, 18ನೇ ಅಡ್ಡರಸ್ತೆ, ಮಾರ್ಗೋಸ ರಸ್ತೆ,

# ಸಂಯುಕ್ತ ಸಹಕಾರಿ ನಿಯಮಿತ

ಸಹಕಾರಿ ಸಂಸ್ಥೆ

ಸ್ವಯಂ ನಿಯಂತ್ರಣ ನಮ್ಮ ಧ್ಯೇಯ

## 2023

ಸಹಕಾರಿಗಳ ನಡೆ
ಗುಣಮಟ್ಟದ ಕಡೆ



### ಮಾರ್ಚ್ - 2023

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | 31 | |

### ಏಪ್ರಿಲ್ - 2023

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 30 | | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

### ಜುಲೈ - 2023

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 30 | 31 | | | | | 1 |
| 2 | 3 | 4 | 5 | 6 | 7 | 8 |
| 9 | 10 | 11 | 12 | 13 | 14 | 15 |
| 16 | 17 | 18 | 19 | 20 | 21 | 22 |
| 23 | 24 | 25 | 26 | 27 | 28 | 29 |

### ಆಗಸ್ಟ್ - 2023

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | 1 | 2 | 3 | 4 | 5 |
| 6 | 7 | 8 | 9 | 10 | 11 | 12 |
| 13 | 14 | 15 | 16 | 17 | 18 | 19 |
| 20 | 21 | 22 | 23 | 24 | 25 | 26 |
| 27 | 28 | 29 | 30 | 31 | | |

### 2023

09. ಸೆಪ್ಟೆಂಬರ್ 18 ವರಸಿದ್ಧಿ ವಿನಾಯಕ ವ್ರತ
10. ಸೆಪ್ಟೆಂಬರ್ 28 ಈದ್-ಮಿಲಾದ್
11. ಅಕ್ಟೋಬರ್ 2 ಗಾಂಧೀ ಜಯಂತಿ
12. ಅಕ್ಟೋಬರ್ 23 ಆಯುಧಪೂಜೆ
13. ಅಕ್ಟೋಬರ್ 24 ವಿಜಯದಶಮಿ
14. ನವೆಂಬರ್ 14 ಬಲಿಪಾಡ್ಯಮಿ
15. ಡಿಸೆಂಬರ್ 25 ಕ್ರಿಸ್‌ಮಸ್

ಹಾಗೂ ಮೇಲೆ ತಿಳಿಸಿದ 15 ದಿನಗಳು ಮಾತ್ರ.

### ನವೆಂಬರ್ - 2023

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| | | | 1 | 2 | 3 | 4 |
| 5 | 6 | 7 | 8 | 9 | 10 | 11 |
| 12 | 13 | 14 | 15 | 16 | 17 | 18 |
| 19 | 20 | 21 | 22 | 23 | 24 | 25 |
| 26 | 27 | 28 | 29 | 30 | | |

### ಡಿಸೆಂಬರ್ - 2023

| ಭಾ | ಸೋ | ಮಂ | ಬು | ಗು | ಶು | ಶ |
|---|---|---|---|---|---|---|
| 31 | | | | | 1 | 2 |
| 3 | 4 | 5 | 6 | 7 | 8 | 9 |
| 10 | 11 | 12 | 13 | 14 | 15 | 16 |
| 17 | 18 | 19 | 20 | 21 | 22 | 23 |
| 24 | 25 | 26 | 27 | 28 | 29 | 30 |

ಮಲ್ಲೇಶ್ವರಂ, ಬೆಂಗಳೂರು - 560 055 ದೂ : 080-23378375 - 80

# ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿ ಹಾಗೂ ಪ್ರಾಂತೀಯ ಕಛೇರಿಯಲ್ಲಿ 22ನೇ ಸೌಹಾರ್ದ ಸಹಕಾರಿ ದಿನಾಚರಣೆ



**ಬೆಂಗಳೂರು :** ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಧ್ವಜಾರೋಹಣವನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ಇವರು ನೆರವೇರಿಸಿದರು.



**ಉಡುಪಿ :** ದಿನಾಂಕ 01.01.2023 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ. ಉಡುಪಿ ಜಿಲ್ಲಾ ಸೌಹಾರ್ದ ಒಕ್ಕೂಟ ಹಾಗೂ ಶ್ರೀಕೃಷ್ಣ ಸೌಹಾರ್ದ ಸಹಕಾರಿ ಇವರ ಜಂಟಿ ಆಶ್ರಯದಲ್ಲಿ ಉಡುಪಿ ಜಿಲ್ಲೆಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಆಚರಿಸಲಾಯಿತು.



**ಬೀದರ :** ದಿನಾಂಕ 01.01.2023 ರಂದು ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಕಛೇರಿಯಲ್ಲಿ ಸಂಯುಕ್ತ ಸಹಕಾರಿ ನಿರ್ದೇಶಕಕ ಗುರುನಾಥ ಜ್ಯಾಂತಿಕರ ಇವರು ಸೌಹಾರ್ದ ಸಹಕಾರಿ ದಿನಚಾರಣೆಯ ನಿಮಿತ್ಯ ಸಹಕಾರಿಯ ಧ್ವಜಾರೊಹಣ ನೆರವೇರಿಸಿದರು.



**ಮೈಸೂರು :** ದಿನಾಂಕ 01.01.2023 ರಂದು ಮೈಸೂರು ಪ್ರಾಂತೀಯ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಧ್ವಜಾರೋಹಣವನ್ನು ಸಂಯುಕ್ತ ಸಹಕಾರಿಯ ನಿಕಟಪೂರ್ವ ನಿರ್ದೇಶಕರಾದ ಹೆಚ್.ವಿ ರಾಜೀವ್ ಇವರು ನೆರವೇರಿಸಿದರು.



**ಕಲಬುರಗಿ :** ದಿನಾಂಕ 01.01.2023 ರಂದು ಕಲಬುರ್ಗಿ ಪ್ರಾಂತಿಯ ಕಚೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯ ಧ್ವಜಾರೋಹಣವನ್ನು ಕಲಬುರಗಿ ಜಿಲ್ಲಾ ಒಕ್ಕೂಟ ಇದರ ಅಧ್ಯಕ್ಷರಾದ ಶ್ರೀ ಎಸ್ ಎಸ್ ಪಾಟೀಲ್ ಇವರು ನೆರವೇರಿಸಿದರು.



**ತುಮಕೂರು :** ದಿನಾಂಕ:01–01–2023 ರಂದು ತುಮಕೂರು ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಸೌಹಾರ್ದ ಸಹಕಾರಿ ದಿನಾಚರಣೆಯನ್ನು ಧ್ವಜಾರೋಹಣ ಮಾಡುವುದರ ಮೂಲಕ ಆಚರಿಸಲಾಯಿತು.

# 2022-23ನೇ ಸಾಲಿಗೆ ಸಹಕಾರಿಗಳಿಗಾಗಿ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಗಳನ್ನು ಜಾರಿಗೊಳಿಸಲು ಹಾಗೂ ಹೊಸ ಸದಸ್ಯರನ್ನು ನೋಂದಾಯಿಸುವ ಅವಧಿಯನ್ನು ವಿಸ್ತರಿಸುವ ಬಗ್ಗೆ - ಸರ್ಕಾರದ ಸುತ್ತೋಲೆ

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** 2022-23ನೇ ಸಾಲಿಗೆ ಸಹಕಾರಿಗಳಿಗಾಗಿ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಜಾರಿಗೊಳಿಸಲು ಹಾಗೂ ಹೊಸ ಸದಸ್ಯರನ್ನು ನೋಂದಾಯಿಸುವ ಅವಧಿಯನ್ನು ವಿಸ್ತರಿಸುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: ಸಿಒ 154(1) ಸಿಎಲ್‌ಎಸ್ 2022, ಬೆಂಗಳೂರು, ದಿನಾಂಕ:12-10-2022.
2. ಮುಖ್ಯಕಾರ್ಯನಿರ್ವಹಣಾಧಿಕಾರಿ, ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್ ಇವರ ಟಿಪ್ಪಣಿ ಸಂಖ್ಯೆ: ಯಶಸ್ವಿನಿ/024/ಸಿಡಬ್ಲ್ಯೂ-2/2022-23, ದಿನಾಂಕ: 31-12-2022.

***

**ಪ್ರಸ್ತಾವನೆ :**

2022-23ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 67 ರಲ್ಲಿ ಮಾನ್ಯ ಮುಖ್ಯಮಂತ್ರಿಯವರು ಯಶಸ್ವಿನಿ ಯೋಜನೆಯನ್ನು ರಾಜ್ಯದಲ್ಲಿ ಮರು ಜಾರಿಗೊಳಿಸಲು ಘೋಷಿಸಿರುತ್ತಾರೆ.

ಮೇಲೆ ಓದಲಾದ ಕ್ರ. ಸಂ. (1)ರ ಸರ್ಕಾರದ ಆದೇಶದಲ್ಲಿ 2022-23ನೇ ಸಾಲಿಗೆ ಸಹಕಾರಿಗಳಿಗಾಗಿ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಜಾರಿಗೊಳಿಸಲು ಹಾಗೂ ಹೊಸ ಸದಸ್ಯರನ್ನು ನೋಂದಾಯಿಸುವ ಅವಧಿಯನ್ನು **ದಿನಾಂಕ:01-11-2022 ರಿಂದ 31-12-2022 ರವರೆಗೆ** ನಿಗದಿಗೊಳಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರ. ಸಂ. (2)ರ ಮುಖ್ಯಕಾರ್ಯನಿರ್ವಹಣಾಧಿಕಾರಿ, ಯಶಸ್ವಿನಿ ಸಹಕಾರಿ ಸದಸ್ಯರ ಆರೋಗ್ಯ ರಕ್ಷಣಾ ಟ್ರಸ್ಟ್ ಇವರ ಟಿಪ್ಪಣಿ ದಿನಾಂಕ:31-12-2022 ರಲ್ಲಿ, ಸರ್ಕಾರವು ಯಶಸ್ವಿನಿ ಯೋಜನೆಯ ಸದಸ್ಯತ್ವ ನೋಂದಣಿ ದಿನಾಂಕದ ಅವಧಿಯನ್ನು ದಿನಾಂಕ:31-12-2022ರ ವರೆಗೆ ನಿಗದಿಪಡಿಸಿದ್ದು, ಈ ಅವಧಿಯಲ್ಲಿ ಅರ್ಹವಿರುವ ಎಲ್ಲಾ ಸದಸ್ಯರನ್ನು ನೋಂದಾಯಿಸಲು ಸಾಧ್ಯವಾಗಿರುವುದಿಲ್ಲವೆಂದು ಹಾಗೂ ಅನೇಕ ಸಹಕಾರ ಸಂಘಗಳ ಸದಸ್ಯರು, ಸಹಕಾರಿಗಳು ಹಾಗೂ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳು ನೋಂದಣಿ ಅವಧಿಯನ್ನು ವಿಸ್ತರಿಸುವಂತೆ ಕೋರಿರುವುದಾಗಿ ತಿಳಿಸಿರುತ್ತಾರೆ. ಮುಂದುವರೆದು, ಯೋಜನೆಗೆ ನಿಗಧಿಪಡಿಸಿರುವ 30 ಲಕ್ಷಗಳ ನೋಂದಣಿ ಗುರಿಯನ್ನು ಸಾಧಿಸಲು ನೋಂದಣಿ ದಿನಾಂಕದ ಅವಧಿಯನ್ನು ವಿಸ್ತರಿಸುವುದು ಸಮಂಜಸವೆಂದು ತಿಳಿಸುತ್ತಾ, ಸದಸ್ಯತ್ವ ನೋಂದಣಿ ಅವಧಿಯನ್ನು ವಿಸ್ತರಿಸುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಒ 154 (1) ಸಿಎಲ್‌ಎಸ್ 2022, ದಿನಾಂಕ: 02-01-2023.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2022-23ನೇ ಸಾಲಿಗೆ ಸಹಕಾರಿಗಳಿಗಾಗಿ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಜಾರಿಗೊಳಿಸಲು ಹಾಗೂ ಹೊಸ ಸದಸ್ಯರನ್ನು ನೋಂದಾಯಿಸುವ ಅವಧಿಯನ್ನು **ದಿನಾಂಕ:31-01-2023 ರವರೆಗೆ** ವಿಸ್ತರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

2/1/2023.

**(ಎ.ಸಿ. ದಿವಾಕರ್)**
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

# ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯ ಕುರಿತು ಮಾಹಿತಿ

– ಶ್ರೀ ರಘುನಂದನ ಕೆ., ಉಪಪ್ರಧಾನ ವ್ಯವಸ್ಥಾಪಕ, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು

ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಪರಿಷ್ಕರಿಸಿ ಸಹಕಾರ ಇಲಾಖೆಯ ಮೂಲಕ ಮರುಜಾರಿಗೊಳಿಸಿ ಅನುಷ್ಠಾನಗೊಳಿಸಲು ದಿನಾಂಕ:12.10.2022ರಂದು ರಾಜ್ಯ ಸರ್ಕಾರ ಆದೇಶಿಸಿದೆ. ಅದರಂತೆ, ಸಹಕಾರಿ ಸಂಸ್ಥೆಗಳ ಮೂಲಕ 01.01.2023 ರಿಂದ 31.12.2023 ರವರೆಗಿನ ಅವಧಿಗಾಗಿ ಯಶಸ್ವಿನಿ ಯೋಜನೆಯಡಿಯಲ್ಲಿ ಸಹಕಾರ ಸಂಸ್ಥೆಗಳ ಸದಸ್ಯರ ನೋಂದಣಿ ಪ್ರಕ್ರಿಯೆಯು ಜಾರಿಯಲ್ಲಿದೆ.

ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯ ಪರಿಚಯ ಹಾಗೂ ಯೋಜನೆಯ ಅನುಷ್ಠಾನದಲ್ಲಿ ಸಹಕಾರ ಸಂಸ್ಥೆಗಳ ಪಾತ್ರದ ಬಗ್ಗೆ ನವೆಂಬರ್ ಮಾಹೆಯ ಸ್ವಾಭಿಮಾನಿ ಸಹಕಾರಿಯಲ್ಲಿ ಲೇಖನ ಪ್ರಕಟಿಸಲಾಗಿದೆ, ಯಶಸ್ವಿನಿ ಯೋಜನೆಯ ಕುರಿತ ಪ್ರಶ್ನೋತ್ತರಗಳನ್ನು ಡಿಸೆಂಬರ್ ಮಾಹೆಯ ಸ್ವಾಭಿಮಾನಿ ಸಹಕಾರಿಯಲ್ಲಿ ಪ್ರಕಟಿಸಲಾಗಿದೆ. ಪ್ರಸ್ತುತ, ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯಲ್ಲಿ ಆಗಿರುವ ಬದಲಾವಣೆಗಳ ಬಗ್ಗೆ ಹಾಗೂ ಇತ್ತೀಚೆಗಿನ ಬೆಳವಣಿಗೆಗಳ ಬಗ್ಗೆ ಈ ಸಂಚಿಕೆಯಲ್ಲಿ ಈ ಕೆಳಕಂಡ ಮಾಹಿತಿಯನ್ನು ಸಹಕಾರ ಸಂಸ್ಥೆಗಳ ಅವಗಾಹನೆಗಾಗಿ ಪ್ರಕಟಿಸಿದೆ.

**ಸದಸ್ಯರ ನೋಂದಣಿ ದಿನಾಂಕ ವಿಸ್ತರಣೆ :** ಸಹಕಾರ ಸಂಸ್ಥೆಗಳ ಸದಸ್ಯರನ್ನು ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯಡಿಯಲ್ಲಿ ನೋಂದಣಿ ಮಾಡುವ ಅವಧಿಯನ್ನು 31 ಜನವರಿ 2023 ರವರೆಗೆ ವಿಸ್ತರಿಸಿ ರಾಜ್ಯ ಸರ್ಕಾರ ದಿನಾಂಕ:02.01.2023ರಂದು ಆದೇಶ ಹೊರಡಿಸಿದೆ. ಈ ಮೊದಲು ಸದಸ್ಯರ ನೋಂದಣಿ ಅವಧಿಯನ್ನು ದಿನಾಂಕ:01.11.2022 ರಿಂದ ದಿನಾಂಕ:31.12.2022 ರವರೆಗೆ ನಿಗದಿಪಡಿಸಲಾಗಿತ್ತು. ಹೆಚ್ಚಿನ ಸಂಖ್ಯೆಯ ಸದಸ್ಯರಿಗೆ ಈ ಯೋಜನೆಯನ್ನು ತಲುಪಿಸುವ ಉದ್ದೇಶದಿಂದ ಸಹಕಾರ ಸಂಸ್ಥೆಗಳು ಸದಸ್ಯರ ನೋಂದಣಿ ದಿನಾಂಕವನ್ನು ವಿಸ್ತರಿಸುವಂತೆ ರಾಜ್ಯ ಸರ್ಕಾರವನ್ನು ವಿನಂತಿಸಿದ್ದವು.

**ಮಾರ್ಗಸೂಚಿಯಲ್ಲಿ ಬದಲಾವಣೆ :**

ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯ ಅನುಷ್ಠಾನದ ಕುರಿತು ರಾಜ್ಯ ಸರ್ಕಾರವು ದಿನಾಂಕ:12.10.2022 ರಂದು ಸಂಖ್ಯೆ: ಸಿಒ/154(1)/ಸಿಎಲ್ಎಸ್/2022ರ ಮಾರ್ಗಸೂಚಿಯನ್ನು ಹೊರಡಿಸಿರುತ್ತದೆ. ದಿನಾಂಕ:06.12.2022 ರಂದು ನಡೆದ ಯಶಸ್ವಿನಿ ಟ್ರಸ್ಟ್‌ನ ಆಡಳಿತ ಮಂಡಳಿ ಸಭೆಯಲ್ಲಿ ಯಶಸ್ವಿನಿ ಯೋಜನೆಯ ಮಾರ್ಗಸೂಚಿಯಲ್ಲಿ ಈ ಕೆಳಕಂಡ ಬದಲಾವಣೆ ಮಾಡಲಾಗಿದೆ.

- ಬದಲಾದ ಮಾರ್ಗಸೂಚಿಯನ್ವಯ ರೂ.30,000/– ವರೆಗಿನ ಅಥವಾ ವಾರ್ಷಿಕ ರೂ.3,60,000/– ವರೆಗಿನ ವೇತನ ಪಡೆಯುವ ಖಾಸಗಿ ನೌಕರರಿಗೆ ಕೂಡ ಯಶಸ್ವಿನಿ ಯೋಜನೆಯಡಿ ನೋಂದಾಯಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಈ ಮೊದಲು ಮಾರ್ಗಸೂಚಿಯ ಕ್ರಮ ಸಂಖ್ಯೆ 10 ರಲ್ಲಿ ವೇತನ ಪಡೆಯುತ್ತಿರುವ ಖಾಸಗಿ ನೌಕರರು ಯಶಸ್ವಿನಿ ಯೋಜನೆಗೆ ಅರ್ಹರಲ್ಲ ಎಂದು ತಿಳಿಸಲಾಗಿತ್ತು. ಪ್ರಸ್ತುತ ಮಾರ್ಗಸೂಚಿಗೆ ಬದಲಾವಣೆ ಮಾಡಿ ಖಾಸಗಿ ನೌಕರರಿಗೆ ಅವಕಾಶ ಕಲ್ಪಿಸಲಾಗಿದೆ.

- ಯಶಸ್ವಿನಿ ಯೋಜನೆಯಡಿಯ ನೋಂದಣಿಯಾಗುವ ಒಂದು ಕುಟುಂಬದ ಒಂದು ಕಾರ್ಡಿಗೆ ರೂ.10/– ಗಳನ್ನು ಸಹಕಾರ ಸಂಘದ ಸಾದಿಲ್ವಾರು ವೆಚ್ಚಕ್ಕೆ ಮತ್ತು ಯಶಸ್ವಿನಿ ಸದಸ್ಯರನ್ನು ನೋಂದಾಯಿಸಲು ಶ್ರಮಿಸಿದವರಿಗೆ ಪ್ರೋತ್ಸಾಹಧನವನ್ನಾಗಿ ನಿಗದಿಪಡಿಸಲಾಗಿತ್ತು. ಪ್ರಸ್ತುತ ಈ ಪ್ರೋತ್ಸಾಹಧನವನ್ನು ರೂ.20/–ಕ್ಕೆ ಹೆಚ್ಚಿಸಲಾಗಿದೆ.

**ಸಂಪರ್ಕ ವಿವರ :**

- ಯಶಸ್ವಿನಿ ಯೋಜನೆಯನ್ನು ಸಹಕಾರ ಇಲಾಖೆ ಮೂಲಕ ಜಾರಿಗೊಳಿಸುತ್ತಿರುವುದರಿಂದ ಆಯಾ ಜಿಲ್ಲೆಯ ಯಶಸ್ವಿನಿ ನೋಂದಣಿ ಹಾಗೂ ನೋಂದಣಿಯ ಕುರಿತು ಅಗತ್ಯ ಮಾಹಿತಿಗಳನ್ನು ಆಯಾ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರ ಕಛೇರಿಯಲ್ಲಿ ಪಡೆಯಬಹುದಾಗಿದೆ.

- ಮುಂದುವರೆದು, ಯಶಸ್ವಿನಿ ಯೋಜನೆಯ ಕುರಿತಂತೆ ಜಿಲ್ಲಾ ಸಮನ್ವಯಾಧಿಕಾರಿಗಳನ್ನು ನೇಮಕ ಮಾಡಿ ಪಟ್ಟಿಯನ್ನು ಪ್ರಕಟಿಸಲಾಗಿದ್ದು ಯಶಸ್ವಿನಿ ಯೋಜನೆಯಡಿಯಲ್ಲಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವ ಸಂದರ್ಭದಲ್ಲಿ ಅಗತ್ಯ ಮಾಹಿತಿ ಹಾಗೂ ಸಹಕಾರಕ್ಕಾಗಿ ಜಿಲ್ಲಾ ಸಮನ್ವಯಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

- ಸಹಕಾರ ಸಂಘಗಳ ನಿಬಂಧಕರ ಕಛೇರಿಯ ದೂರವಾಣಿ ಸಂಖ್ಯೆ ಹಾಗೂ ಯಶಸ್ವಿನಿ ಜಿಲ್ಲಾ ಸಮನ್ವಯಾಧಿಕಾರಿಗಳ ಸಂಪರ್ಕ ವಿವರಗಳು https://sahakarasindhu.karnataka.gov.in/page/YESHASVINI/kn ವೆಬ್‌ಸೈಟಿನಲ್ಲಿ ಲಭ್ಯವಿದೆ.

**ಕಾರ್ಡ್ ವಿತರಣೆ :**

- ಯಶಸ್ವಿನಿ ಯೋಜನೆಯಡಿ ನೋಂದಣಿಯಾದ ಸದಸ್ಯರ ಕುಟುಂಬಕ್ಕೆ ಪ್ಲಾಸ್ಟಿಕ್ ಕಾರ್ಡನ್ನು ನೀಡಲಾಗುತ್ತಿದ್ದು, ಸದರಿ ಕಾರ್ಡನ್ನು ಹಾಜರುಪಡಿಸಿ ದಿನಾಂಕ:01.01.2023 ರಿಂದ ಯಶಸ್ವಿನಿ ಯೋಜನೆಯ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಯಶಸ್ವಿನಿ ಫಲಾನುಭವಿಗಳು ನಗದು ರಹಿತ ಚಿಕಿತ್ಸೆ ಸೌಲಭ್ಯ ಪಡೆಯಬಹುದಾಗಿದೆ. ಆದರೆ, ಕಾರ್ಡ್ ಮುದ್ರಣ ಕಾರ್ಯ ಇನ್ನೂ ಪೂರ್ಣ ಪ್ರಮಾಣದಲ್ಲಿ ಮುಗಿದಿರುವುದಿಲ್ಲ.

- ಈ ಹಂತದಲ್ಲಿ ಕಾರ್ಡ್ ದೊರೆಯುವ ಪೂರ್ವದಲ್ಲಿ ಫಲಾನುಭವಿಗಳು ಚಿಕಿತ್ಸೆ ಪಡೆಯುವುದಾದಲ್ಲಿ, ಸದಸ್ಯತ್ವ ಪಡೆದಿರುವ ಸಹಕಾರ ಸಂಘದ ಕಾರ್ಯದರ್ಶಿಯವರಿಂದ ದಾಖಲೆಗಳ ದೃಢೀಕರಣದೊಂದಿಗೆ ಸಹಕಾರ ಸಂಘಗಳ ಉಪನಿಬಂಧಕರಿಂದ ಶಿಫಾರಸ್ಸು ಪತ್ರವನ್ನು ಪಡೆದು ಆಸ್ಪತ್ರೆಗೆ ಹಾಜರುಪಡಿಸಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿಯೇ ಕಾರ್ಡ್ ವಿತರಿಸಿ ಚಿಕಿತ್ಸೆ ನೀಡಲು ಅವಕಾಶ ಕಲ್ಪಿಸಲಾಗಿದೆ.

**ಆರೋಗ್ಯ ಪ್ಯಾಕೇಜ್ ಹಾಗೂ ನೆಟ್‌ವರ್ಕ್ ಆಸ್ಪತ್ರೆಗಳ ಪಟ್ಟಿ ಪ್ರಕಟಣೆ :** ಯಶಸ್ವಿನಿ ಯೋಜನೆಯಡಿಯಲ್ಲಿ ಲಭ್ಯವಿರುವ ಚಿಕಿತ್ಸೆಗಳ ಪಟ್ಟಿಯನ್ನು ಹಾಗೂ ಜಿಲ್ಲಾವಾರು ನೆಟ್‌ವರ್ಕ್ ಆಸ್ಪತ್ರೆಗಳ ಪಟ್ಟಿಯನ್ನು https://sahakarasindhu.karnataka.gov.in/page/YESHASVINI/kn ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ. ಆರೋಗ್ಯ ಪ್ಯಾಕೇಜ್‌ನಡಿಯಲ್ಲಿ 1650 ಚಿಕಿತ್ಸೆಗಳು ಒಳಗೊಂಡಿದ್ದು, ಯಶಸ್ವಿನಿ ಯೋಜನೆಯಡಿಯಲ್ಲಿ ಪರಿಗಣಿಸಲಾಗುವ ಸದರಿ ಚಿಕಿತ್ಸೆಗಳ ಖಾಸಗಿ ಆಸ್ಪತ್ರೆಗಳ ದರ ಮತ್ತು ಸರ್ಕಾರಿ ಆಸ್ಪತ್ರೆಗಳ ದರದ ವಿವರವನ್ನು ಕೂಡ ಪಟ್ಟಿಯಲ್ಲಿ ನೀಡಲಾಗಿದೆ. ಒಟ್ಟೂ 362 ಆಸ್ಪತ್ರೆಗಳನ್ನು ಯಶಸ್ವಿನಿ ಯೋಜನೆಯಡಿಯ ನೆಟ್‌ವರ್ಕ್ ಆಸ್ಪತ್ರೆಗಳನ್ನಾಗಿ ಗುರುತಿಸಿ ವಿಳಾಸ ಹಾಗೂ ದೂರವಾಣಿ ಸಂಪರ್ಕ ಸಂಖ್ಯೆಗಳೊಂದಿಗೆ ಪಟ್ಟಿಯನ್ನು ಪ್ರಕಟಿಸಲಾಗಿದೆ.

## ಸೌಹಾರ್ದ ಸಹಕಾರ ಸಂಘಗಳು ಬ್ಯಾಂಕ್/ ಬ್ಯಾಂಕರ್/ ಬ್ಯಾಂಕಿಂಗ್ ಪದಗಳನ್ನು ಬಳಕೆ ಮಾಡದಿರುವ ಕುರಿತು ಆರ್.ಬಿ.ಐ ಸುತ್ತೋಲೆ

आज़ादी का अमृत महोत्सव

भारतीय रिज़र्व बैंक
**RESERVE BANK OF INDIA**
www.rbi.org.in

Azadi Ka Amrit Mahotsav

**BLR.DOS.MAG.No.S1458/06.01.012/2022-23** **December 06, 2022**

The President
Karnataka State Souharda Federal Cooperative Ltd.,
Souharda Sahakari Soudha
# 68, 1st Floor, Margosa Road
Malleswaram
Bengaluru - 560055.

Sir,

**Ref: Usage of the word "bank", "banker" or "banking" by certain Co-operative societies**

With reference to the captioned subject, it is observed that some Co-operative Souharda Societies and print media (i.e., Prajavani newspaper article dated December 02, 2022, has mentioned Kanva Souharda Co-operative bank instead of Society) are using the words "bank", "banker" or "banking" as part of their names.

2. In this connection, you are kindly requested to take necessary steps/action to strictly refrain/stop such entities within the state from using the words "bank", "banker" or "banking" as part of its name, or in connection with its business.

3. Please acknowledge the receipt.

Yours faithfully,

Meenakshi

(Meenakshi Gad)
General Manager

## ಕ್ಯಾಲೆಂಡರ್ ಬಿಡುಗಡೆ



**ಹೊಸಪೇಟೆ :** ದಿನಾಂಕ 10.12.2022ನೇ ಶನಿವಾರದಂದು ಪ್ರಗತಿಕೃಷ್ಣ ಸೌಹಾರ್ದ ಪತ್ತಿನ ಸಹಕಾರಿ ನಿ., ಹೊಸಪೇಟೆ ಸಹಕಾರಿಯ 2023ನೇ ವರ್ಷದ ಕ್ಯಾಲೆಂಡರನ್ನು ಸಂಘದ ಅಧ್ಯಕ್ಷರಾದ ಶ್ರೀ ಭರಮಪ್ಪ ಇವರು ಬಿಡುಗಡೆ ಮಾಡಿದರು. ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.



**ತುಮಕೂರು :** ದಿನಾಂಕ 08.12.2022 ರಂದು ಸಹಕಾರ ಇಲಾಖೆ ವತಿಯಿಂದ ತುಮಕೂರು ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶ್ರೀ ಡಾ. ಚಂದ್ರಶೇಖರ್ ರವರ ಅಧ್ಯಕ್ಷತೆಯಲ್ಲಿ ಸಹಕಾರ ಭವನ, ಜಿಲ್ಲಾ ಸಹಕಾರ ಯೂನಿಯನ್ ಕಚೇರಿ, ತುಮಕೂರು ಇಲ್ಲಿ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆ ಕುರಿತು ಮಾಹಿತಿ ಹಾಗೂ ಹೊಸ ಸದಸ್ಯರ ನೋಂದಣಿ ಕುರಿತು ಸಭೆಯನ್ನು ಆಯೋಜಿಸಲಾಗಿತ್ತು.



**ಮೈಸೂರು :** ದಿನಾಂಕ : 30–12–2022ರ ಶುಕ್ರವಾರ ಪರಿವರ್ತನ ವಿವಿಧೋದ್ದೇಶ ಮಹಿಳಾ ಸೌಹಾರ್ದ ಸಹಕಾರಿ ನಿ., ಇದರ 2023ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆಯನ್ನು ಮೈಸೂರು ಮಹಾನಗರ ಪಾಲಿಕೆಯ ಪೂಜ್ಯ ಮಹಾಪೌರರಾದ ಸನ್ಮಾನ್ಯ ಶ್ರೀ ಶಿವಕುಮಾರ್ ರವರು ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ನಮ್ಮ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಲಲಿತ ಕೆ.ಎಸ್, ಉಪಾಧ್ಯಕ್ಷರಾದ ಶ್ರೀಮತಿ ಲಕ್ಷ್ಮಿ ಮತ್ತು ನಿರ್ದೇಶಕರುಗಳಾದ ಶ್ರೀಮತಿ ರತ್ನಮ್ಮ ಹೆಚ್.ಜಿ., ಹೇಮಾಗಂಗಪ್ಪ, ಗೀತಾ ರಾಜಶೇಖರ್, ವಿಜಯ, ಮಂಜುಳಮ್ಮ ಸಿ, ಶಿವಮ್ಮ, ಭಾಗ್ಯಮ್ಮ, ರಶ್ಮಿ ಇವರುಗಳು ಉಪಸ್ಥಿತರಿದ್ದರು ಈ ವಿವರಗಳನ್ನು ತಮ್ಮ ಅವಗಾಹನೆಗಾಗಿ ಸಲ್ಲಿಸಲಾಗಿದೆ.



**ಹಾವೇರಿ :** ದಿನಾಂಕ 16.12.2022 ರಂದು ಶ್ರೀ ಪುಟ್ಟರಾಜ ಗವಾಯಿ–ಸಚೇತನ ವಿವಿದ್ದೋದ್ದೇಶಗಳ ಸೌಹಾರ್ದ ಸಹಕಾರಿ ನಿಯಮಿತ ಸಹಕಾ–ರಿಯ 11ನೇ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ನಂತರ ಸಹಕಾ–ರಿಯ ಹೊಸ ಕ್ಯಾಲೆಂಡರ ಡೈರಿಗಳ ಬಿಡುಗಡೆ ಸಮಾರಂಭವನ್ನು ನೇರವೇರಿಸಲಾಯಿತು.



**ಸದಾಶಿವಗಡ :** ಜೈ ದುರ್ಗಾಮಾತಾ ಕ್ರೇಡಿಟ್ ಸೌಹಾರ್ದ ಸಹಕಾರಿ ಸಂಘ ನಿಯಮಿತ ಸದಾಶಿವಗಡ ಸಹಕಾರಿಯ ಕುಮಟಾ ಶಾಖೆಯ ಉದ್ಘಾಟನಾ ಸಮಾರಭವು ದಿನಾಂಕ 07/11/2022 ರಂದು ಶ್ರೀ. ದಿನಕರ ಶೇಟ್ಟಿ ಮಾನ್ಯ ಶಾಸಕರು ಕುಮಟಾ–ಹೊನ್ನಾವರ ವಿಧಾನ ಸಭಾ ಕ್ಷೇತ್ರ ಇವರು ಉದ್ಘಾಟಿಸಿದರು, ಈ ಸಮಯದಲ್ಲಿ ಶ್ರೀಮತಿ. ಅನುರಾಧಾ ಬಾಳೇರಿ, ಫಾ। ಉರ್ಬನ್ ಸಂತೋಷ ಫೆರ್ನಾಂಡಿಸ್, ಶ್ರೀ. ಎನ್ ಟಿ ಪ್ರಮೊದ ರಾವ್, ಶ್ರೀ. ಮಹಮ್ಮದ್ ಶಫಿ ಶೇಖ್ ಹಾಗೂ ಸಹಕಾರಿಯ ಮುಖ್ಯಸ್ಥರು ಸಹಕಾ–ರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಮೈಸೂರು :** ದಿನಾಂಕ 02.01.2023 ರಂದು ವಿಶ್ವ ಮಾನವ ಸೌಹಾರ್ದ ಸಹಕಾರಿ ನಿ., ಪಿರಿಯಾಪಟ್ಟಣ ಮೈಸೂರು ಸಹಕಾರಿಯ ಕ್ಯಾಲೆಂಡರ್ ಬಿಡುಗಡೆಯನ್ನು ಮೈಸೂರು ಜಿಲ್ಲಾ ಸಂಯೋಜಕರಾದ ಶ್ರೀ ಸುರೇಶ ಇವರು ನೆರವೇರಿಸಿದರು. ಈ ಸಂದರ್ಭದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಗೋವಿಂದೇಗೌಡ, ಉಪಾಧ್ಯಕ್ಷರಾದ ಶ್ರೀ ರಾಜೇಗೌಡರು, ಭೋತನಹಳ್ಳಿ ಮತ್ತು ಎಲ್ಲಾ ನಿರ್ದೇಶಕರು ಉಪಸ್ಥಿತರಿದ್ದರು.

# ಉಚಿತ ಆರೋಗ್ಯ ತಪಾಸಣಾ ಶಿಬಿರ



**ಬೆಳಗಾವಿ :** ದಿನಾಂಕ 19.11.2022 ರಂದು ಶ್ರೀ ಹರಿದಾಸ ಕನಕ ವಿವಿಧ ಉದ್ದೇಶಗಳ ಸೌಹಾರ್ದ ಸಹಕಾರಿ ನಿ., ಕೊಣ್ಣೂರ ಸಹಕಾರಿಯಲ್ಲಿ ಹೃದಯದ ತೊಂದರೆ, ಮೂತ್ರದ ತೊಂದರೆ, ಬೆನ್ನಿನ ಚಪ್ಪೆಯ ಮತ್ತು ಮೊಣಕಾಲು ತೊಂದರೆ, ಕಣ್ಣಿನ ಸಮಸ್ಯೆ ಇರುವ ಜನತೆಗೆ ಉಚಿತ ಆರೋಗ್ಯ ತಪಾಸನಾ ಶಿಬಿರವನ್ನು ಆಯೋಜಿಸಲಾಯಿತು.

ಶಿಬಿರದಲ್ಲಿ ಹೃದಯ ಚಿಕಿತ್ಸೆ ತಜ್ಞರು, ಯಲಬು ಮತ್ತು ಕೀಲು ತಜ್ಞರು ಹಾಗೂ ಕಣ್ಣಿನ ತಪಾಸಕರು ಪಾಯೋಸ್ ಮೇಡಿಲಿಂಕ್ಸ್, ಜಯಸಿಂಗಪೂರ, ಸತೀಶ್ ಪಾಟೀಲ ಇವರು ಉಪಸ್ಥಿತರಿದ್ದರು. ವೈದ್ಯಕೀಯ ತಂಡದ ನೇತೃತ್ವದಲ್ಲಿ ಸಹಕಾರಿಯ ಆವರಣದಲ್ಲಿ 300 ಜನರಿಗೆ ಉಚಿತವಾಗಿ ಆರೋಗ್ಯ ತಪಾಸಣೆ ಜೊತೆಗೆ ಔಷದೋಪಚಾರ ಹಾಗೂ ಕನ್ನಡಕನ್ನು ವಿತರಿಸಲಾಗಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು, ಗ್ರಾಮ ಪಂಚಾಯತ್ ಅಧ್ಯಕ್ಷರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಬಾಗಲಕೋಟ :** ದಿನಾಂಕ 27.11.2022 ರಂದು ಶ್ರೀ ಮಂಗಲಾದೇವಿ ಸೌಹಾರ್ದ ಸಹಕಾರಿ ಸಂಘ ನಿ., ಶಿರಗುಪ್ಪಿ ಸಹಕಾರಿ ಹಾಗೂ ಶ್ರೀ ಜಂಬುಕೇಶ್ವರ ಆಸ್ಪತ್ರೆ ಜಮಖಂಡಿ ಇವರ ಸಂಯುಕ್ತ ಆಶ್ರಯದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಶ್ರೀ ಮಂಗಲಾದೇವಿ ದೇವಸ್ಥಾನದ ಆವರಣದಲ್ಲಿ ಯಶಸ್ವಿಯಾಗಿ ಜರುಗಿತು.

ಶಿಬಿರದಲ್ಲಿ ಮದುಮೇಹ ತಜ್ಞರು ಹಾಗೂ ಜನರಲ್ ಮೆಡಿಸಿನ್ ವೈದ್ಯರಾದ ಡಾ. ಅಮರ ಬಾಡಗಿ ಇವರು ಭಾಗವಹಿಸಿ ಸಹಕಾರಿ ಸಂಘದ ಸದಸ್ಯರಿಗೆ ಎಲ್ಲ ತರಹದ ಚೆಕ್‌ಅಪ್ ಗಳನ್ನು ಉಚಿತವಾಗಿ ಮಾಡಿದರು ಹಾಗೂ ವೈದ್ಯಕೀಯ ಸಲಹೆ ನೀಡಿದರು. ಶಿಬಿರದಲ್ಲಿ ಒಟ್ಟು 142 ಜನ ತಪಾಸಣೆಗಾಗಿ ಭಾಗವಹಿಸಿದರು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಬೈಂದೂರು:** ಶ್ರೀರಾಮ ಸೌಹಾರ್ದ ಕ್ರೆಡಿಟ್ ಕೋ ಅಪರೇಟಿವ್ ಸೊಸೈಟಿ ಇದರ ನಾಗೂರು ಶಾಖೆಯ ಗ್ರಾಹಕರ ಸಮಾವೇಶ ಮತ್ತು ಪೊಲೀಸ್ ಮಾಹಿತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಶ್ರೀರಾಮ ಸೌಹಾರ್ದ ಸಹಕಾರಿ ಸಂಘವು ಉತ್ತಮ ಸೌಹಾರ್ದ ಸಹಕಾರಿ ಪ್ರಶಸ್ತಿ ಪಡೆದ ಬಗ್ಗೆ ಎಲ್ಲ ಗ್ರಾಹಕರನ್ನು ಅಭಿನಂದಿಸಿದರು. ಎಲ್ಲರ ಸಹಕಾರದಿಂದ ಈ ಪ್ರಶಸ್ತಿ ಪಡೆಯಲು ಸಾಧ್ಯವಾಗಿದೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಬೈಂದೂರು ಆರಕ್ಷಕ ಠಾಣೆಯ ತನಿಖಾ ವಿಭಾಗದ ಉಪ ನಿರೀಕ್ಷಕರಾದ ಮಹೇಶ್ ಕಂಬಿ ಇಲಾಖಾ ಮಾಹಿತಿ ನೀಡಿ ಸಮಾಜದಲ್ಲಿ ಶಾಂತಿಯುತವಾಗಿ ನಡೆಯಲು ಎಲ್ಲರ ಸಹಕಾರ ಬೇಕು. ಆ ನಿಟ್ಟಿನಲ್ಲಿ ಪೊಲೀಸ್ ಇಲಾಖೆಯೊಂದಿಗೆ ಸಾರ್ವಜನಿಕರು ಸಹಕರಿಸಬೇಕು ಎಂದು ಹೇಳಿದರು.

ಗ್ರಾಹಕರ ಮತ್ತು ಸದಸ್ಯರ ಸಹಕಾರದಿಂದ ಸಹಕಾರಿ ಸಂಘಗಳು ಅತ್ಯಂತ ಯಶಸ್ವಿಯಾಗಿ ಮುನ್ನಡೆಯುತ್ತಿವೆ. ಕೇವಲ ಆಡಳಿತ ಮಂಡಳಿಯಿಂದ ಮಾತ್ರ ಸಹಕಾರಿ ಸಂಘಗಳು ಅಭಿವೃದ್ಧಿ ಹೊಂದುವುದಲ್ಲ. ಸದಸ್ಯರು ಮತ್ತು ಗ್ರಾಹಕರ ಉತ್ತಮ ಸ್ಪಂದನೆ ಬಹಳ ಮುಖ್ಯವಾಗಿದೆ. ಜನರಿಗೆ ಉತ್ತಮ ಸೇವೆ ಸಿಗಲು ಸಿಬ್ಬಂದಿಗಳ ಪ್ರಾಮಾಣಿಕ ದುಡಿಮೆ ಕಾರಣವಾಗುತ್ತದೆ ಎಂದು ಶ್ರೀರಾಮ ಸೌಹಾರ್ದ ಕೋ ಅಪರೇಟಿವ್ ಸೊಸೈಟಿ ಬೈಂದೂರು ಇದರ ಅಧ್ಯಕ್ಷರಾದ ಎಸ್. ರಾಜು ಪೂಜಾರಿ ಹೇಳಿದರು.



**ಸಿರವಾರ :** ದಿನಾಂಕ 01–01–2023 ರಂದು ವಿವೇಕ್ ಪತ್ತಿನ ಸೌಹಾರ್ದ ಸಹಕಾರಿ ನಿ. ಸಿರವಾರ ಸಹಕಾರಿಯು ಸೌಹಾರ್ದ ಸಹಕಾರಿ ದಿನಚರಣೆಯ ಧ್ವಜಾರೋಹಣವನ್ನು ಸಹಕಾರಿಯ ಸಂಸ್ಥಾಪಕರಾದ ಶ್ರೀ ಮಹೇಶ ಕೊಳ್ಳಿ ಇವರು ನೇರವೇರಿಸಿದರು.

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ 22ನೇ ಸೌಹಾರ್ದ ಸಹಕಾರಿ ದಿನಾಚರಣೆ ಆಚರಣೆ



**ಚಾಮರಾಜನಗರ :** ಶ್ರೀ ಮದ್ದಾನೇಶ್ವರ ಮಹಿಳಾ ಸೌಹಾರ್ದ ಸಹಕಾರಿ ನಿ., ಗುಂಡ್ಲುಪೇಟೆ ಇದರ ಕಛೇರಿಯಲ್ಲಿ ನಡೆದ "ಸೌಹಾರ್ದ ಸಹಕಾರಿ ದಿನಾಚರಣೆ " ಅಂಗವಾಗಿ ಧ್ವಜಾರೋಹಣ ವನ್ನು ಅಧ್ಯಕ್ಷರಾದ ಶ್ರೀಮತಿ ಮಂಜುಳ ಹೆಚ್.ಎಂ ರವರು ಉಪಾಧ್ಯಕ್ಷರಾದ ಶ್ರೀಮತಿ ನಾಗವೇಣಿ ಮತ್ತು ಸಿಇಓ ಕು. ಸಿಂಧು ರವರು ನೆರವೇರಿಸಿದರು.



**ಮಂಡ್ಯ :** 22ನೇ ಸೌಹಾರ್ದ ಸಹಕಾರಿ ದಿನಾಚರಣೆಯ ನಿಮಿತ್ತ ಸಮೃದ್ಧಿ ಭಾರತೀ ಸೌಹಾರ್ದ ಸಹಕಾರಿ ಸಂಘ ನಿ., ಮದ್ದೂರು ತಾಲ್ಲೂಕು ಕಛೇರಿಯಲ್ಲಿ ಅಧ್ಯಕ್ಷರಾದ ಶ್ರೀ ಸಿದ್ದಲಿಂಗಯ್ಯ ರವರು ಧ್ವಜಾರೋಹಣ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಸಿಬ್ಬಂದಿ ವರ್ಗದವರು ಮತ್ತು ಸಿಇಓ ಶ್ರೀಮತಿ ಪೂರ್ಣಿಮಾ ರವರು ಉಪಸ್ಥಿತರಿದ್ದರು.



**ಹಾಸನ ;** ಹಾಸನಾಂಬ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಹಾಸನ ಇದರ ಕಛೇರಿಯಲ್ಲಿ "ಸೌಹಾರ್ದ ಸಹಕಾರಿ ದಿನಾಚರಣೆ" ಅಂಗವಾಗಿ ಅಧ್ಯಕ್ಷರಾದ ಶ್ರೀ ಜ್ಞಾನೇಶ್ ರವರು ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ನಿರ್ದೇಶಕರು ಮತ್ತು ಸಿಇಓ ಶ್ರೀಮತಿ ಮಮತಾ ರವರು ಉಪಸ್ಥಿತರಿದ್ದರು.



**ಚಾಮರಾಜನಗರ :** 22ನೇ ಸೌಹಾರ್ದ ಸಹಕಾರಿ ದಿನಾಚರಣೆಯ ಅಂಗವಾಗಿ ಅಪರ್ಣಾಹನಿ ಸಮಗ್ರ ರೈತ ಉತ್ಪಾದಕರ ಮತ್ತು ಮಾರಾಟಗಾರರ ಸೌಹಾರ್ದ ಸಹಕಾರಿ ಸಂಘ ನಿ., ಕೊಳ್ಳೇಗಾಲ ಕಛೇರಿಯಲ್ಲಿ ಅಧ್ಯಕ್ಷರಾದ ಶ್ರೀ ರಾಜು ರವರು ಧ್ವಜಾರೋಹಣ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಆಡಳಿತ ಮಂಡಳಿ ನಿರ್ದೇಶಕರು ಮತ್ತು ಸಿಇಓ ರಂಗಸ್ವಾಮಿರವರು ಉಪಸ್ಥಿತರಿದ್ದರು.



**ಹಾಸನ :** ಆರ್ಯ ವೈಶ್ಯ ಸೌಹಾರ್ದ ಸಹಕಾರಿ ನಿ., ಬೇಲೂರು ಇದರ ಕಛೇರಿಯಲ್ಲಿ " ಸೌಹಾರ್ದ ಸಹಕಾರಿ ದಿನಾಚರಣೆ" ಅಂಗವಾಗಿ ಸಹಕಾರಿ ಅಧ್ಯಕ್ಷರಾದ ಶ್ರೀ ಬಿ ಟಿ ಕ್ರಿಷ್ಣ ಕುಮಾರ್ ಧ್ವಜಾರೋಹಣ ಕಾರ್ಯಕ್ರಮ ನೆರವೇರಿಸಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಬಿ ವಿ ಸಂಪತ್ ನಿರ್ದೇಶಕರು ಗಳಾದ ಹೆಚ್ ಆರ್ ವಿಶ್ವನಾಥ್ ಬಿ ಜಿ ರವಿಕುಮಾರ್, ಕೆ ಎಂ ಕೇಶವ, ಬಿ ಕೆ ಪವನ್, ಬಿ ಎ ಪ್ರಕಾಶ್, ಶ್ರೀಮತಿ ಸಿಂಧು, ಚೇತನ್ ಬಿ ಎ, ಸೌಮ್ಯ ಮತ್ತು ಸಿಇಓ ಬಿ ಜಿ ಫಣೀಂದ್ರ ರವರು ಉಪಸ್ಥಿತರಿದ್ದರು




**ಚಾಮರಾಜನಗರ :** 22ನೇ ಸೌಹಾರ್ದ ಸಹಕಾರಿ ದಿನಾಚರಣೆಯ ನಿಮಿತ್ತ ಶ್ರೀ ಪಾರ್ವತಿ ಸೌಹಾರ್ದ ಸಹಕಾರಿ ಸಂಘ ನಿ., ಕುದೇರು ಕಛೇರಿಯಲ್ಲಿ ಅಧ್ಯಕ್ಷರಾದ ಶ್ರೀ ಮಹಾದೇವ ಸ್ವಾಮಿ ರವರು ಧ್ವಜಾರೋಹಣ ನೆರವೇರಿಸಿದರು.




22ನೇ ವರ್ಷದ ಸೌಹಾರ್ದ ಸಹಕಾರಿ ದಿನಾಚರಣೆ ಅಂಗವಾಗಿ ಶ್ರೀ ಮುರುಘರಾಜೇಂದ್ರಸ್ವಾಮಿ ಸೌಹಾರ್ದ ಸಹಕಾರಿ ನಿ., ಮರಿಯಾಲ ಇದರ ಕಛೇರಿಯ ಆವರಣದಲ್ಲಿ ನಡೆದ ಧ್ವಜಾರೋಹಣ ಕಾರ್ಯಕ್ರಮದ ಸಾನಿಧ್ಯವನ್ನು ಶ್ರೀ ಮಠದ ಶ್ರೀ ಶ್ರೀ ಇಮ್ಮಡಿ ಮುರುಘರಾಜೇಂದ್ರಸ್ವಾಮಿಗಳು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಗೌರವ ಅಧ್ಯಕ್ಷರಾದ ಶ್ರೀ ಕಾಳನಹುಂಡಿ ಕುಮಾರಸ್ವಾಮಿ ರವರು, ಅಧ್ಯಕ್ಷರಾದ ಶ್ರೀ ಬಿ. ನಂಜುಂಡಸ್ವಾಮಿ ರವರು, ಆಡಳಿತ ಮಂಡಳಿ ನಿರ್ದೇಶಕರು ಮತ್ತು ಸಿಇಓ ಶ್ರೀಮತಿ ಸೌಮ್ಯ ರವರು ಉಪಸ್ಥಿತರಿದ್ದರು.



**ಚಾಮರಾಜನಗರ :** ಸಂಗಮ ಸೌಹಾರ್ದ ಸಹಕಾರಿ ಸಂಘ ನಿ., ಚಾಮರಾಜನಗರ ಇದರ ಕಛೇರಿಯಲ್ಲಿ ಸಹಕಾರಿಯ ನೂತನ 2023ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮ ಹಾಗೂ ಸೌಹಾರ್ದ ಸಹಕಾರಿ ದಿನಾಚರಣೆಯ ಅಂಗವಾಗಿ ಧ್ವಜಾರೋಹಣವನ್ನು ಸಹಕಾರಿ ಅಧ್ಯಕ್ಷರಾದ ಎಂ ರಾಘವೇಂದ್ರ ರವರು, ನೆರವೇರಿಸಿದರು. ಕಾರ್ಯಕ್ರಮದಲ್ಲಿ ನಿರ್ದೇಶಕರು ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಚಾಮರಾಜನಗರ :** ಮರ್ಚೆಂಟ್ಸ್ ಸೌಹಾರ್ದ ಕ್ರೆಡಿಟ್ ಕೋ–ಆಪ್ ಸೊಸೈಟಿ ಲಿ., ಚಾಮರಾಜನಗರ ಇದರ ಕಛೇರಿಯಲ್ಲಿ "ಸೌಹಾರ್ದ ಸಹಕಾರಿ ದಿನಾಚರಣೆ" ಯ ಅಂಗವಾಗಿ ಧ್ವಜಾರೋಹಣ ಕಾರ್ಯಕ್ರಮವನ್ನು ಸಹಕಾರಿ ಅಧ್ಯಕ್ಷರಾದ ಶ್ರೀ ಮಹೇಶ್ ರವರು ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಜಯಸಿಂಹ ರವರು, ನಿರ್ದೇಶಕರು ನೆರವೇರಿಸಿದರು.



22ನೇ ವರ್ಷದ ಸೌಹಾರ್ದ ಸಹಕಾರಿ ದಿನಾಚರಣೆ ಅಂಗವಾಗಿ ಶ್ರೀ ಮುಪ್ಪಿನ ಷಡಕ್ಷರದೇವ ಸೌಹಾರ್ದ ಸಹಕಾರಿ ನಿ., ಯಳಂದೂರು ಇದರ ಕಛೇರಿಯಲ್ಲಿ ನಡೆದ ಧ್ವಜಾರೋಹಣ ವನ್ನು ಶ್ರೀ ಶ್ರೀ ತೋಂಟದಾರ್ಯ ಸ್ವಾಮಿಗಳು ಮತ್ತು ಶ್ರೀ ಶ್ರೀ ಮರಿ ತೋಂಟದಾರ್ಯ ಸ್ವಾಮಿಗಳ ನೆರವೇರಿಸಿ ಸಹಕಾರಿಯ ನೂತನ 2023 ವರ್ಷದ ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.



**ಚಾಮರಾಜನಗರ :** 22ನೇ ಸೌಹಾರ್ದ ಸಹಕಾರಿ ದಿನಾಚರಣೆಯ ನಿಮಿತ್ತ ಚಾಮರಾಜನಗರ ವರ್ತಕರ ಸೌಹಾರ್ದ ಸಹಕಾರಿ ಸಂಘ ನಿ., ಚಾಮರಾಜನಗರ ಕಛೇರಿಯಲ್ಲಿ ಅಧ್ಯಕ್ಷರಾದ ಶ್ರೀ ಸಿ.ಪಿ ಪದ್ಮಪ್ರಸಾದ್ ರವರು ಧ್ವಜಾರೋಹಣ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸಹಕಾ–ರಿಯ ಆಡಳಿತ ಮಂಡಳಿ ಸದಸ್ಯರು ಮತ್ತು ಕಛೇರಿ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಮೈಸೂರು :** ಗ್ರಾಮೀಣ ನಿಧಿ ಸೌಹಾರ್ದ ಸಹಕಾರ ನಿಯಮಿತ ಇದರ ಕ್ಯಾಲೆಂಡರ್ ಬಿಡುಗಡೆಯನ್ನು ಮಾನ್ಯ ಶಾಸಕರಾದ ಶ್ರೀ ಸಾರಾ ಮಹೇಶ್ ರವರು ನೆರವೇರಿಸಿದರು.

# ಸಹಕಾರಿ ಸಂಸ್ಥೆಗಳಲ್ಲಿ ಹಣಕಾಸು ನಿರ್ವಹಣೆ

– ಮೂಲ : ಶ್ರೀ ಮಧುಕರ್ ಹೆಗಡೆ, ಮಾನ್ಯ ಸನ್ನದು ಲೆಕ್ಕಪರಿಶೋಧಕರು. ಅನುವಾದ : ದಿವ್ಯ ಟಿ., ಹಿರಿಯ ಸಹಾಯಕಿ, ಕರಾಸೌಸಂಸನಿ., ಬೆಂಗಳೂರು.

**ಹಣಕಾಸು ನಿರ್ವಹಣೆಯ ಅರ್ಥ :**

ನಿಧಿಗಳ ಸಂಗ್ರಹಣೆ ಮತ್ತು ಸಂಸ್ಥೆಯ ನಿಧಿಗಳ ಬಳಕೆಯಂತಹ ಹಣಕಾಸಿನ ಚಟುವಟಿಕೆಗಳನ್ನು ಯೋಜಿಸುವುದು, ಸಂಘಟಿಸುವುದು, ನಿರ್ದೇಶಿಸುವುದು ಮತ್ತು ನಿಯಂತ್ರಿಸುವುದು.

**ಹಣಕಾಸು ನಿರ್ವಹಣೆಯ ಉದ್ದೇಶಗಳು :**

ಒಂದು ಸಂಸ್ಥೆಯ/ ವ್ಯವಸ್ಥೆಯ ಜೀವಾಳ ಎಂದರೆ ಹಣಕಾಸು. ಈ ಹಣಕಾಸು ನಿರ್ವಹಣೆ ಉತ್ತಮವಾಗಿದ್ದರೆ ಸಹಕಾರಿ ಸಂಸ್ಥೆಗಳಲ್ಲಿ ಶಿಸ್ತುಬದ್ಧ ಕಾರ್ಯಚಟುವಟಿಕೆಗಳು ನಡೆಯಲು ಸಾಧ್ಯವಾಗುತ್ತದೆ. ಈ ಹಣಕಾಸು ನಿರ್ವಹಣೆಯಲ್ಲಿ ಏರುಪೇರಾದಲ್ಲಿ ಸಂಸ್ಥೆ ಹಿನ್ನೆಡೆಯನ್ನು ಅನುಭವಿಸುತ್ತದೆ. ಹಣಕಾಸು ನಿರ್ವಹಣೆಯ ಉದ್ದೇಶಗಳು ಈ ಕೆಳಕಂಡಂತಿದೆ;

- ಸದಸ್ಯರ ವಿಶ್ವಾಸವನ್ನು ರಕ್ಷಿಸಲು ಹಣದ ರಕ್ಷಕರಾಗಿರುವುದು.
- ಸಹಕಾರಿ ಸಂಸ್ಥೆಗೆ ನಿಯಮಿತ ಮತ್ತು ಸಮರ್ಪಕ ನಿಧಿಗಳ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು.
- ಸದಸ್ಯರಿಗೆ ಸಾಕಷ್ಟು ಆದಾಯವನ್ನು ಖಚಿತಪಡಿಸಿಕೊಳ್ಳಲು.
- ಸಹಕಾರಿಯ ಗಳಿಕೆಯ ಸಾಮರ್ಥ್ಯವನ್ನು ಸುಧಾರಿಸಲು.
- ನಿಧಿಯ ಅತ್ಯುತ್ತಮ ಬಳಕೆಯನ್ನು ಖಚಿತಪಡಿಸಿಕೊಳ್ಳಲು.
- ಸಂಸ್ಥೆಯ ವೆಚ್ಚವನ್ನು ಕಡಿಮೆ ಮಾಡಲು.
- ಆರ್ಥಿಕ ಸ್ಥಿರತೆಯನ್ನು ಒದಗಿಸಲು.
- ಅಪಾಯವನ್ನು ಕಡಿಮೆ ಮಾಡಲು.
- ಹೂಡಿಕೆಗಳ ಮೇಲೆ ಸುರಕ್ಷತೆ ಮತ್ತು ಸಾಕಷ್ಟು ಆದಾಯವನ್ನು ಖಚಿತಪಡಿಸಿಕೊಳ್ಳಲು.
- ಉತ್ತಮ ಬಂಡವಾಳ ರಚನೆಯನ್ನು ಯೋಜಿಸಲು – ಶೇರು ಬಂಡವಾಳ ಮತ್ತು ಸಾಲದ ನ್ಯಾಯಯುತ ಸಂಯೋಜನೆ.
- ನಿರ್ಣಾಯಕ ಹಣಕಾಸಿನ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಸಂಸ್ಥೆಗೆ ಸಹಾಯ ಮಾಡಲು.

**ಹಣಕಾಸು ನಿರ್ವಹಣೆಯ ಅಂಶಗಳು :**

**ಹಣಕಾಸು ನಿರ್ವಹಣೆಯ ಅಂಶಗಳು ಈ ಕೆಳಗಿನಂತಿದೆ;**

**1. ಹಣಕಾಸಿನ ನಿರ್ಧಾರಗಳು :**

i. ವಿವಿಧ ಮೂಲಗಳಿಂದ ನಿಧಿಗಳನ್ನು ಸಂಗ್ರಹಿಸುವುದು.

ii. ಮೂಲಗಳ ಪ್ರಕಾರದ ಕುರಿತು ನಿರ್ಧಾರ.

iii. ಹಣಕಾಸಿನ ಅವಧಿಯ ನಿರ್ಧಾರ.

iv. ಹಣಕಾಸಿನ ವೆಚ್ಚದ ಕುರಿತು ನಿರ್ಧಾರ.

v. ಅದರ ಮರುಪಾವತಿಯ ಕುರಿತು ನಿರ್ಧಾರ.

**2. ಹೂಡಿಕೆ ನಿರ್ಧಾರಗಳು :**

i. ಸ್ಥಿರ ಆಸ್ತಿಗಳಲ್ಲಿ ಹೂಡಿಕೆ (ಕ್ಯಾಪಿಟಲ್ ಬಜೆಟ್).

ii. ದುಡಿಯುವ ಬಂಡವಾಳ (ವರ್ಕಿಂಗ್ ಕ್ಯಾಪಿಟಲ್).

**3. ಲಾಭಾಂಶ (ಗಳಿಕೆ) ನಿರ್ಧಾರಗಳು :**

i. ಲಾಭ ಹಂಚಿಕೆಯ ಕುರಿತು ನಿರ್ಧಾರ.

ii. ಶೇರು ಬಂಡವಾಳದ ಮೇಲಿನ ಲಾಭಾಂಶ.

**ಹಣಕಾಸು ನಿರ್ವಹಣೆಯ ಕಾರ್ಯಗಳು :**

**1. ಅವಶ್ಯಕವಾದ ಹಣಕಾಸಿನ ಅಂದಾಜು :**

- ನಿರೀಕ್ಷಿತ ವೆಚ್ಚಗಳ ಮೇಲೆ ಅವಲಂಬನೆಗೊಂಡಿರುತ್ತದೆ
- ಲಾಭಗಳು
- ಭವಿಷ್ಯದ ವ್ಯವಹಾರ
- ಸಹಕಾರಿ ನೀತಿಗಳು
- ಗಳಿಸುವ ಸಾಮರ್ಥ್ಯವನ್ನು ಹೆಚ್ಚಿಸಲು ಸಮರ್ಪಕವಾಗಿ ಅಂದಾಜು

**2. ನಿಧಿಗಳ ಸಂಯೋಜನೆಯ ನಿರ್ಣಯ :**

- ಅಲ್ಪಾವಧಿ • ದೀರ್ಘಾವಧಿ • ಕಡಿಮೆ ವೆಚ್ಚ
- ಅಧಿಕ ವೆಚ್ಚ • ಶೇರು ಬಂಡವಾಳ • ಸಾಲ

**3. ನಿಧಿಗಳ ಮೂಲಗಳ ಆಯ್ಕೆ :**

- ಶೇರು ಬಂಡವಾಳ • ಠೇವಣಿಗಳು • ಬ್ಯಾಂಕುಗಳಿಂದ ಸಾಲ

**4. ನಿಧಿಗಳ ಹೂಡಿಕೆ :**

- ಹೆಚ್ಚು ಲಾಭ ಗಳಿಸಲು ಹೂಡಿಕೆ • ಹೂಡಿಕೆಗಳ ಸುರಕ್ಷತೆ
- ನಿಯಮಿತ ಆದಾಯ

**5. ನಗದು ನಿರ್ವಹಣೆ :**

- ಬಡ್ಡಿ ಪಾವತಿ • ವೇತನ, ಬಾಡಿಗೆ, ವಿದ್ಯುತ್ ಇತ್ಯಾದಿ ಆಡಳಿತಾತ್ಮಕ ವೆಚ್ಚಗಳು • ಸಾಲದಾತರು, ಠೇವಣಿಗಳು ಇತ್ಯಾದಿಗಳಂತಹ ಪ್ರಸ್ತುತ ಹೊಣೆಗಾರಿಕೆಗಳು

**6. ಹಣಕಾಸು ನಿಯಂತ್ರಣಗಳು :**

- ಹಣವನ್ನು ಯೋಜಿಸಿ, ಸಂಗ್ರಹಿಸಿ ಮತ್ತು ಉಪಯೋಗಿಸಿಕೊಳ್ಳುವುದು
- ಹಣಕಾಸಿನ ಮೇಲೆ ನಿಯಂತ್ರಣ ಸಾಧಿಸುವುದು
- ಅನುಪಾತ ವಿಶ್ಲೇಷಣೆ (Ration Analysis), ಹಣಕಾಸು ಮುನ್ಸೂಚನೆ (Financial Forecasting), ವೆಚ್ಚ ಪ್ರಯೋಜನ (Cost Benefit Analysis) ವಿಶ್ಲೇಷಣೆ ಇತ್ಯಾದಿ ತಂತ್ರಗಳನ್ನು ಬಳಸಿ

**ಸಹಕಾರಿ ನಿಧಿಗಳ ಮೂಲಗಳು :**

- ಶೇರು ಬಂಡವಾಳ – ನಿಯಮಿತ (Regular) ಮತ್ತು ಸಹ (Associate)
- ಠೇವಣಿಗಳು – ಬೇಡಿಕೆ ಮತ್ತು ಅವಧಿ ಠೇವಣಿಗಳು
- ಸಾಲಗಳು – ಅಲ್ಪಾವಧಿ, ದೀರ್ಘಾವಧಿ ಸಾಲಗಳು •ಸದಸ್ಯರಿಂದ ಕೊಡುಗೆ • ಸಾಲಗಳು ಮತ್ತು ಮುಂಗಡಗಳ ಮೇಲಿನ ಬಡ್ಡಿ • ಹೂಡಿಕೆಗಳ ಮೇಲಿನ ಬಡ್ಡಿ • ಸಾಲಗಾರರಿಂದ ಸಾಲ ಮರುಪಾವತಿ • ಆಸ್ತಿಗಳ ಮಾರಾಟ • ಪ್ರಕ್ರಿಯಾ ಶುಲ್ಕ, ಕಮೀಷನ್, ಪ್ರವೇಶ ಶುಲ್ಕ

ಇತ್ಯಾದಿ ಇತರ ರಸೀದಿಗಳು • ಛಾಪಾ ಕಾಗದಗಳು, ವಿಮೆ ಇತ್ಯಾದಿ ಇತರ ಮೂಲಗಳಿಂದ ಬಂದ ಆದಾಯ

**ನಿಧಿಗಳ ವಿನಿಯೋಗ :**

• ಸಾಲಗಳು ಮತ್ತು ಮುಂಗಡಗಳು • ಹೂಡಿಕೆಗಳು • ಸ್ಥಿರ ಆಸ್ತಿಗಳ ಸಂಗ್ರಹಣೆ • ಉಪಯುಕ್ತ ಸೇವೆಗಳಿಗೆ ಮುಂಗಡಗಳು • ಠೇವಣಿಗಳ ಮೇಲಿನ ಬಡ್ಡಿ •ಸಾಲಗಳ ಮೇಲಿನ ಬಡ್ಡಿ • ಆಡಳಿತಾತ್ಮಕ ವೆಚ್ಚಗಳು • ಠೇವಣಿಗಳ ಮರುಪಾವತಿ • ಶೇರು ಬಂಡವಾಳದ ಮರುಪಾವತಿ • ಶೇರುದಾರರಿಗೆ ಲಾಭಾಂಶ • ತೆರಿಗೆಗಳು ಮತ್ತು ಇತರ ಶಾಸನಬದ್ಧ ಬಾಕಿಗಳು

**ಸಹಕಾರಿ ಸಂಸ್ಥೆಗಳ ಹಣಕಾಸು ನಿರ್ವಹಣೆಯಲ್ಲಿ ಸಾಮಾನ್ಯವಾಗಿ ಗಮನಿಸಲಾದ ಸಮಸ್ಯೆಗಳು :**

• ನಿಧಿಯ ಸೂಕ್ತ ಮೂಲಗಳನ್ನು ನಿರ್ಧರಿಸಲು ಸಾಧ್ಯವಾಗುತ್ತಿಲ್ಲ. • ಹಣಕಾಸಿನ ವ್ಯವಹಾರಗಳ ಅಸಮರ್ಪಕ ದಾಖಲೆಗಳು. • ಅಸಮರ್ಪಕ ನಗದು ನಿರ್ವಹಣೆ. • ದೊಡ್ಡ ಪ್ರಮಾಣದ ನಗದು ಹಣವನ್ನು /ಬ್ಯಾಂಕ್ ಉಳಿತಾಯ/ ಚಾಲ್ತಿ ಖಾತೆಗಳಲ್ಲಿ ಇರಿಸುವುದು. • ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ವಿಳಂಬ. • ನಿಧಿಗಳ ತಪ್ಪು ಹೂಡಿಕೆ. • ಬಡ್ಡಿದರಗಳ ನಿಗದಿಯಲ್ಲಿ ವಿಫಲತೆ – ಠೇವಣಿಗಳು ಮತ್ತು ಸಾಲಗಳೆರಡಕ್ಕೂ. • ಕೆಟ್ಟ ಸಾಲಗಳು. • ಸಾಲ ವಸೂಲಾತಿ ಸಮರ್ಪಕವಾಗಿ ಆಗದಿರುವುದು. • ಅನುತ್ಪಾದಕ ಆಸ್ತಿಗಳಲ್ಲಿ ಹೂಡಿಕೆ ಮಾಡುವ ಮೂಲಕ ದುಡಿಯುವ ಬಂಡವಾಳವನ್ನು ನಿರ್ಬಂಧಿಸುವುದು. • ನಿಧಿಗಳ ಸರಿಯಾದ ಸಂಯೋಜನೆಯನ್ನು ನಿರ್ಧರಿಸಲು ಸಾಧ್ಯವಿಲ್ಲದಿರುವುದು. • ಆಸ್ತಿ ಹೊಣೆಗಾರಿಕೆ ನಿರ್ವಹಣೆಯಲ್ಲಿನ ಸವಾಲುಗಳು. • ಅಲ್ಪಾವಧಿಯ ಠೇವಣಿಗಳನ್ನು ದೀರ್ಘಾವಧಿಯ ಸಾಲಕ್ಕಾಗಿ ಉಪಯೋಗಿಸಿಕೊಳ್ಳಲಾಗುತ್ತಿದೆ.

• ಅಸಮರ್ಪಕ ಸಾಲ/ ಹೆಚ್ಚುವರಿ ಸಾಲ/ ಅನಿಯಮಿತ ಸಾಲಗಳು.

**ಸಹಕಾರಿ ಸಂಸ್ಥೆಗಳ ಹಣಕಾಸು ನಿರ್ವಹಣೆಯಲ್ಲಿನ ಅಪಾಯಗಳು :**

• ರಾಜಕೀಯ ಅಪಾಯ (Political risk) • ಖ್ಯಾತಿಯ ಅಪಾಯ (Reputation risk) • ಕ್ರೆಡಿಟ್ ಅಪಾಯ (Credit risk)

**ನಗದು ನಿರ್ವಹಣೆ :**

ನಗದು ನಿರ್ವಹಣೆಯು ಈ ಕೆಳಗಿನ ಅಂಶಗಳು ಪರಸ್ಪರ ಒಂದನ್ನೊಂದು ಅವಲಂಬಿಸಿದೆ.

• ಸಾಕಷ್ಟು ಹಣದ ಉತ್ಪತ್ತಿಯ ಮೂಲಕ, ಸಹಕಾರಿಗಳು ತನ್ನ ದೈನಂದಿನ ವ್ಯವಹಾರದ ಅಗತ್ಯಗಳನ್ನು ಪೂರೈಸಬಹುದು ಮತ್ತು ಸಾಲ ಪಡೆಯುವುದನ್ನು ತಪ್ಪಿಸಬಹುದು.

• ನಗದಿನ ಅತ್ಯುತ್ತಮ ಬಳಕೆಯಿಂದ ಗರಿಷ್ಠ ದ್ರವ್ಯತೆ ಮತ್ತು ಗರಿಷ್ಠ ಲಾಭದಾಯಕತೆಯನ್ನು ಖಚಿತಪಡಿಸಿಕೊಳ್ಳಲು.

• ನಗದಿನ ಸರಿಯಾದ ಸಂಗ್ರಹಣೆ, ವಿತರಣೆ ಮತ್ತು ಹೂಡಿಕೆ.

• ನಗದಿನ ಸಮರ್ಪಕ ಬಳಕೆಯಿಂದ ಸಹಕಾರಿಗಳ ಸ್ಥಿರತೆಯು ಖಾತ್ರಿಗೊಳಿಸುತ್ತದೆ.

• ಸಾಕಷ್ಟು ಹಣದ ಉತ್ಪತ್ತಿಯ ಮೂಲಕ ವೆಚ್ಚ ಮತ್ತು ಇತರ ಪಾವತಿಗಳನ್ನು ಪೂರೈಸುವುದು ಮತ್ತು ವ್ಯವಹಾರವನ್ನು ವಿಸ್ತರಿಸುವುದು.

• ಸರಿಯಾದ ಪ್ರಮಾಣದ ಹಣವನ್ನು ಕ್ರೋಢೀಕರಿಸುವುದರಿಂದ ತಕ್ಷಣದ ಮತ್ತು ದೀರ್ಘಾವಧಿಯ ಅಗತ್ಯಗಳನ್ನು ಪೂರೈಸಬಹುದು.

**ನಗದಿನ ಆಂತರಿಕ ನಿಯಂತ್ರಣಗಳು :**

**ಎ) ಕೈಶಿಲ್ಕು :**

• ನಗದನ್ನು ಅಧಿಕೃತ ವ್ಯಕ್ತಿ ಮಾತ್ರ ನಿರ್ವಹಿಸಬೇಕು.

• ನಗದನ್ನು ಕ್ಯಾಷಿಯರ್ ಮತ್ತು ಒಬ್ಬ ಅಧಿಕಾರಿಯ ಜಂಟಿ ವಶದಲ್ಲಿ ಸುರಕ್ಷಿತ ಲಾಕರ್‌ಗಳಲ್ಲಿ ಇಡಬೇಕು.

• ದಿನನಿತ್ಯದ ಸಂಗ್ರಹವನ್ನು ಬ್ಯಾಂಕಿನಲ್ಲಿ ಠೇವಣಿ ಇಡಬೇಕು.

• ಎಲ್ಲಾ ಪಾವತಿಗಳಿಗೆ ಅನುಗುಣವಾದ ವೋಚರ್‌ಗಳನ್ನು ಹೊಂದಿರಬೇಕು.

• ಎಲ್ಲಾ ವೋಚರ್‌ಗಳು ಅಧಿಕೃತ ವ್ಯಕ್ತಿಯಿಂದ ಅನುಮೋದಿಸಿರಬೇಕು.

• ನಗದು ಪುಸ್ತಕ/ ನಗದು ಸ್ಕ್ರಾಲ್‌ಗಳನ್ನು ನಗದು ಮುಖಬೆಲೆಯ ಜೊತೆಗೆ ನಿರ್ವಹಿಸಬೇಕು.

• ಎಲ್ಲಾ ವಹಿವಾಟುಗಳಿಗೆ ತಯಾರಕ ಮತ್ತು ಪರೀಕ್ಷಕ ಪರಿಕಲ್ಪನೆಯನ್ನು ಅಳವಡಿಸಿಕೊಳ್ಳಬೇಕು.

• ನಿಯಮಿತವಾಗಿ ಮಧ್ಯಂತರದಲ್ಲಿ ನಗದು ಸಂಪರ್ಕವಿಲ್ಲದ ವ್ಯಕ್ತಿಯಿಂದ ಅನಿರೀಕ್ಷಿತ ನಗದು ಪರಿಶೀಲನೆ ಮಾಡಬೇಕು.

• ಆಡಳಿತ ಮಂಡಳಿಯಿಂದ ಅನಿರೀಕ್ಷಿತ ನಗದು ಪರಿಶೀಲನೆ ಮಾಡಬೇಕು.

• ನಗದು ಹಣಕ್ಕಾಗಿ ಸಾಕಷ್ಟು ವಿಮಾ ರಕ್ಷಣೆ ಪಡೆಯಬೇಕು.

• ಯಾವುದೇ ಎಟಿಎಂಗಳಿದ್ದರೆ, ನಗದನ್ನು ನಿಯಮಿತವಾಗಿ ಪರಿಶೀಲಿಸಬೇಕು.

• ಎಟಿಎಂ ನಗದನ್ನು ಬುಕ್ ಬ್ಯಾಲೆನ್ಸ್‌ನೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಬೇಕು.

**ಬಿ) ಬ್ಯಾಂಕಿನಲ್ಲಿ ನಗದು :**

• ಮಂಡಳಿಯಿಂದ ಅಧಿಕೃತಗೊಂಡ ಜಂಟಿ ಸಹಿದಾರರು ಯಾವಾಗಲೂ ಇರಬೇಕು.

• ಎಲ್ಲಾ ಬ್ಯಾಂಕ್ ಖಾತೆಗಳು ಸಹಕಾರಿಯ ಹೆಸರಿನಲ್ಲಿರಬೇಕು.

• ಖಾಲಿ ಚೆಕ್‌ಗಳ ಸರಿಯಾದ ನಿರ್ವಹಣೆ ಇರಬೇಕು – ಚೆಕ್‌ಗಳನ್ನು ಸರಿಯಾದ ನಿರ್ವಹಣೆಯಲ್ಲಿ ಇಡಬೇಕು ಮತ್ತು ಯಾವುದೇ ಖಾಲಿ ಚೆಕ್‌ಗಳಿಗೆ ಸಹಿ ಮಾಡಬಾರದು.

• ಬ್ಯಾಂಕ್ ಖಾತೆಗಳನ್ನು ನಿಯಮಿತವಾಗಿ ಸಮನ್ವಯಗೊಳಿಸಬೇಕು.

• RTGS, NEFT, IMPS ಮುಂತಾದ ಡಿಜಿಟಲ್ ಪಾವತಿಗಳನ್ನು ಮಾಡುವಾಗ ಸರಿಯಾದ ನಿಯಂತ್ರಣವನ್ನು ಖಚಿತಪಡಿಸಿಕೊಳ್ಳಬೇಕು.

• RTGS, NEFT ಇತ್ಯಾದಿಗಳನ್ನು ಸರಿಯಾದ ಪಾಸ್‌ವರ್ಡ್‌ಗಳನ್ನು ಹೊಂದಿರುವ ಇಬ್ಬರು ವ್ಯಕ್ತಿಗಳು ನಿರ್ವಹಿಸಬೇಕು.

• ಪಾಸವರ್ಡ್ ಅನ್ನು ಇತರರೊಂದಿಗೆ ಹಂಚಿಕೊಳ್ಳಬಾರದು.

• ಡಿಜಿಟಲ್ ಪಾವತಿಗಳನ್ನು ಮಾಡುವಾಗ ವಹಿವಾಟುಗಳೊಂದಿಗೆ ಸಂಪರ್ಕ ಹೊಂದಿಲ್ಲದ ವ್ಯಕ್ತಿಗಳಿಗೆ ಸರಿಯಾದ ಸಂದೇಶಗಳನ್ನು

ಕಳುಹಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳಬೇಕು.

**ಹೂಡಿಕೆ ನಿರ್ವಹಣೆ :**

- ಹೂಡಿಕೆಯ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಬೇಕು.
- ಹೂಡಿಕೆಗಳನ್ನು ಸರಿಯಾಗಿ ಅಧಿಕೃತಗೊಳಿಸಬೇಕು.
- ಹೂಡಿಕೆಗಳು ಅಪಾಯ ಮುಕ್ತವಾಗಿರಬೇಕು.
- ಹೂಡಿಕೆಯು ಗರಿಷ್ಠ ಆದಾಯವನ್ನು ನೀಡುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.
- ಎಲ್ಲಾ ನಿಧಿಗಳನ್ನು ಒಂದೇ ಬ್ಯಾಂಕ್/ ಸಂಸ್ಥೆಯಲ್ಲಿ ಹೂಡಿಕೆ ಮಾಡಬಾರದು.
- ಅಪಾಯವನ್ನು ಕಡಿಮೆ ಮಾಡುವ ರೀತಿಯಲ್ಲಿ ಹೂಡಿಕೆಗಳನ್ನು ಯೋಜಿಸಬೇಕು.
- ಯಾವುದೇ ಸಮಯದಲ್ಲಿ ಒಂದು ಬ್ಯಾಂಕ್‌ನಲ್ಲಿ ಹೂಡಿಕೆಯು ಒಟ್ಟು ಹೂಡಿಕೆಯ ಶೇ.20ರಷ್ಟನ್ನು ಮೀರಬಾರದು.
- ಹೂಡಿಕೆಗಳ ಮೇಲಿನ ಆದಾಯವನ್ನು ಸರಿಯಾಗಿ ಅನುಸರಿಸಬೇಕು.
- ಹೂಡಿಕೆಯ ಅಪಾಯವನ್ನು ಅಂದಾಜಿಸಲು ಮಾಧ್ಯಮ ಮತ್ತು ಸುದ್ದಿಗಳ ಮೇಲೆ ಗಮನವಿರಬೇಕು.
- ಹೂಡಿಕೆಗಳು ಕೆಎಸ್‌ಎಸ್ ಕಾಯ್ದೆ, 1997ರ ಕಲಂ 18ರ ಪ್ರಕಾರ ಇರಬೇಕು.
- ಈ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿಯು ಹೊರಡಿಸಿದ ಮಾರ್ಗಸೂಚಿಗಳ ಪ್ರಕಾರ ಹೂಡಿಕೆಗಳನ್ನು ಮಾಡಬೇಕು.

**ಸ್ವೀಕಾರಾರ್ಹ ಸಾಲಗಳ ನಿರ್ವಹಣೆ :**

- ಸಾಲಗಾರರು ತಮ್ಮ ಬಾಕಿಯನ್ನು ಸರಿಯಾದ ಸಮಯಕ್ಕೆ ಪಾವತಿಸುತ್ತಾರೆ ಎಂದು ಖಚಿತಪಡಿಸಿಕೊಳ್ಳುವ ಪ್ರಕ್ರಿಯೆಯಾಗಿದೆ.
- ಯಾವುದೇ ಸಮಯದಲ್ಲಿ ದುಡಿಯುವ ಬಂಡವಾಳದ ಕೊರತೆಯನ್ನು ತಡೆಯಲು ಇದು ಸಹಕಾರಿಗಳಿಗೆ ಸಹಾಯ ಮಾಡುತ್ತದೆ.
- ಇದು ಮಿತಿಮೀರಿದ ಪಾವತಿಗಳನ್ನು ಅಥವಾ ಸಾಲಗಾರರ ಬಾಕಿ ಮೊತ್ತವನ್ನು ಪಾವತಿಸದಿರುವುದನ್ನು ತಡೆಯುತ್ತದೆ.
- ಸ್ವೀಕೃತವಾಗಬೇಕಾದ ಸಾಲಗಳು ಸಹಕಾರಿಯ ಆಸ್ತಿಯ ಪ್ರಮುಖ ಭಾಗವಾಗಿದೆ, ಇದು ಸಹಕಾರಿ ಪುಸ್ತಕಗಳಲ್ಲಿ ನಗದು ಹರಿವಿನ ಉತ್ಪಾದನೆಗೆ ಕಾರಣವಾಗುತ್ತದೆ.
- ಬಾಕಿ ಪಾವತಿಯಲ್ಲಿ ಸುಸ್ಥಿದಾರರಾಗುವುದನ್ನು ತಪ್ಪಿಸಲು ಸ್ವೀಕರಿಸುವ ಸಾಲಗಳ ನಿಖರವಾದ ದಾಖಲೆಯನ್ನು ನಿರ್ವಹಿಸುವ ಅಗತ್ಯವಿದೆ.
- ಇದು ಸಹಕಾರಿಯ ಹಣಕಾಸು ಮತ್ತು ದ್ರವ್ಯತೆಯಲ್ಲಿ ಸ್ಥಿರತೆಯನ್ನು ನಿರ್ಮಿಸುತ್ತದೆ.
- ಸಾಲಗಳನ್ನು ಬಿಡುಗಡೆ ಮಾಡುವ ಮೊದಲು ಸಮರ್ಪಕವಾದ ದಾಖಲೆಗಳನ್ನು ಪಡೆಯಬೇಕು.
- ಭದ್ರತೆಯನ್ನು ಅಡಮಾನ ಮಾಡಬೇಕು.
- ಸದಸ್ಯ ಸಾಲಗಾರರ ಸರಿಯಾದ ಸಾಲ ಮರುಪಾವತಿ ಮೌಲ್ಯಮಾಪನ ಮಾಡಬೇಕು.
- ಬಲಿಷ್ಠ ಸಾಲ ನೀತಿಯನ್ನು ಮಂಡಳಿಯು ಸಿದ್ಧಪಡಿಸಬೇಕು ಮತ್ತು ಸಾಮಾನ್ಯ ಸಭೆಯಿಂದ ಅನುಮೋದನೆ ಪಡೆದಿರಬೇಕು.
- ಮರು ಪಾವತಿಗಳನ್ನು ನಿಯಮಿತವಾಗಿ ಖಚಿತಪಡಿಸಿಕೊಳ್ಳಬೇಕು.

**ಸ್ವೀಕಾರಾರ್ಹ ಸಾಲಗಳ ಆಂತರಿಕ ನಿಯಂತ್ರಣಗಳು :**

- ಸ್ವೀಕೃತಿಗಳು ನಿಯತಕಾಲಿಕವಾಗಿ ಅವಧಿಗಳ ಮೇಲೆ ವಿಂಗಡಿಸಬೇಕು.
- ನಿಯಮಿತವಾಗಿ ಮಧ್ಯಂತರದಲ್ಲಿ ಸಾಲದ ಕುಳುವಾರನ್ನು ಸಾಮಾನ್ಯ ಪುಸ್ತಕದೊಂದಿಗೆ ಸಮನ್ವಯಗೊಳಿಸಬೇಕು.
- ಮಿತಿಮೀರಿದ ಬಾಕಿಗಳನ್ನು ನಿಯಮಿತವಾಗಿ ಅನುಸರಿಸಬೇಕು.
- ಖಾತೆಗಳ ವಿವರಗಳನ್ನು ನಿಯಮಿತವಾಗಿ ಸುಸ್ಥಿದಾರರಿಗೆ ಕಳುಹಿಸಬೇಕು.
- ಅಗತ್ಯವಿರುವಾಗ ಮತ್ತು ಅವಶ್ಯವಿರುವಾಗ ಸಾಲಗಳ ದೃಢೀಕರಣವನ್ನು ಪಡೆಯಬೇಕು.
- ಸುಸ್ಥಿದಾರರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು.
- ಅಡಮಾನದ ಆಸ್ತಿಗಳನ್ನು ಸಮರ್ಪಕವಾಗಿ ವಿಮೆ ಮಾಡಲಾಗಿದೆ ಎಂದು ಖಚಿತಪಡಿಸಿಕೊಳ್ಳಬೇಕು.

**ಹಣಕಾಸು ನಿರ್ವಹಣೆಯಲ್ಲಿ ಕಾಯ್ದೆಗಳು/ ನಿಯಮಗಳು/ ಮಾರ್ಗಸೂಚಿಗಳ ನಿಯಂತ್ರಕಗಳು :**

- ಸದಸ್ಯರಿಂದ ಸಂಗ್ರಹಿಸಲಾಗುವ ಶೇರು ಬಂಡವಾಳವು ಒಟ್ಟು ಶೇರು ಬಂಡವಾಳದ ಶೇ.5ರಷ್ಟನ್ನು ಮೀರಬಾರದು – ಕೆಎಸ್‌ಎಸ್ ಕಾಯ್ದೆ, 1997ರ ಕಲಂ–17ಎ.
- ಯಾವುದೇ ಸಾಂಸ್ಥಿಕ ಠೇವಣಿಗಳನ್ನು ಪಡೆಯುವಂತಿಲ್ಲ – ಕೆಎಸ್‌ಎಸ್ ಕಾಯ್ದೆ, 1997ರ ಕಲಂ 17.
- ನಾಮಮಾತ್ರ/ ಸದಸ್ಯರಲ್ಲದವರಿಂದ ಯಾವುದೇ ಠೇವಣಿಗಳನ್ನು ಸ್ವೀಕರಿಸುವಂತಿಲ್ಲ – ಕೆಎಸ್‌ಎಸ್ ಕಾಯ್ದೆ, 1997ರ ಕಲಂ 22.
- ಹೂಡಿಕೆಗಳು ಕೆಎಸ್‌ಎಸ್ ಕಾಯ್ದೆ, 1997ರ ಕಲಂ 18ರ ಪ್ರಕಾರ ಇರಬೇಕು.
- ಯಾವುದೇ ರಾಜಕೀಯ ಕೊಡುಗೆಗಳಿಗೆ ಅನುಮತಿ ಇರುವುದಿಲ್ಲ – ಕೆಎಸ್‌ಎಸ್ ಕಾಯ್ದೆ, 1997ರ ಕಲಂ 19.
- ಠೇವಣಿಗಳು ಮತ್ತು ಪಡೆದ ಸಾಲಗಳು ಶೇರು ಬಂಡವಾಳ, ಶಾಸನಬದ್ಧ ಮೀಸಲು ಮತ್ತು ಕಟ್ಟಡ ನಿಧಿಯ 50 ಪಟ್ಟು ಮೀರಬಾರದು – ಕೆಎಸ್‌ಎಸ್ ನಿಯಮಗಳು, 2004ರ ನಿಯಮ–3(4)(ಸಿ)
- ಸದಸ್ಯರಿಗೆ ನೀಡುವ ಸಾಲವು ದುಡಿಯುವ ಬಂಡವಾಳದ ಶೇ.5ರಷ್ಟನ್ನು ಮೀರಬಾರದು.
- ನಿರ್ದೇಶಕರಿಗೆ ನೀಡುವ ಸಾಲವು ದುಡಿಯುವ ಬಂಡವಾಳದ ಶೇ.10ರಷ್ಟನ್ನು ಮೀರಬಾರದು.
- ಠೇವಣಿಗಳ ಶೇ.20ರಷ್ಟನ್ನು ಮತ್ತು ಸಂಪೂರ್ಣ ಶಾಸನಬದ್ಧ ಮೀಸಲನ್ನು ವ್ಯವಹಾರದ ಹೊರಗೆ ಹೂಡಿಕೆ ಮಾಡಬೇಕು.
- 1949ರ ಬಿಆರ್ ಕಾಯ್ದೆಯ ಕಲಂ 18 ಮತ್ತು 24ರ ಪ್ರಕಾರ CRR ಮತ್ತು SLR ಅನ್ನು ನಿರ್ವಹಿಸಬೇಕು.

- CRAR ಅನ್ನು ಕನಿಷ್ಠ ಶೇ.9ರಷ್ಟು ನಿರ್ವಹಿಸಬೇಕು.
- ಸಿ.ಡಿ ಅನುಪಾತ ಶೇ.70ರಷ್ಟು ಮೀರಬಾರದು.

**ಹಣಕಾಸು ನಿರ್ವಹಣೆಯಲ್ಲಿ ಪ್ರಮುಖ ಅನುಪಾತಗಳು :**

- ನಿಧಿಯ ವೆಚ್ಚ (Cost of Fund)
- ಸಾಲಗಳು ಮತ್ತು ಮುಂಗಡಗಳ ಮೇಲೆ ಸರಾಸರಿ ಉತ್ಪನ್ನ
- ಹೂಡಿಕೆಯ ಮೇಲೆ ಸರಾಸರಿ ಉತ್ಪನ್ನ
- ದುಡಿಯುವ ಆಸ್ತಿಗಳ ಮೇಲೆ ಸರಾಸರಿ ಉತ್ಪನ್ನ
- ನಿವ್ವಳ ಬಡ್ಡಿಯ ಅಂತರ (Spread)
- ಒಟ್ಟು ಆಸ್ತಿಯ ಮೇಲೆ ಗಳಿಕೆ
- ದುಡಿಯುವ ಬಂಡವಾಳ
- ಸಿ.ಡಿ ಅನುಪಾತ
- ಬಡ್ಡಿ ರಹಿತ ಆದಾಯ ಬಡ್ಡಿ ಆದಾಯಕ್ಕೆ ಹೋಲಿಸಿದಾಗ
- ಪ್ರತಿ ಉದ್ಯೋಗಿಯಿಂದ ಆದ ವ್ಯವಹಾರ
- ದುಡಿಯುವ ಬಂಡವಾಳಕ್ಕೆ ನಿರ್ವಹಣಾ ಲಾಭ
- ಪ್ರತಿ ಶೇರಿಗೆ ಗಳಿಕೆ

**ಉಪ ಸಂಹಾರ :**

- ಯಾವುದೇ ಚಟುವಟಿಕೆಯನ್ನು ಯಶಸ್ವಿಯಾಗಿ ನಡೆಸಿದರೆ, ಲಾಭದಲ್ಲಿ ಕೊನೆಗೊಂಡರೆ ಅದು "ವ್ಯವಹಾರ" ಆಗುತ್ತದೆ.
- ಲಾಭವನ್ನು ಹೆಚ್ಚಿಸುವುದು ಗುರಿಯಾಗಿದೆ.
- ವೆಚ್ಚವನ್ನು ಕಡಿಮೆ ಮಾಡುವುದು.
- ಅಪಾಯವನ್ನು ಕಡಿಮೆ ಮಾಡುವುದು.
- "ನಂಬಿಕೆಯನ್ನು" ಉಳಿಸಿಕೊಳ್ಳುವುದು.

ವಿಶ್ವದ ಅತ್ಯಂತ ದುಬಾರಿ ಸಂಗತಿಯೆಂದರೆ ನಂಬಿಕೆ. ಗಳಿಸಲು ವರ್ಷಗಳು ಬೇಕು ಮತ್ತು ಕಳೆದುಕೊಳ್ಳಲು ಕೆಲವೇ ಸೆಕೆಂಡುಗಳು ಸಾಕು.

## ಭೇಟಿ



**ಮೈಸೂರು** : ದಿನಾಂಕ 16–12–2022 ರಂದು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥರವರು ಶ್ರೀ ಭುವನೇಶ್ವರಿ ಸೌಹಾರ್ದ ಪತ್ತಿನ ಸಹಕಾರಿ ನಿ., ಜನ್‌ಧನ್ ಅಭಿವೃದ್ಧಿ ಸೌಹಾರ್ದ ಸಹಕಾರಿ ಸಂಘ ನಿ., ಹಾಗೂ ಕದಂಬ ಸೌಹಾರ್ದ ಸಹಕಾರಿ ಸಂಘ ನಿ., ಮೈಸೂರು ಶಾಖೆಗೆ ಭೇಟಿ ನೀಡಿದರು.

## ಕ್ಯಾಲೆಂಡರ್ ಬಿಡುಗಡೆ



**ಶಿವಮೊಗ್ಗ** : ದಿನಾಂಕ 14–12–2022 ರಂದು ಬೆಳಿಗ್ಗೆ 11 ಗಂಟೆಗೆ ವಿಪ್ರ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., 2023ನೇ ವರ್ಷದ ಸಹಕಾರಿಯ ಕ್ಯಾಲೆಂಡರ್ ಬಿಡುಗಡೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಉಪಾಧ್ಯಕ್ಷರಾದ ಹಾಗೂ ಸಹ್ಯಾದ್ರಿ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಶಿವಮೊಗ್ಗ ಇದರ ಅಧ್ಯಕ್ಷರಾದ ಹಾಗೂ ಸಹಕಾರಿಯ ನಿರ್ದೇಶಕರಾದ ಶ್ರೀಯುತ ಎ.ಆರ್ ಪ್ರಸನ್ನಕುಮಾರ್ ಇವರು ಬಿಡುಗಡೆ ಮಾಡಿದರು.

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ

**ಶ್ರೀ ಸಾದರ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ದಾವಣಗೆರೆ**



ಶ್ರೀ ಕೆ ನಾಗಪ್ಪ
ಅಧ್ಯಕ್ಷರು



ಶ್ರೀ ಎಂ.ಆರ್ ಉಜ್ಜನಪ್ಪ
ಉಪಾಧ್ಯಕ್ಷರು

**ಮಾತೃಶ್ರೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಉಡುಪಿ**




ಶ್ರೀ ಅಶೋಕ್ ಕುಮಾರ ಶೆಟ್ಟಿ
ಅಧ್ಯಕ್ಷರು



ಶ್ರೀ ಎನ್ ಗಿರೀಶ್ ಪೈ
ಉಪಾಧ್ಯಕ್ಷರು

# ರಾಷ್ಟ್ರೀಯ ಯುವದಿನ - ವಿವೇಕರಾದ ನರೇಂದ್ರ

– ಶ್ರೀಮತಿ ಸವಿತ ಎನ್. ಇ. ಕಿರಿಯ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು




ಸ್ವಾಮಿ ವಿವೇಕಾನಂದರ ಜನ್ಮದಿನದ ನೆನಪಿಗಾಗಿ ಜನವರಿ 12 ರಂದು ರಾಷ್ಟ್ರೀಯ ಯುವ ದಿನವನ್ನು ಆಚರಿಸಲಾಗುತ್ತದೆ. ಸ್ವಾಮಿ ವಿವೇಕಾನಂದರು ಯಾವುದೇ ರೀತಿಯ ಪರಿಚಯದ ಅಗತ್ಯವಿಲ್ಲದ ಹೆಸರು. ಈ ಸವಿನೆನಪಿನ ದಿನದಂದು ಇವರ ಕುರಿತು ಸಂಕ್ಷಿಪ್ತ ಮಾಹಿತಿಯನ್ನು ನೆನೆಪಿಸುವ ಪ್ರಯತ್ನ.

ಜನನ: 12 ಜನವರಿ, 1863, ಹುಟ್ಟಿದ ಸ್ಥಳ: ಕೋಲ್ಕತಾ, ಭಾರತ, ಬಾಲ್ಯದ ಹೆಸರು: ನರೇಂದ್ರನಾಥ ದತ್ತ ತಂದೆ: ವಿಶ್ವನಾಥ ದತ್ತ, ತಾಯಿ: ಭುವನೇಶ್ವರಿ ದೇವಿ ಶಿಕ್ಷಣ: ಕಲ್ಕತ್ತಾ ಮೆಟ್ರೋಪಾಲಿಟನ್ ಶಾಲೆ; ಪ್ರೆಸಿಡೆನ್ಸಿ ಕಾಲೇಜು, ಕಲ್ಕತ್ತಾ ಧರ್ಮ: ಹಿಂದೂ ಧರ್ಮ ಗುರು: ರಾಮಕೃಷ್ಣ ತತ್ವಶಾಸ್ತ್ರ: ಅದ್ವೈತ ವೇದಾಂತ.

ವಿವೇಕಾನಂದರ ಬಾಲ್ಯದ ಹೆಸರು ನರೇಂದ್ರನಾಥ ದತ್ತ, ಕಲ್ಕತ್ತಾದ ಶ್ರೀಮಂತ ಬಂಗಾಳಿ ಕುಟುಂಬಕ್ಕೆ ಸೇರಿದವರು. ಅವರು ವಿಶ್ವನಾಥ ದತ್ತ ಮತ್ತು ಭುವನೇಶ್ವರಿ ದೇವಿಯ ಎಂಟು ಮಕ್ಕಳಲ್ಲಿ ಒಬ್ಬರಾಗಿದ್ದರು. ಮಕರ ಸಂಕ್ರಾಂತಿಯ ಸಂದರ್ಭದಲ್ಲಿ, ಅವರು ಜನಿಸಿದ್ದು 12 ಜನವರಿ, 1863. ಅವರ ತಂದೆ ವಕೀಲ ಮತ್ತು ಸಮಾಜದಲ್ಲಿ ಪ್ರಭಾವಿ ವ್ಯಕ್ತಿತ್ವ ಹೊಂದಿದ್ದರು. ನರೇಂದ್ರನಾಥನ ತಾಯಿ ಭುವನೇಶ್ವರಿಯು ತನ್ನ ಮಗನ ಮೇಲೆ ಹೆಚ್ಚಿನ ಪ್ರಭಾವ ಬೀರಿದ ದೃಢವಾದ, ದೈವಭಕ್ತಿಯುಳ್ಳ ಮನಸ್ಸಿನ ಮಹಿಳೆಯಾಗಿದ್ದರು.

### ಶ್ರೀ ವಿವೇಕರ ಅಧ್ಯಯನ ಗುರುಗಳ ಮಾರ್ಗದರ್ಶನ

ನರೇಂದ್ರನಾಥರು ಚಿಕ್ಕ ಹುಡುಗನಾಗಿದ್ದಾಗ ತೀಕ್ಷ್ಣ ಬುದ್ಧಿಶಕ್ತಿಯನ್ನು ಪ್ರದರ್ಶಿಸಿದ. ಅವರ ಚೇಷ್ಟೆಯ ಸ್ವಭಾವವು ಸಂಗೀತದಲ್ಲಿ ಅವರ ಆಸಕ್ತಿಯನ್ನು ನಿರಾಕರಿಸಿತು, ವಾದ್ಯ ಮತ್ತು ಗಾಯನ ಎರಡೂ. ಅವರು ತಮ್ಮ ಅಧ್ಯಯನದಲ್ಲಿ ಉತ್ತಮ ಸಾಧನೆ ಮಾಡಿದರು, ಮೊದಲು ಮೆಟ್ರೋಪಾಲಿಟನ್ ಸಂಸ್ಥೆಯಲ್ಲಿ ಮತ್ತು ನಂತರ ಕಲ್ಕತ್ತಾದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ. ಅವರು ಕಾಲೇಜಿನಿಂದ ಪದವಿ ಪಡೆಯುವ ಹೊತ್ತಿಗೆ, ಅವರು ವಿವಿಧ ವಿಷಯಗಳ ಬಗ್ಗೆ ಅಪಾರ ಜ್ಞಾನವನ್ನು ಪಡೆದರು. ಅವರು ಕ್ರೀಡೆ, ಜಿಮ್ನಾಸ್ಟಿಕ್ಸ್, ಕುಸ್ತಿ ಮತ್ತು ದೇಹದಾರ್ಢ್ಯದಲ್ಲಿ ಸಕ್ರಿಯರಾಗಿದ್ದರು. ಅವರು ಅತ್ಯಾಸಕ್ತಿಯ ಓದುಗರಾಗಿದ್ದರು ಮತ್ತು ಸೂರ್ಯನ ಕೆಳಗೆ ಬಹುತೇಕ ಎಲ್ಲವನ್ನೂ ಓದಿದರು. ಅವರು ಒಂದು ಕಡೆ ಭಗವದ್ಗೀತೆ ಮತ್ತು ಉಪನಿಷತ್ತುಗಳಂತಹ ಹಿಂದೂ ಧರ್ಮಗ್ರಂಥಗಳನ್ನು ಪರಿಶೀಲಿಸಿದರು, ಮತ್ತೊಂದೆಡೆ ಅವರು ಡೇವಿಡ್ ಹ್ಯೂಮ್, ಜೋಹಾನ್ ಗಾಟ್ಲೀಬ್ ಫಿಚ್ಟೆ ಮತ್ತು ಹರ್ಬರ್ಟ್ ಸ್ಪೆನ್ಸರ್ ಅವರಿಂದ ಪಾಶ್ಚಿಮಾತ್ಯ ತತ್ವಶಾಸ್ತ್ರ, ಇತಿಹಾಸ ಮತ್ತು ಆಧ್ಯಾತ್ಮಿಕತೆಯನ್ನು ಅಧ್ಯಯನ ಮಾಡಿದರು. ಅವರ ಧಾರ್ಮಿಕ ಆತ್ಮಸಾಕ್ಷಿಯು ಶ್ರೀರಾಮಕೃಷ್ಣರ ದೈವಿಕ ಅಭಿವ್ಯಕ್ತಿಯ ಆಧ್ಯಾತ್ಮಿಕ ಬೋಧನೆಗಳು ಮತ್ತು ಅದ್ವೈತ ವೇದಾಂತ ತತ್ವಶಾಸ್ತ್ರದ ಅವರ ವೈಯಕ್ತಿಕ ಆಂತರಿಕೀಕರಣದ ಸಂಯೋಜನೆಯಾಗಿದೆ. ನಿಸ್ವಾರ್ಥ ಕೆಲಸ, ಪೂಜೆ, ಮಾನಸಿಕ ಶಿಸ್ತು ಕೈಗೊಳ್ಳುವ ಮೂಲಕ ಆತ್ಮದ ದಿವ್ಯತೆಯನ್ನು ಸಾಧಿಸುವಂತೆ ನಿರ್ದೇಶನ ನೀಡಿದರು. ವಿವೇಕಾನಂದರ ಪ್ರಕಾರ, ಆತ್ಮದ ಸ್ವಾತಂತ್ರ್ಯವನ್ನು ಸಾಧಿಸುವುದು ಅಂತಿಮ ಗುರಿಯಾಗಿದೆ ಮತ್ತು ಅದು ಒಬ್ಬರ ಧರ್ಮದ ಸಂಪೂರ್ಣತೆಯನ್ನು ಒಳಗೊಳ್ಳುತ್ತದೆ. ಸ್ವಾಮಿ ವಿವೇಕಾನಂದರು ಪ್ರಮುಖ ರಾಷ್ಟ್ರೀಯತಾವಾದಿಯಾಗಿದ್ದರು ಮತ್ತು ಅವರ ಮನಸ್ಸಿನಲ್ಲಿ ತಮ್ಮ ದೇಶವಾಸಿಗಳ ಒಟ್ಟಾರೆ ಕಲ್ಯಾಣವನ್ನು ಹೊಂದಿದ್ದರು. “ಎದ್ದೇಳಿ, ಎಚ್ಚರಗೊಳ್ಳಿ ಮತ್ತು ಗುರಿಯನ್ನು ತಲುಪುವವರೆಗೆ ನಿಲ್ಲಬೇಡಿ” ಎಂದು ಅವರು ತಮ್ಮ ದೇಶವಾಸಿಗಳನ್ನು ಎಚ್ಚರಗೊಳಿಸಿದರು.

### ಹಿಂದೂ ಧರ್ಮವನ್ನು ವಿಶ್ವ ಧರ್ಮಗಳ ನಕ್ಷೆಯಲ್ಲಿ ಇರಿಸಿದ ದಿನ

1893 ರಲ್ಲಿ ಅಮೆರಿಕದ ಚಿಕಾಗೋದಲ್ಲಿ ವಿಶ್ವ ಧರ್ಮ ಸಂಸತ್ತಿನ ಬಗ್ಗೆ ತಿಳಿದುಕೊಂಡರು. ಅವರು ಸಭೆಗೆ ಹಾಜರಾಗಲು ಉತ್ಸುಕರಾಗಿ ಮೇ 31, 1893 ರಂದು ಬಾಂಬೆಯಿಂದ ಚಿಕಾಗೋಗೆ ತೆರಳಿದರು. ಅಲ್ಲಿ ತಮ್ಮ ಮಾತಿನಲ್ಲಿ “ಅಮೆರಿಕದ ನನ್ನ ಸಹೋದರರು ಮತ್ತು ಸಹೋದರಿಯರು” ಎಂಬ ತನ್ನ ಆರಂಭಿಕ ಸಾಲಿನಿಂದ ಎಲ್ಲರನ್ನು ದಿಗ್ಭ್ರಮೆಗೊಳಿಸಿದರು. ಆರಂಭದ ಪದಗುಚ್ಛಕ್ಕೆ ಸಭಿಕರಿಂದ ಚಪ್ಪಾಳೆ ತಟ್ಟಿದರು. ಅವರು ವೇದಾಂತದ ತತ್ವಗಳನ್ನು ಮತ್ತು ಅವುಗಳ ಆಧ್ಯಾತ್ಮಿಕ ಮಹತ್ವವನ್ನು ವಿವರಿಸಿದರು, ಹಿಂದೂ ಧರ್ಮವನ್ನು ವಿಶ್ವ ಧರ್ಮಗಳ ನಕ್ಷೆಯಲ್ಲಿ ಇರಿಸಿದರು. ನೀವು ನಮ್ಮನ್ನು ಸ್ವಾಗತಿಸಿದ ಸೌಹಾರ್ದತೆ ಮತ್ತು ಪ್ರೀತಿಯ ಕಡೆಗೆ ನನ್ನ ಕೃತಜ್ಞತೆಯನ್ನು ವ್ಯಕ್ತಪಡಿಸಲು ನಾನು ಎದ್ದುನಿಂತಾಗ ನನ್ನ ಹೃದಯವು ವರ್ಣನಾತೀತ ಸಂತೋಷದಿಂದ ತುಂಬುತ್ತದೆ. ವಿಶ್ವದ ಅತ್ಯಂತ ಹಳೆಯ ತಪಸ್ವಿ ಸಂಪ್ರದಾಯದ ಪರವಾಗಿ ನಿಮಗೆ ಧನ್ಯವಾದಗಳು; ಧರ್ಮಗಳ ತಾಯಿಯ ಪರವಾಗಿ ಕೃತಜ್ಞತೆ ಸಲ್ಲಿಸಿ; ಮತ್ತು ಎಲ್ಲಾ ಪಂಗಡಗಳು ಮತ್ತು ಧರ್ಮಗಳ ಎಲ್ಲಾ ವರ್ಗದ ಹಿಂದೂಗಳ ಪರವಾಗಿ ನಾನು ನಿಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ರುಚಿನಾಂ ವೈಚಿತ್ರ್ಯದೃಜು ಕುಟಿಲಾನಪತ್ಥುಷಮ್ ನೃಣಮೇಕೋ ಗಮ್ಯಸ್ತ್ವಮಸಿ ಪಾಯಸಮೃಣವ ಏವ 'ವಿವಿಧ ನದಿಗಳು ವಿವಿಧ ಮೂಲಗಳಿಂದ ಹೊರಬಂದು ಸಮುದ್ರವನ್ನು

37ನೇ ಪುಟಕ್ಕೆ.....

# 21ನೇ ತಂಡದ ವ್ಯಕ್ತಿತ್ವ ವಿಕಸನ ತರಬೇತಿಯ ಅಧ್ಯಯನ ಪ್ರವಾಸ ಅನುಭವ

– ಶ್ರೀ ವಿಕ್ರಾಂತ ಪಾಟೀಲ, ಸಿವಿಲ್ ಇಂಜಿನಿಯರ್, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಪಾತಾಳದಗ್ವಣಿಯ ನೇಣಿಲ್ಲದೆ ತೆಗೆಯಬಹುದೆ, ಸೋಪಾನದ ಬಲವಿಂದಲ್ಲದೆ?

ಶಬ್ಧ ಸೋಪಾನವ ಕಟ್ಟಿ ನಡೆಯಿಸಿದರು ಪುರಾತರು, ದೇವಲೋಕಕ್ಕೆ ಬಟ್ಟೆಕಾಣಿರೋ.

ಮತ್ತ್ಯರ ಮನದ ಮೈಲಿಗೆಯ ಕಳೆಯಲೆಂದು ಗೀತಮಾತೆಂಬ ಜ್ಯೋತಿಯ ಬೆಳಗಿ ಕೊಟ್ಟರು, ಕೂಡಲಚೆನ್ನಸಂಗನ ಶರಣರು.

ಆಳದ ನೀರನ್ನು ಗಟ್ಟಿಯಾದ ಹಗ್ಗದ ಸಹಾಯದಿಂದ ಎತ್ತಬಹುದೋ ಹಾಗೆಯೇ ಸದಸ್ಯ ಸೌಹಾರ್ದ ಸಹಕಾರಿಗಳು ಕ್ರಿಯಾತ್ಮಕ ಕಾರ್ಯ ಅಥವಾ ಕ್ರಿಯಾತ್ಮಕ ಚಟುವಟಿಕೆಯಾಗಬೇಕಾದರೆ ತರಬೇತಿ ಎಂಬುವುದು ಅಷ್ಟೇ ಮುಖ್ಯ, ಸೌಹಾರ್ದ ಸಹಕಾರಿ ,ಸಾಹಿತ್ಯದ ಮುಖೇನ ಸಹಕಾರಿ ಚಟುವಟಿಕೆಗಳಿಗೆ ಒಂದು ರೂಪುರೇಷೆಯನ್ನು ಇಟ್ಟಿರುತ್ತಾರೆ. ಇದರ ಪ್ರತಿಫಲವೆಂಬಂತೆ ಸಮಾಜದಲ್ಲಿ ಬೆಳೆದುನಿಂತು ಜ್ಯೋತಿಯ ಹಾಗೇ ಪ್ರಜ್ವಲಿಸುತ್ತಾ ಸದಸ್ಯರಿಗೆ ಬೆಳಕಾದ ಅನೇಕ ಸೌಹಾರ್ದ ಸಹಕಾರಿಗಳನ್ನು ಕಾಣಬಹುದಾಗಿದೆ.

ಮಹಾತ್ಮಾ ಗಾಂಧೀಜಿಯ ಕನಸು ಗ್ರಾಮಕ್ಕೊಂದು ಶಾಲೆ, ಗ್ರಾಮಕ್ಕೊಂದು ಪಂಚಾಯಿತಿ ಮತ್ತು ಗ್ರಾಮಕ್ಕೊಂದು ಸಹಕಾರ ಸಂಘ ಇವುಗಳಿಂದ ಸಮಗ್ರ ಭಾರತದ ಅಭಿವೃದ್ಧಿಯಾಗುತ್ತದೆ ಎಂದು ಹೇಳಿದ್ದಾರೆ. ಅದಕ್ಕೆ ಪೂರಕ ಎಂಬಂತೆ ಈಗಿನ ದೇಶದ ಅಭಿವೃದ್ಧಿಗೆ ಸೌಹಾರ್ದ ಸಹಕಾರಿ ಸಂಘಗಳ ಕೊಡುಗೆ ಇದೆ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಆಶ್ರಯದಲ್ಲಿ ನಡೆದ 2022ರ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮದ ಭಾಗವಾಗಿ ದಿನಾಂಕ 16/12/2022ರಂದು ನಡೆದ ಸೌಹಾರ್ದ ಸಹಕಾರಿಗಳ ಅಧ್ಯಯನ ಕಾರ್ಯಕ್ರಮ ಕೂಡಾ ಶಿಬಿರಾರ್ಥಿಗಳಲ್ಲಿ ಕಲಿಕೆಯ ಪ್ರಾಮುಖ್ಯತೆಯನ್ನು ಮತ್ತೊಂದು ಹಂತಕ್ಕೆ ತೆಗೆದುಕೊಂಡು ಹೋಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಬಹಳ ಕ್ರಿಯಾತ್ಮಕವಾಗಿ ಕಾರ್ಯನಿರ್ವಹಿಸುತಿರುವ ಐದು ಸದಸ್ಯ ಸೌಹಾರ್ದ ಸಹಕಾರಿಗಳ ಭೇಟಿಯ ವಿವರ ಕೆಳಗಿನಂತಿದೆ.

### 1) ಸಮ್ಮಿಲನ ಕೃಷಿ ಸಂಸ್ಕರಣ ಸೌಹಾರ್ದ ಸಹಕಾರಿ ನಿಯಮಿತ, ಕೋಟೆಗದ್ದೆ.

ಈ ಸಂಸ್ಥೆಯು 2018ರಲ್ಲಿ ಪ್ರಾರಂಭಗೊಂಡು ಐದು ವಸಂತಗಳನ್ನು ಪೂರೈಸಿದ್ದು, ತೀರ್ಥಹಳ್ಳಿ ವೆನಿಲಾ ಬೆಳೆಗಾರರ ಸಂಘದ ಜಾಗವನ್ನು ತೆಗೆದುಕೊಂಡು ತನ್ನ ಕಾರ್ಯಚಟುವಟಿಕೆಯನ್ನು ನಡೆಸುತ್ತಿದೆ. ಸದರಿ ಸಂಸ್ಥೆಯು ಕೋಟೆಗದ್ದೆ ಗ್ರಾಮದಲ್ಲಿ ತನ್ನ ಸಂಸ್ಕರಣ ಘಟಕವನ್ನು ಪ್ರಾರಂಭಿಸಿದೆ. ಆ ಭಾಗದ ಜನರಿಗೆ ಉದ್ಯೋಗದ ಜೊತೆಗೆ ಉತ್ತಮ ಗುಣಮಟ್ಟದ ಸಂಸ್ಕರಣ ಕಾರ್ಯ ಚಟುವಟಿಕೆಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದ್ದು, ಅದಕ್ಕೆ ಬೇಕಾದ ಅಂದಾಜು 40 ಲಕ್ಷ ರೂ.ಗಳ ಆಧುನಿಕ ಯಂತ್ರೋಪಕರಣಗಳಾದ ಒಣಗಿಸುವ ಯಂತ್ರಗಳು, ಸಿಪ್ಪೆ ತೆಗೆಯುವ ಯಂತ್ರ, ಉಗ್ರಾಣಗಳು ಹೀಗೆ ಹಲವಾರು ಉಪಯುಕ್ತ ಯಂತ್ರಗಳನ್ನು ಉಪಯೋಗಿಸಿ ಕಾರ್ಯ ನಡೆಸುತ್ತಿದ್ದಾರೆ. ಈ ಸಂಸ್ಕರಣಾ ಘಟಕದಲ್ಲಿ 30 ಜನ ಕಾರ್ಮಿಕರು ದುಡಿಮೆ ಮಾಡುತ್ತಿದ್ದು, ಪ್ರಸ್ತುತವಾಗಿ ವೆನಿಲಾ, ಅಡಿಕೆ, ಅರಿಶಿಣ, ಹಲಸು, ಕೊಬ್ಬರಿಯಂತಹ ಕೃಷಿ ಉತ್ಪನ್ನಗಳನ್ನು ರೈತರಿಂದ ಪಡೆದು ವ್ಯವಸ್ಥಿತವಾಗಿ ಎಲ್ಲಾ ಸಂಸ್ಕರಣ ಆಯಾಮಗಳನ್ನು ಪೂರ್ಣಗೊಳಿಸಿ ರೈತರಿಗೆ ಮಾರಾಟ ಮಾಡಲು ಮರಳಿ ಕಳುಹಿಸುತ್ತಾರೆ. ಇದರ ಜೊತೆಗೆ ಆ ಭಾಗದ ಹಲಸು ಹಾಗೂ ಕೊಬ್ಬರಿಯನ್ನು ಖರೀದಿಸಿ ಹಲಸಿನಿಂದ ಹಪ್ಪಳ, ಕೊಬ್ಬರಿಯಿಂದ ಎಣ್ಣೆ ಉತ್ಪಾದನೆ ಮಾಡಿ ಆ ಭಾಗದಲ್ಲಿ ಮಾರಾಟ ಮಾಡುತ್ತಾರೆ.

ಪ್ರಸಕ್ತ 298 ಸದಸ್ಯರನ್ನು ಹೊಂದಿದ ಸದರಿ ಸೌಹಾರ್ದ ಸಹಕಾರಿಯು ಎಲ್ಲಾ ವೆಚ್ಚಗಳನ್ನು ತೆಗೆದು ವರ್ಷಕ್ಕೆ 2 ರಿಂದ 3 ಲಕ್ಷ ರೂ.ಗಳ ಲಾಭ ಪಡೆಯುವಲ್ಲಿ ಯಶಸ್ವಿಯಾಗಿದೆ, ಇವರು ಇನ್ನೂ ಹಲವಾರು ಕೃಷಿ ಉತ್ಪಾದನಾ ಬೆಳೆಗಳನ್ನು ರೈತರಿಂದ ಪಡೆದು ಉಪಯುಕ್ತ ಉತ್ಪಾದಕಗಳನ್ನಾಗಿ ಮಾಡಿ ಮಾರಾಟ ಮಾಡುವ ನಿಟ್ಟನಲ್ಲಿ ತನ್ನ ಕಾರ್ಯಯೋಜನೆ ಮಾಡುತ್ತಿದೆ.

### 2) ಶಾರದ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ

ಈ ಸಹಕಾರಿಯು 2006ರಲ್ಲಿ ಪ್ರಾರಂಭಗೊಂಡಿದೆ. ಸದರಿ ಸಂಸ್ಥೆಯು ರಾಜ್ಯಮಟ್ಟದ ಸಹಕಾರಿಯಾಗಿದ್ದು, ರಾಜ್ಯದ ಎರಡು ಜಿಲ್ಲೆಗಳಲ್ಲಿ ಒಟ್ಟು ಐದು ಶಾಖೆಗಳನ್ನು ಹೊಂದಿರುತ್ತದೆ. ವಿವಿಧ ಸಂಶೋಧನಾತ್ಮಕ ಯೋಜನೆಗಳೊಂದಿಗೆ ಅನೇಕ ಜನರಿಗೆ ಅದರಲ್ಲೂ ಕೃಷಿ ವರ್ಗದವರಿಗೆ ಸಹಾಯಕವಾಗಿದೆ. ಈ ಸಹಕಾರಿ ಪತ್ತಿನ ವ್ಯವಹಾರದಲ್ಲಿ ತನ್ನನ್ನು ತೊಡಗಿಸಿಕೊಂಡು ಸಾಲದ ಅಗತ್ಯವಿರುವ ಅನೇಕ ಸದಸ್ಯರಿಗೆ ಈ ಸಹಕಾರಿಯು ಉಪಯುಕ್ತವಾಗಿದೆ. ಮಲೆನಾಡಿನ ಪರಿಸರದ ಭಾಗದಲ್ಲಿ ಪರಿಸರ ಸ್ನೇಹಿ ಕಾರ್ಯವೆಂಬಂತೆ ಆ ಭಾಗದ ಜನರಿಗೆ ತಮ್ಮ ತಮ್ಮ

ಮನೆಗಳಲ್ಲಿ ಒಂದು ಕಿಲೋ ವ್ಯಾಟ್ ಸಾಮರ್ಥ್ಯದ ವಿದ್ಯುತ್ ಉತ್ಪಾದನೆಗೆ ಸಾಲ ನೀಡಿರುವುದು ಖಂಡಿತವಾಗಿಯೂ ಅಭಿನಂದನೀಯ. ಅಲ್ಲದೇ ರೈತರಿಗೆ ಉಗ್ರಾಣದ ವ್ಯವಸ್ಥೆ ಹಾಗೂ ರೈತರಿಗೆ ತಮ್ಮ ಬೆಳೆ ಮೇಲೆ ರಿಯಾಯಿತಿ ದರದಲ್ಲಿ ಸಾಲದ ಸೌಲಭ್ಯವನ್ನು ನೀಡಲಾಗುತ್ತಿದೆ.

2019 ರಿಂದ ರಿಪ್ಪನ್‌ಪೇಟೆಯಲ್ಲಿ ಸ್ವಂತ ಕಟ್ಟಡಗಳನ್ನು ಹೊಂದಿದ್ದು, ಹೊಸನಗರ ಭಾಗದ ಬೆಳೆಗಾರರಿಗೆ ಅನುಕೂಲವಾಗುವ ನಿಟ್ಟಿನಲ್ಲಿ 4400 ಮೆಟ್ರಿಕ್ ಟನ್ ಸಾಮರ್ಥ್ಯದ ಕೋಲ್ಡ್ ಸ್ಟೋರೇಜ್ ಪ್ರಾರಂಭಿಸಲಾಗಿದ್ದು, ಪ್ರಸ್ತುತ ಅಡಿಕೆ, ಶುಂಠಿ, ಕಾಳು ಮೆಣಸು, ಅರಿಶಿನ ಕೊಂಬು ಸೇರಿದಂತೆ ಅನೇಕ ಉತ್ಪನ್ನಗಳನ್ನು ದಾಸ್ತಾನು ಮಾಡುತ್ತಿದ್ದಾರೆ. ಸುತ್ತಲಿನ ಭಾಗದ ಎಲ್ಲಾ ಬೆಳೆಗಾರರಿಗೂ ಅನುಕೂಲವಾಗುತ್ತಿದೆ. ಕೋಲ್ಡ್ ಸ್ಟೋರೇಜ್ ನಿರ್ವಹಣೆಗೆ 100 ಕಿಲೋ ವ್ಯಾಟ್ ಸಾಮರ್ಥ್ಯದ ಸೋಲಾರ್ ವಿದ್ಯುತ್ ಉತ್ಪಾದಕ ಪ್ಯಾನಲ್‌ಗಳನ್ನು ಅಳವಡಿಸಲಾಗಿದ್ದು, ಪರಿಸರದ ಬಗ್ಗೆ ಇರುವ ಅವರ ಕಾಳಜಿಯು ಸಮಾಜದ ಪೀಳಿಗೆಗೆ ಮಾದರಿಯಂತಿದೆ. ಅಲ್ಲದೇ, ಕೋಲ್ಡ್ ಸ್ಟೋರೇಜ್ ಪ್ರಾರಂಭಿಸಿದ ಕರ್ನಾಟಕದ ಮೊದಲ ಸದಸ್ಯ ಸೌಹಾರ್ದ ಸಹಕಾರಿ ಎಂಬ ಹೆಗ್ಗಳಿಕೆಗೆ ಸಂಸ್ಥೆಯು ಪಾತ್ರವಾಗಿದೆ.

ಮುಂದಿನ ದಿನಗಳಲ್ಲಿ ಸಹಕಾರಿಯಿಂದ ಅಡಿಕೆ, ಕಾಫಿ, ಕಾಳು ಮೆಣಸು, ಶುಂಠಿ ಖರೀದಿಯನ್ನು ಪ್ರಾರಂಭಿಸುವ ಬಗ್ಗೆ, ಪ್ರಸಕ್ತ ಸಾಲಿನಿಂದ ರೈತರಿಂದಲೇ ನೇರವಾಗಿ ಖರೀದಿಸುವ ಬಗ್ಗೆ ಕಾರ್ಯಯೋಜನೆ ರೂಪಿಸಿದ್ದಾರೆ. ಇದರ ಜೊತೆಗೆ ವಿವಿಧ ಸಹಕಾರಿ ಸಂಸ್ಥೆಗಳಲ್ಲೂ ಅಡಿಕೆಯನ್ನು ಟೆಂಡರ್ ಮೂಲಕ ಖರೀದಿಸುವ ಕುರಿತು ಹಾಗೂ ಮುಂದಿನ ದಿನಗಳಲ್ಲಿ ಹೊರ ರಾಜ್ಯಗಳಿಗೂ ಕಳುಹಿಸುವ ಬಗ್ಗೆ ಚಿಂತನೆ ನಡೆಸಲಾಗಿದೆ.

**3) ಪ್ರಾಥಮಿಕ ಶಾಲಾ ಶಿಕ್ಷಕರ ಸೌಹಾರ್ದ ಸಹಕಾರಿ ಸಂಘ ನಿ., ತೀರ್ಥಹಳ್ಳಿ.**

ತೀರ್ಥಹಳ್ಳಿ ತಾಲ್ಲೂಕಿನಲ್ಲಿ 2015ರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸೌಹಾರ್ದ ಸಹಕಾರಿಯಾಗಿ 5 ಜಿಲ್ಲೆಗಳಿಗೆ ವಿಸ್ತರಣೆಯಾಗಿದ್ದು, ಅನಂತರ 2019ರಲ್ಲಿ ಈ ಸೌಹಾರ್ದ ಸಹಕಾರಿಯು ರಾಜ್ಯ ಮಟ್ಟದ ಪ್ರಾಥಮಿಕ ಶಾಲಾ ಶಿಕ್ಷಕರ ಸೌಹಾರ್ದ ಸಹಕಾರಿಯಾಗಿ ವಿಸ್ತರಣೆಗೊಂಡಿದೆ. ಸಹಕಾರಿಯು ಈಗಾಗಲೇ 8 ಶಾಖೆಗಳಿಂದ ರಾಜ್ಯದ 100ಕ್ಕೂ ಹೆಚ್ಚು ತಾಲ್ಲೂಕುಗಳಲ್ಲಿ ತನ್ನ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿದೆ. ಕೋವಿಡ್–19ರ ಸಂಕಷ್ಟ ಕಾಲದಲ್ಲಿಯೂ ಸಹ ಲಾಭ ಗಳಿಸಿ, ಪ್ರತಿ ವರ್ಷದಂತೆ ಲಾಭದ ಶೇ.10ರಷ್ಟನ್ನು ಸಮಾಜಮುಖಿ ಕೆಲಸ ಕಾರ್ಯಗಳಿಗೆ ವಿನಿಯೋಗ ಮಾಡುತ್ತಿದೆ.

ಬಂಡವಾಳಶಾಹಿ ವ್ಯವಸ್ಥೆಗೆ ಪರ್ಯಾಯ ನವ ಸಮಾಜದ ಹುಟ್ಟು ಸಹಕಾರಿಯಿಂದ ಮಾತ್ರ ಸಾಧ್ಯವೆಂಬಂತೆ ಸದರಿ ಸಹಕಾರಿ ವತಿಯಿಂದ ತೀರ್ಥಹಳ್ಳಿ ಹೃದಯ ಭಾಗದಲ್ಲಿ ಟಿ.ಎಸ್.ಟಿ ಹೈಪರ್ ಮಾರ್ಟ್‌ನ್ನು ಹುಟ್ಟುಹಾಕಿದ್ದಾರೆ. ಅಲ್ಲಿ ಸುಮಾರು 70ಕ್ಕೂ ಹೆಚ್ಚು ಜನಗಳಿಗೆ ಉದ್ಯೋಗಾವಕಾಶವನ್ನು ಒದಗಿಸಿದೆ. ಸಹಕಾರಿಯು ಈಗಾಗಲೇ ಸುಮಾರು 150ಕ್ಕೂ ಹೆಚ್ಚು ಜನರಿಗೆ ಉದ್ಯೋಗಾವಕಾಶವನ್ನು ಕಲ್ಪಿಸಿದೆ. ಮನೆ ಮತ್ತು ಮನೋರಂಜನೆಗೆ ಬೇಕಾದವೆಲ್ಲವೂ ಒಂದೇ ಕಡೆ ಲಭ್ಯ. ಅವುಗಳೆಂದರೆ ದಿನಸಿ, ಬೇಕರಿ ಪದಾರ್ಥಗಳು, ಐಸ್‌ಕ್ರೀಂ, ಹಣ್ಣು, ತರಕಾರಿ, ಸ್ಟೇಷನರಿ, ಸೌಂದರ್ಯವರ್ಧಕ ಜೊತೆಗೆ ಸಾಕು ಪ್ರಾಣಿಗೂ ಆಹಾರ ಅಲ್ಲದೇ ತಿನಿಸು ಹಾಗೂ ಮನೋರಂಜನೆಗೆ ಒಂದೇ ಕಡೆ ದೊರೆಯಲು ಹಾಗೂ ಸ್ಪರ್ಧಾತ್ಮಕ ದರದಲ್ಲಿ ದೊರೆಯಲು ಅನುಕೂಲವಾಗಿರುತ್ತದೆ.

**4) ಅಮೃತ ದಿನಸಿ ಸೌಹಾರ್ದ ಸಹಕಾರಿ ನಿ.,**

ಈ ಸಂಸ್ಥೆಯು 2020ರಂದು ಪ್ರಾರಂಭಗೊಂಡ 2021–22ನೇ ಒಟ್ಟು 489 ಶೇರುದಾರರೊಂದಿಗೆ 32 ಲಕ್ಷ ಶೇರು ಬಂಡವಾಳವನ್ನು ಹೊಂದಿರುತ್ತದೆ. ಸದರಿ ಸಹಕಾರಿ ಸಂಸ್ಥೆಯು ಸಹಕಾರಿಗಳ ಸರ್ವತೋಮುಖ ಅಭಿವೃದ್ಧಿಗೆ ಮತ್ತು ಬದಲಾಗುತ್ತಿರುವ ಜೀವನ ಶೈಲಿಗೆ ಬೇಕಾದ ನಿತ್ಯ ಬಳಕೆಯ ಉತ್ತಮ ಗುಣಮಟ್ಟದ ದಿನಸಿ ಹಾಗೂ ಇತರೆ ದಿನ ಬಳಕೆಯ ವಿದ್ಯುತ್ ಉಪಕರಣಗಳು, ಶಾಲಾ ಮಕ್ಕಳ ಪಠ್ಯ ಚಟುವಟಿಕೆಗೆ ಬೇಕಾದ ವಸ್ತುಗಳು, ಟಿ.ಎಸ್.ಎಸ್.ನ ಗೊಬ್ಬರ ಮತ್ತು ಹಿಂಡಿ, ಹೆಣ್ಣು ಮಕ್ಕಳ ಸೌಂದರ್ಯವರ್ಧಕ ಸಾಮಾಗ್ರಿ, ದಿನಬಳಕೆಯ ಸ್ಟೀಲ್ ಮತ್ತು ಹಿಂಡೋಲಿಯಂ ಪಾತ್ರೆಗಳನ್ನು ಸಕಿಯವಾಗಿ ಪೂರೈಸುವಲ್ಲಿ ಕಾರ್ಯ ನಡೆಸುತ್ತಿದೆ. ಸಹಕಾರಿಯು ಗ್ರಾಹಕರನ್ನು ಆಕರ್ಷಿಸುವಲ್ಲಿ ಹಲವಾರು ಪ್ರಯೋಗಾತ್ಮಕ ಯೋಜನೆಗಳನ್ನು ಆಫರ್ ರೂಪದಲ್ಲಿ ನೀಡುತಿದ್ದಾರೆ.

ಸಹಕಾರಿಯಲ್ಲಿ ಬಂಡವಾಳ ಹೂಡಿಕೆ ಮಾಡಿರುವ ಶೇರುದಾರರಿಗೆ ಹಾಗೂ ಸಿಬ್ಬಂದಿಗಳಿಗೂ ಅನುಕೂಲವಾಗುವಂತೆ ಶೇರುದಾರರು ಖರೀದಿಸುವ ವಸ್ತುಗಳ ಎಂ.ಆರ್.ಪಿ. ದರದ ಮೇಲೆ ರಿಯಾಯಿತಿ ಕೊಡುವುದರ ಜೊತೆಗೆ ಹೆಚ್ಚುವರಿ ಶೇಕಡಾ 2ರಷ್ಟು ರಿಯಾಯಿತಿ ನೀಡುತ್ತಾ ಬಂದಿರುತ್ತಾರೆ. ಗ್ರಾಮದಲ್ಲಿ ಸಾರ್ವಜನಿಕರಿಗೆ ಎಟಿಎಂ ಸೌಲಭ್ಯ ಇಲ್ಲದಿರುವ ಕಾರಣ "ಬಿಗ್ರೇಜ್" ಅವರೊಂದಿಗೆ ಒಡಗೂಡಿಸಿಕೊಂಡು ಶೇರುದಾರರಿಗೆ ಮತ್ತು ಗ್ರಾಹಕರಿಗೆ ಮಿನಿ ಎಟಿಎಂ ಸೇವೆಯ ಕಾರ್ಯವನ್ನು ನಡೆಸುತ್ತಿದ್ದಾರೆ.

ಗ್ರಾಮ ಮಟ್ಟದಲ್ಲಿ ಆರಂಭಗೊಂಡು ಮುಂದಿನ ಹಂತದಲ್ಲಿ ತಾಲ್ಲೂಕಿನವರೆಗೂ ತನ್ನ ಸೇವೆ ನೀಡುವ ನಿಟ್ಟಿನಲ್ಲಿ ತನ್ನ ಕಾರ್ಯಯೋಜನೆ ರೂಪುರೇಷೆಯನ್ನು ಮಾಡಿಕೊಂಡು ಕಾರ್ಯನಿರ್ವಹಿಸುತ್ತಿದ್ದಾರೆ.

**5) ಅಮೃತ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ.**

(ಗರತಿಕೆರೆ, ಕಮ್ಮಚ್ಚಿ ಅಂಚೆ, ಹೊಸನಗರ ತಾ, ಶಿವಮೊಗ್ಗ ಜಿಲ್ಲೆ)

ಈ ಸಂಸ್ಥೆಯು ಪ್ರಾರಂಭಗೊಂಡು ಹದಿಮೂರು ವಸಂತಗಳನ್ನು ಪೂರೈಸಿದ್ದು, 2009–10ನೇ ಸಾಲಿಗೆ 300 ಜನ ಸದಸ್ಯರಿಂದ 03 ಲಕ್ಷ ಬಂಡವಾಳದೊಂದಿಗೆ ಪ್ರಾರಂಭಗೊಂಡು 2021–22ನೇ ಸಾಲಿನ ವರ್ಷಾಂತ್ಯಕ್ಕೆ 1962 ಸದಸ್ಯರನ್ನು ಹಾಗೂ 49,25,600 ಪಾಲು ಬಂಡವಾಳವನ್ನು ಹೊಂದಿರುತ್ತದೆ. ಸಹಕಾರಿಯ ಒಟ್ಟು ದುಡಿಯುವ ಬಂಡವಾಳ 6.46,88,578 ರೂಪಾಯಿಗಳಾಗಿದ್ದು, ಒಟ್ಟು ವ್ಯವಹಾರ 23,75,19,832/– ರೂಪಾಯಿಗಳಾಗಿರುತ್ತದೆ. ಸದರಿ ಸಾಲಿನಲ್ಲಿ ಸಹಕಾರಿಯು 5,45,01,128 ರೂಪಾಯಿಗಳ ಸಾಲವನ್ನು ನೀಡಿರುತ್ತದೆ. ಪ್ರಸಕ್ತ ಸಹಕಾರಿಯು ಒಟ್ಟು 11,56,403 ರೂಪಾಯಿಗಳ ನಿವ್ವಳ ಲಾಭವನ್ನು ಗಳಿಸಿರುತ್ತದೆ.

ಸದರಿ ಸಹಕಾರಿಯು ಸದಸ್ಯರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿದ್ಯಾನಿಧಿ ಹಾಗೂ ಹೆಣ್ಣುಮಕ್ಕಳ ಮದುವೆಯ ಉಳಿತಾಯಕ್ಕಾಗಿ ಮಂಗಳ ನಿಧಿ, ಸಾಂಕ್ರಾಮಿಕ ರೋಗದ ಕಾರಣದಿಂದ ಆರ್ಥಿಕ ಸಂಕಷ್ಟವನ್ನು ನಿಯಂತ್ರಿಸಲು ಸಹಕಾರಿಯಲ್ಲಿ ಸುಸ್ಥಿ ಸಾಲಗಾರರಿಗೆ ಸುಸ್ಥಿ ಬಡ್ಡಿ ಮನ್ನಾದೊಂದಿಗೆ ಅವರ ಸಾಲದ ಖಾತೆಯನ್ನು ಮರು ಚಾಲ್ತಿ ಮಾಡಿಕೊಳ್ಳಲು ಸದಸ್ಯರಿಗೆ ಸಹಕಾರಿಯಾಗಿರುತ್ತಾರೆ.

### ಉಪಸಂಹಾರ:

ಸಹಕಾರ ರಂಗವು ಜೀವನದ ಅತ್ಯಗತ್ಯತೆಯಲ್ಲಿ ಒಂದು ಮತ್ತು ವಿಶೇಷ ತಂಡವಾಗಿ ಒಟ್ಟಾಗಿ ಪ್ರಾಮಾಣಿಕ ಕೆಲಸ ಮಾಡುವದರಿಂದ ಯಾವುದೇ ಕೆಲಸಕ್ಕೆ ಸೀಮಿತವಾಗಿಲ್ಲ, ಬದಲಿಗೆ ವ್ಯಕ್ತಿಯ ಪ್ರತಿಯೊಂದು ಕ್ರಿಯೆಯಲ್ಲೂ ಅದರ ಬೇರುಗಳನ್ನು ಹಾಗೂ ವಿಸ್ತಾರವನ್ನು ಹೊಂದಿದೆ. ಗುರಿಯನ್ನು ಅನುಸರಿಸಿ ಕಾರ್ಯನಿರ್ವಹಣೆ ಅಗತ್ಯವಿದೆ. ಸಹಕಾರವು ಮನುಷ್ಯನ ಮಾನವ ಸಂಪನ್ಮೂಲಗಳಲ್ಲಿ ಒಂದಾಗಿದೆ, ಸಹಕಾರ ಕ್ಷೇತ್ರದ ಮೂಲಕ ಸಾಧನೆಗೆ ಇರುವ ಅವಕಾಶಗಳನ್ನು ಈ ಮೇಲಿನ ಸಹಕಾರಿಗಳು ತೋರಿಸಿ ಸಾಧಿಸಿವೆ. ಇವೆಲ್ಲ ಸಾಧನೆಗಳು ಅನುಕರಣೀಯ,ಅಧ್ಯಯನ ಯೋಗ್ಯ.

.....34ನೇ ಪುಟದಿಂದ

ಸೇರುವಂತೆ, ಅದೇ ರೀತಿಯಲ್ಲಿ ಓ ಕರ್ತನೇ! ವಿಭಿನ್ನ ಆಸಕ್ತಿಗಳ ಪ್ರಕಾರ, ವಿಭಿನ್ನ ವಕ್ರ ಅಥವಾ ನೇರ ಮಾರ್ಗಗಳ ಮೂಲಕ ಹೋಗುವ ಜನರು ಅಂತಿಮವಾಗಿ ನಿಮ್ಮಲ್ಲಿ ಬಂದು ಭೇಟಿಯಾಗುತ್ತಾರೆ. ಇದುವರೆಗೆ ನಡೆದ ಅತ್ಯುತ್ತಮ ಪವಿತ್ರ ಸಮ್ಮೇಳನಗಳಲ್ಲಿ ಒಂದಾಗಿರುವ ಈ ಸಭೆಯು ಗೀತೆಯ ಈ ಅದ್ಭುತ ಬೋಧನೆ ಮತ್ತು ಜಗತ್ತಿಗೆ ಅದರ ಘೋಷಣೆಯ ನಿರೂಪಣೆಯಾಗಿದೆ.

### ಸ್ವಾಮಿ ವಿವೇಕಾನಂದರ ಉಕ್ತಿಗಳು ಚಿರಸ್ಮರಣೀಯ:

“ಇತರರಿಂದ ಒಳ್ಳೆಯದನ್ನು ಕಲಿಯಿರಿ ಆದರೆ ಅದನ್ನು ತನ್ನಿ, ಮತ್ತು ನಿಮ್ಮದೇ ರೀತಿಯಲ್ಲಿ ಅದನ್ನು ಹೀರಿಕೊಳ್ಳಿ; ಇತರರು ಆಗಬೇಡಿ. ಜೀವನದ ಅಂತಿಮ ಗುರಿ ಆತ್ಮದ ಸ್ವಾತಂತ್ರ್ಯವನ್ನು ಸಾಧಿಸುವುದು ಮತ್ತು ಅದು ಒಬ್ಬರ ಧರ್ಮದ ಸಂಪೂರ್ಣತೆಯನ್ನು ಒಳಗೊಂಡಿದೆ.

“ರೂಪಾಯಿಯಿಲ್ಲದೆ ಮನುಷ್ಯ ಬಡವನಲ್ಲ ಆದರೆ ಕನಸು ಮತ್ತು ಮಹತ್ವಾಕಾಂಕ್ಷೆ ಇಲ್ಲದೆ ಮನುಷ್ಯ ನಿಜವಾಗಿಯೂ ಬಡವನಾಗಿದ್ದಾನೆ.”

“ಒಂದು ಉಪಾಯವನ್ನು ತೆಗೆದುಕೊಳ್ಳಿ, ಆ ಒಂದು ಕಲ್ಪನೆಯನ್ನು ನಿಮ್ಮ ಜೀವನವನ್ನಾಗಿ ಮಾಡಿ, ಅದರ ಬಗ್ಗೆ ಯೋಚಿಸಿ, ಅದರ ಬಗ್ಗೆ ಕನಸು ಕಾಣಿ, ಮೆದುಳು, ಸ್ನಾಯುಗಳು, ನರಗಳು,

ನಿಮ್ಮ ದೇಹದ ಪ್ರತಿಯೊಂದು ಭಾಗವೂ ಆ ಕಲ್ಪನೆಯಿಂದ ತುಂಬಿರಲಿ, ಮತ್ತು ಇತರ ಪ್ರತಿಯೊಂದು ಕಲ್ಪನೆಯನ್ನು ಬಿಡಿ. ಇದು ಯಶಸ್ಸಿನ ದಾರಿ.

“ನಿಮ್ಮ ಜೀವನದಲ್ಲಿ ಅಪಾಯಗಳನ್ನು ತೆಗೆದುಕೊಳ್ಳಿ. ನೀವು ಗೆದ್ದರೆ, ನೀವು ಮುನ್ನಡೆಸಬಹುದು, ಸೋತರೆ ನೀವು ಮಾರ್ಗದರ್ಶನ ಮಾಡಬಹುದು.

“ಎದ್ದೇಳು, ಎಚ್ಚರಗೊಳ್ಳು ಮತ್ತು ಗುರಿ ಸಾಧಿಸುವವರೆಗೂ ನಿಲ್ಲಬೇಡ”

“ಬ್ರಹ್ಮಾಂಡದ ಎಲ್ಲಾ ಶಕ್ತಿಗಳು ಈಗಾಗಲೇ ನಮ್ಮದು. ನಮ್ಮ ಕೈಗಳನ್ನು ನಮ್ಮ ಕಣ್ಣುಗಳ ಮುಂದೆ ಇಟ್ಟು ನಾವು ಕತ್ತಲೆಯಾಗಿದ್ದೇವೆ ಎಂದು ಅಳುತ್ತೇವೆ.”–

“ನಿಮಗೆ ಬೇಕಾದರೆ ನಾಸ್ತಿಕರಾಗಿರಿ, ಆದರೆ ಪ್ರಶ್ನಾತೀತವಾಗಿ ಯಾವುದನ್ನೂ ನಂಬಬೇಡಿ.“

### ಅಭಿಪ್ರಾಯ :

ಸ್ವಾಮಿ ವಿವೇಕಾನಂದರು ಅವರು ನಲವತ್ತು ವರ್ಷಗಳವರೆಗೆ ಬದುಕುವುದಿಲ್ಲ ಎಂದು ಭವಿಷ್ಯ ನುಡಿದಿದ್ದರು. ಜುಲೈ 4, 1902 ರಂದು, ಅವರು ಬೇಲೂರು ಮಠದಲ್ಲಿ ವಿದ್ಯಾರ್ಥಿಗಳಿಗೆ ಸಂಸ್ಕೃತ ವ್ಯಾಕರಣವನ್ನು ಕಲಿಸಲು ತಮ್ಮ ದಿನಗಳ ಕೆಲಸವನ್ನು ಮಾಡಿದರು. ಅವರು ಸಂಜೆ ತಮ್ಮ ಕೋಣೆಗೆ ನಿವೃತ್ತರಾದರು ಮತ್ತು ಸುಮಾರು 9 ಗಂಟೆಗೆ ಧ್ಯಾನದ ಸಮಯದಲ್ಲಿ ನಿಧನರಾದರು. ಸ್ಮಾರಕ: ಬೇಲೂರು ಮಠ ಬೇಲೂರು, ಪಶ್ಚಿಮ ಬಂಗಾಳ ಇರಿಸಲಾಗಿದೆ. ಸ್ವಾಮಿ ವಿವೇಕಾನಂದರ ಬೋಧನೆಗಳು ಯುವಕರನ್ನು ಮಾತ್ರವಲ್ಲ ಇಡೀ ಜಗತ್ತನ್ನು ಪ್ರೇರೇಪಿಸಿತು. ಅವರು ರಾಷ್ಟ್ರವಾಗಿ ಭಾರತದ ಏಕತೆಗೆ ನಿಜವಾದ ಅಡಿಪಾಯ ಹಾಕಿದರು. ಹಲವು ವೈವಿಧ್ಯತೆಗಳೊಂದಿಗೆ ಹೇಗೆ ಬದುಕಬೇಕು ಎಂದು ಅವರು ನಮಗೆ ಕಲಿಸಿದರು. ಅವರು ಪೂರ್ವ ಮತ್ತು ಪಶ್ಚಿಮದ ಸಂಸ್ಕೃತಿಯ ನಡುವೆ ವಾಸ್ತವ ಸೇತುವೆಯನ್ನು ನಿರ್ಮಿಸುವಲ್ಲಿ ಯಶಸ್ವಿಯಾದರು. ಭಾರತದ ಸಂಸ್ಕೃತಿಯನ್ನು ಪ್ರಪಂಚದಿಂದ ಪ್ರತ್ಯೇಕಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ. ಅವರ ಉಪನ್ಯಾಸಗಳು, ಬರಹಗಳು, ಪತ್ರಗಳು, ಕವಿತೆಗಳು, ವಿಚಾರಗಳು ಭಾರತದ ಯುವಕರಿಗೆ ಮಾತ್ರವಲ್ಲ ಇಡೀ ವಿಶ್ವಕ್ಕೆ ಪ್ರೇರಣೆಯಾಯಿತು.

# Easy Pay

– ಶ್ರೀಮತಿ ಶೋಭಾ ಆರ್. ಸಹ ಪ್ರಧಾನ ವ್ಯವಸ್ಥಾಪಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ಸದಸ್ಯ ಸಹಕಾರಿಗಳಿಂದ ಪ್ರತಿವರ್ಷ ಶಾಸನಬದ್ಧ ಪಾವತಿಗಳಾದ ವಾರ್ಷಿಕ ವಂತಿಗೆ ಮತ್ತು ಶಿಕ್ಷಣ ನಿಧಿ ವಂತಿಗೆ ಹಾಗೂ ಪ್ರತಿನಿಧಿ ಶುಲ್ಕಗಳನ್ನು ಚೆಕ್/ಡಿಡಿ ಮೂಲಕ ಸ್ವೀಕರಿಸಲಾಗುತಿತ್ತು. ಸದರಿ ಚೆಕ್/ಡಿಡಿಗಳನ್ನು ಅಂಚೆ ಅಥವಾ ಕೋರಿಯರ್ ವಿವರವಾದ ಪತ್ರದ ಮೂಲಕ ಕಳುಹಿಸಬೇಕಾಗುತ್ತಿತ್ತು. ಇಂದಿನ ತಾಂತ್ರಿಕ ಯುಗದ ಬದಲಾವಣೆಯಂತೆ ಸಂಯುಕ್ತ ಸಹಕಾರಿಯು ಸಂಯುಕ್ತ ಸಹಕಾರಿಯು ಸದಸ್ಯ ಸಹಕಾರಿಗಳು ಪಾವತಿಸುವ ವಂತಿಗೆಗಳನ್ನು ಸರಳೀಕರಣಗೊಳಿಸಿದೆ. ಸಂಯುಕ್ತ ಸಹಕಾರಿಯು ಆಕ್ಸಿಸ್ ಬ್ಯಾಂಕಿನೊಂದಿಗೆ ಒಪ್ಪಂದ ಮಾಡಿಕೊಂಡು Easy Pay System ವ್ಯವಸ್ಥೆಯನ್ನು ಪ್ರಾರಂಭಿಸಲಾಗಿದೆ ಹಾಗೂ ಪಾವತಿ ವಿಧಾನದ ಲಿಂಕ್‌ನ್ನು ಸಂಯುಕ್ತ ಸಹಕಾರಿಯ ವೆಬ್‌ಸೈಟ್ www.souharda.coop ರಲ್ಲಿ ಅಳವಡಿಸಲಾಗಿದೆ. ಮತ್ತು Easy Pay System ನಲ್ಲಿ ಪಾವತಿಸುವ ಹಂತವನ್ನು www.souharda.coop ನಲ್ಲಿ ಮುಖಪುಟದಲ್ಲಿ Easy Pay System Demo Video ವನ್ನು Upload ಮಾಡಲಾಗಿದೆ ಅದನ್ನು ನೋಡಿಕೊಂಡು ಪಾವತಿಗಳನ್ನು ಮಾಡಬಹುದು.

**ಈ ವ್ಯವಸ್ಥೆಯಿಂದ ಸದಸ್ಯ ಸಹಕಾರಿಗಳು ಕೆಳಗಿನ ಪ್ರಯೋಜನಗಳನ್ನು ಪಡೆದುಕೊಳ್ಳಬಹುದು.**

1. ಸದಸ್ಯ ಸಹಕಾರಿಗಳು ತಮ್ಮ ಹತ್ತಿರವಿರುವ ಆಕ್ಸಿಸ್ ಬ್ಯಾಂಕಿನ ಶಾಖೆಯಲ್ಲಿ ಸಂಯುಕ್ತ ಸಹಕಾರಿಗೆ ಪಾವತಿಸಬೇಕಾದ ಶಿಕ್ಷಣ ನಿಧಿ ವಂತಿಗೆ ಮತ್ತು ವಾರ್ಷಿಕ ವಂತಿಗೆ ಹಾಗೂ ಪ್ರತಿನಿಧಿ ಶುಲ್ಕಗಳನ್ನು ಈ ವಿಧಾನದ ಮೂಲಕ ಪಾವತಿಸಬೇಕು.

2. ವಂತಿಗೆಗಳನ್ನು ನಗದು/ಚೆಕ್/ಡಿಡಿ ಮೂಲಕ ಮಾಡುವುದಾದಲ್ಲಿ ಹತ್ತಿರದ ಆಕ್ಸಿಸ್ ಬ್ಯಾಂಕ್ ಶಾಖೆಗೆ ಹೋಗಬೇಕು. ಒಂದು ವೇಳೆ ವಂತಿಗೆಯನ್ನು Fund Transfer/RTGS/ NEFT/UPI ID ಮಾಡುವುದಾದಲ್ಲಿ ತಮ್ಮ ಸಹಕಾರಿಯಲ್ಲಿಯೇ ಮಾಡಬಹುದು.

3. ಪಾವತಿ ಮಾಡಿರುವ ಕುರಿತು ಸ್ವೀಕೃತಿ ತಕ್ಷಣ ಲಭ್ಯವಾಗುತ್ತದೆ.

4. ಈ ವ್ಯವಸ್ಥೆಯಲ್ಲಿ ಪಾವತಿ ಮಾಡುವುದರಿಂದ ಡಿಡಿ ಕಮೀಷನ್ ಮತ್ತು ಅಂಚೆ ವೆಚ್ಚಗಳನ್ನು ಸದಸ್ಯ ಸಹಕಾರಿಗಳು ಉಳಿಸಬಹುದು.

5. ತಾವು ಪಾವತಿಸಿದ ಮೊತ್ತ ಸಂಯುಕ್ತ ಸಹಕಾರಿಯ ಖಾತೆಗೆ ನಗಧೀಕರಣವಾದ ಕೂಡಲೇ 10 ದಿನಗಳಲ್ಲಿ ಆಯಾ ವಿಭಾಗಗಳಿಂದ ರಸೀದಿಯನ್ನು ಸದಸ್ಯ ಸಹಕಾರಿಗಳಿಗೆ ಕಳುಹಿಸಲಾಗುವುದು.

Easy Pay System ನಲ್ಲಿ ತಮ್ಮ ಪಾವತಿಗಳನ್ನು ಸಂಯುಕ್ತ ಸಹಕಾರಿಗೆ ಈ ಕೆಳಕಂಡ ಮಾರ್ಗದಲ್ಲಿ ಪಾವತಿ ಮಾಡಬೇಕಾಗಿರುತ್ತದೆ.

- ವಾರ್ಷಿಕ ವಂತಿಗೆ ಮತ್ತು ಶಿಕ್ಷಣ ನಿಧಿ ಹಾಗೂ ಪ್ರತಿನಿಧಿ ಶುಲ್ಕಗಳ ಪಾವತಿಗಳನ್ನು www.souharda.coop ವೆಬ್‌ಸೈಟ್‌ನಲ್ಲಿರುವ online Banking ನಲ್ಲಿ ಅಳವಡಿಸಲಾಗಿದೆ.
- ಈ online Banking ನಲ್ಲಿ ಸಂಯುಕ್ತ ಸಹಕಾರಿಯಿಂದ ತಮ್ಮ ಸಹಕಾರಿಗೆ ಒದಗಿಸಿದ ಖಾತೆ ಸಂಖ್ಯೆಯನ್ನು(ಉದಾಹರಣೆ: BGU–0001) ನಮೂದಿಸಿ ವ್ಯಾಲಿಡೇಟ್ ಮಾಡಿದಾಗ ತಮ್ಮ ಸಂಸ್ಥೆಯ ಹೆಸರಿರುವ ಸ್ಕ್ರೀನ್ ತೆರೆಯುತ್ತದೆ.
- ಸ್ಕ್ರೀನ್ ಮೇಲೆ ಇರುವ ಸಹಕಾರಿಯ ಹೆಸರಿಗೂ ಮತ್ತು ತಮ್ಮ ಸಹಕಾರಿಯ ಹೆಸರಿಗೂ ತಾಳೆ ಮಾಡಿಕೊಂಡು ಪಾವತಿಗಳ ವಿವರಗಳನ್ನು ನಮೂದಿಸಿ ಚಲನ್ ಜನರೇಟ್ ಮಾಡಬೇಕು.
- Remarks ಕಾಲಂ ಅಲ್ಲಿ ಕಡ್ಡಾಯವಾಗಿ ಯಾವ ವರ್ಷದ ವಾರ್ಷಿಕ ವಂತಿಗೆ ಮತ್ತು ಶಿಕ್ಷಣ ನಿಧಿ ಹಾಗೂ ಪ್ರತಿನಿಧಿ ಶುಲ್ಕಗಳ ಪಾವತಿಗಳನ್ನು ಮಾಡುವುದಾಗಿ ನಿಖರವಾದ ಮಾಹಿತಿ ನಮೂದಿಸಬೇಕು.
- ನಂತರ ನಗದು/ಚೆಕ್/ಡಿಡಿ ಮೂಲಕ ಮಾಡುವುದಾದಲ್ಲಿ ಹತ್ತಿರದ ಆಕ್ಸಿಸ್ ಬ್ಯಾಂಕ್ ಶಾಖೆಗೆ ಚಲನ್‌ನೊಂದಿಗೆ ಲಗತ್ತಿಸಿ ಪಾವತಿಸಬಹುದು.
- ಒಂದು ವೇಳೆ ವರ್ಗಾವಣೆ (Fund Transfer/RTGS/ NEFT/UPI ID) ಮಾಡುವುದಾದರೇ ತಮ್ಮ ಖಾತೆಯಿಂದಲೇ ನೇರವಾಗಿ ಪಾವತಿ ಮಾಡಬಹುದು ಕೊನೆಯಲ್ಲಿ ಚಲನ್‌ನ್ನು ಪ್ರಿಂಟ್ ತೆಗೆದುಕೊಳ್ಳಬೇಕು.
- ಡಿಡಿ/ಚೆಕ್ ನಗಧೀಕರಣ ನಿಯಮಕ್ಕೆ ಒಳಪಟ್ಟಿರುತ್ತದೆ. ಈ ಕುರಿತು ಯಾವುದೇ ಸ್ಪಷ್ಟೀಕರಣ ಬೇಕಾದರೆ ತಮ್ಮ ಜಿಲ್ಲೆಗೆ ಸಂಬಂಧಿಸಿದ ಜಿಲ್ಲಾ ಸಂಯೋಜಕರು ಅಥವಾ ಪ್ರಾಂತೀಯ ಕಛೇರಿಗಳನ್ನು ಸಂಪರ್ಕಿಸಲು ಈ ಮೂಲಕ ತಿಳಿಸಲಾಗುತ್ತಿದೆ. Easy Pay System ನಲ್ಲಿ ಪಾವತಿಸುವ ಹಂತವನ್ನು www.souharda.coop ನಲ್ಲಿ ಮುಖಪುಟದಲ್ಲಿ Easy Pay System Video ವನ್ನು Upload ಮಾಡಲಾಗಿದೆ ಅದನ್ನು ನೋಡಿಕೊಂಡು ಪಾವತಿ ಮಾಡಬಹುದು.
- Easy Pay System ಮೂಲಕ ಮಾಡಿದ ಪಾವತಿಗಳನ್ನು UTR Number ಮೂಲಕ ನಗಧೀಕರಣದ ಮಾಹಿತಿ ಪರೀಕ್ಷಿಸಿಕೊಳ್ಳಬಹುದು.
- ಸದಸ್ಯ ಸಹಕಾರಿಗಳು ಸಂಯುಕ್ತ ಸಹಕಾರಿಗೆ ಪಾವತಿಸುವ ಪಾವತಿಗಳನ್ನು Easy Pay System ಮೂಲಕ ಕಡ್ಡಾಯವಾಗಿ ಪಾವತಿಸಲು ಕೋರಿದೆ.

# ಎಳ್ಳು ಬೆಲ್ಲ ಸಕ್ಕರೆ ಅಚ್ಚು, ಸಿಹಿ ಹಂಚುವ ಸಂಕ್ರಾಂತಿ

– ಶ್ರೀ ಶಂಕರ ಎಸ್, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು



ಪ್ರತಿಯೊಂಬ ಮನುಷ್ಯನ ಬದುಕಿಗೆ ಹೊಸ ರೀತಿಯ ಹುರುಪನ್ನು ನೀಡುವುದೇ ಹಬ್ಬಗಳು. ಪ್ರತೀ ಮಾಸಗಳಲ್ಲೂ ಒಂದೊಂದು ವಿಶೇಷತೆಯನ್ನು ಹೊತ್ತು ದೈನಂದಿನ ಬದುಕಿಗೊಂದಿಷ್ಟು ಸಂತಸವನ್ನು ನೀಡುವ ಹಬ್ಬಗಳು ಭಾರತೀಯರಿಗೆ ಒಂದು ವಿಶೇಷ ದಿನ. ಕೇವಲ ಸಂಪ್ರದಾಯಗಳಿಗೆ ಸೀಮಿತವಾಗದೆ ಎಲ್ಲ ಧರ್ಮಗಳಲ್ಲೂ ವಿಭಿನ್ನವಾದ ಹಬ್ಬಗಳನ್ನು ಆಚರಿಸುತ್ತಾರೆ. ಒಂದೇ ಹಬ್ಬವನ್ನು ದೇಶದ ವಿವಿಧ ಭಾಗಗಳಲ್ಲಿ ಬೇರೆ ಬೇರೆ ಹೆಸರಿನಿಂದ ಆಚರಿಸಲಾಗುತ್ತದೆ. ಅದರಲ್ಲಿ ಮಕರ ಸಂಕ್ರಾಂತಿ ಕೂಡ ಒಂದು. ಸೂರ್ಯ ದೇವನ ಈ ಹಬ್ಬದಂದು ಸೂರ್ಯ ತನ್ನ ಪಥವನ್ನು ಬದಲಿಸಿ ಪ್ರಯಾಣ ಆರಂಭಿಸುತ್ತಾನೆ. ಸೂರ್ಯನು ದಕ್ಷಿಣಾಯನದಿಂದ ಉತ್ತರಾಯಣಕ್ಕೆ ಚಲಿಸುತ್ತಾನೆ. ಇದು ಆರು ತಿಂಗಳ ಅವಧಿ. ಈ ದಿನ ಸೂರ್ಯ ತನ್ನ ಮಗ, ಮಕರ ರಾಶಿಯ ಅಧಿಪತಿ ಶನಿಯ ಮನೆಗೆ ಹೋಗುತ್ತಾನೆ ಎನ್ನುವುದು ನಂಬಿಕೆ. ಹೀಗಾಗಿ ಈ ದಿನವನ್ನು ಮಕರ ಸಂಕ್ರಾಂತಿ ಎಂದು ಕರೆಯುತ್ತಾರೆ.

ಮಕರ ಸಂಕ್ರಾಂತಿಯ ಹಬ್ಬವನ್ನು ಬ್ರಹ್ಮ, ವಿಷ್ಣು, ಮಹೇಶ್ವರ, ಗಣೇಶ, ಆದಿಶಕ್ತಿ ಮತ್ತು ಸೂರ್ಯನ ಪೂಜೆ ಮತ್ತು ಆರಾಧನೆಯ ಪವಿತ್ರ ದಿನವೆಂದು ಕರೆಯುತ್ತಾರೆ. ಈ ದಿನ ಶುದ್ಧ ಮನಸ್ಸಿನಿಂದ ಪ್ರಾರ್ಥಿಸಿ ಪೂಜಿಸಿದರೆ ದೇಹ, ಮನಸ್ಸು ಮತ್ತು ಆತ್ಮಕ್ಕೆ ಶಕ್ತಿ ದೊರೆಯುತ್ತದೆ ಎನ್ನುವ ನಂಬಿಕೆ ಪ್ರತೀತಿಯಲ್ಲಿದೆ.

ಇದೊಂದು ಸುಗ್ಗಿಕಾಲವೂ ಹೌದು, ರೈತರಿಗೆ ಫಸಲು ಬರುವ ಸಮಯ ಇದು. ರೈತರ ಹಿಗ್ಗಿನ ಹಬ್ಬ – ಸುಗ್ಗಿ ಹಬ್ಬ. ಆದ್ದರಿಂದ ಈ ಹಬ್ಬ ಸಮೃದ್ಧಿಯ ಸಂಕೇತವೆನ್ನಬಹುದು. ಮನೆ ಮನೆಗಳಲ್ಲಿ ಸಂಕ್ರಾಂತಿ ಹಬ್ಬವನ್ನು ಅದ್ದೂರಿಯಾಗಿ ಆಚರಿಸಲಾಗುತ್ತದೆ. ನಮ್ಮಲ್ಲಿ, ಅಂದರೆ ತುಳುನಾಡಿನಲ್ಲಿ ಮಕರ ಸಂಕ್ರಾತಿಯ ಆಚರಣೆ ಇಲ್ಲದಿದ್ದರೂ ಶಬರಿ ಮಲೆಯ ಮಕರ ಜ್ಯೋತಿ ನೋಡುವ ಸಲುವಾಗಿ ಸಾವಿರಾರು ಭಕ್ತರು ಅಯ್ಯಪ್ಪ ಸ್ವಾಮಿಯ ಮಾಲೆ ಧರಿಸಿ ವ್ರತ ಕೈಗೊಂಡು, ಶಬರಿ ಮಲೆಗೆ ಹೋಗುತ್ತಾರೆ. ಕರ್ನಾಟಕದ ಇತರ ಪ್ರದೇಶಗಳಲ್ಲಿ ಹಾಗೂ ದೇಶದಾದ್ಯಂತ ವಿಭಿನ್ನ ಶೈಲಿಯಲ್ಲಿ ಆಚರಿಸುತ್ತಾರೆ . ಹೊಸ ಬಟ್ಟೆ ತೊಟ್ಟು, ದೇವಸ್ಥಾನಕ್ಕೆ ಹೋಗಿ ಎಳ್ಳು, ಬೆಲ್ಲ, ಕಬ್ಬು ಇತ್ಯಾದಿಗಳನ್ನು ಪೂಜಿಸಿ ಅದನ್ನು ಹಂಚುವ ಆಚರಣೆಯಿದೆ. ಇದರೊಂದಿಗೆ ಹುರಿಕಡಲೆ, ಕೊಬ್ಬರಿ, ಸಕ್ಕರೆ, ಬೆಲ್ಲ ಸೇರಿಸಿ ಬಂಧು– ಬಳಗ, ಸ್ನೇಹಿತರಿಗೆ ಹಂಚುತ್ತಾರೆ. ಇದು ಆರೋಗ್ಯದ ದೃಷ್ಟಿಯಿಂದಲೂ ಒಳ್ಳೆಯದು.

**ಮಕರ ಸಂಕ್ರಾಂತಿ ಹಬ್ಬದ ವಿಶೇಷತೆಗಳು:–**

- ಈ ಹಬ್ಬದಲ್ಲಿ ಸೂರ್ಯನು ಮಕರ ಸಂಕ್ರಮಣವನ್ನು ಆಚರಿಸುತ್ತೇವೆ.
- ದಕ್ಷಿಣಾಯಣದಿಂದ ಉತ್ತರಾಯಣಕ್ಕೆ ಸೂರ್ಯನು ಮಕರ ರಾಶಿಯನ್ನು ಪ್ರವೇಶಿಸಿದಾಗ ಮಕರ ಸಂಕ್ರಾಂತಿ ಹಬ್ಬವನ್ನು ಆಚರಿಸಲಾಗುತ್ತದೆ.
- ನದಿಯಲ್ಲಿ ಮುಂಜಾನೆ ಪವಿತ್ರ ಸ್ನಾನ ಮಾಡುವ ಮೂಲಕ ಮತ್ತು ಸೂರ್ಯ ದೇವರಿಗೆ ಪ್ರಾರ್ಥನೆ ಸಲ್ಲಿಸುವ ಮೂಲಕ ದಿನವನ್ನು ಪ್ರಾರಂಭಿಸುತ್ತಾರೆ.
- ಈ ಹಬ್ಬವನ್ನು ದೇಶದ ಪ್ರತಿಯೊಂದು ಭಾಗದಲ್ಲೂ ವಿಭಿನ್ನ ಹೆಸರುಗಳೊಂದಿಗೆ ಆಚರಿಸಲಾಗುತ್ತದೆ.
- ಮಕರ ಸಂಕ್ರಾಂತಿಯನ್ನು ಇಡೀ ರಾಷ್ಟ್ರದಲ್ಲಿ ವಿಶೇಷ ರೀತಿಯಲ್ಲಿ ಆಚರಿಸಲಾಗುತ್ತದೆ.
- ಮಕ್ಕಳು ಈ ದಿನವನ್ನು ಗಾಳಿಪಟ ಹಾರಿಸಿ ಸಿಹಿ ತಿಂದು ಆನಂದಿಸುತ್ತಾರೆ.
- ಮಕರ ಸಂಕ್ರಾಂತಿಯಂದು ಮಹಾ ಮೇಳವನ್ನು ಆಯೋಜಿಸಲಾಗಿರುತ್ತದೆ.
- ಈ ಹಬ್ಬದಂದು ಕೆಲವು ಕಡೆಗಳಲ್ಲಿ ಜನರಿಗೆ ಗೋಧಿ ಮತ್ತು ಸಿಹಿತಿಂಡಿಗಳನ್ನು ವಿತರಿಸುತ್ತೇವೆ.
- ಈ ಹಬ್ಬದಲ್ಲಿ ದಾನವನ್ನು ನೀಡುವ ಪದ್ಧತಿಯು ಕೆಲವು ಕಡೆ ಆಚರಣೆಯಲ್ಲಿದೆ.

ಮಕರ ಸಂಕ್ರಾಂತಿಗೆ ಸಂಬಂಧಿಸಿದ ಸಾಮಾಜಿಕ ಉತ್ಸವಗಳೆಂದರೆ ಬಣ್ಣಬಣ್ಣದ ಅಲಂಕಾರಗಳು, ಹಾಡುಗಾರಿಕೆ ಮತ್ತು ನೃತ್ಯ, ಗಾಳಿಪಟ ಹಾರಿಸುವುದು, ದೀಪೋತ್ಸವಗಳು, ರಂಗೋಲಿ ಬಿಡಿಸುವುದು ಮತ್ತು ಕೆಲವೊಮ್ಮೆ ಕುಸ್ತಿ (ಕುಸ್ತಿ). ಕರ್ನಾಟಕದ ಮತ್ತೊಂದು ಹಳೆಯ ಆಚರಣೆಯೆಂದರೆ, ಜನರು ತಮ್ಮ ಹಸು ಮತ್ತು ದನಗಳನ್ನು ಹೊಳೆಯುವ ವೇಷಭೂಷಣಗಳು ಮತ್ತು ಆಭರಣಗಳಿಂದ ಅಲಂಕರಿಸುತ್ತಾರೆ ಮತ್ತು ಬೆಂಕಿಯ ದೊಡ್ಡ ಹಳ್ಳವನ್ನು ದಾಟುವಂತೆ ಮಾಡುತ್ತಾರೆ. ದನಗಳ ಈ ಪ್ರದರ್ಶನವನ್ನು ಸ್ಥಳೀಯವಾಗಿ 'ಕಿಚ್ಚು ಹಾಯಿಸೋದು' ಎಂದು ಕರೆಯಲಾಗುತ್ತದೆ. ಈ ಚಟುವಟಿಕೆಗಳು ಸಂತೋಷ ಮತ್ತು ಉಲ್ಲಾಸದ ವಾತಾವರಣವನ್ನು ನೀಡುತ್ತದೆ. ಈ ಮಕರ ಸಂಕ್ರಾಂತಿ ಹಬ್ಬ ಎಲ್ಲರಿಗೂ ಆಯುರಾರೋಗ್ಯ ತರಲಿ ಎಂಬ ಶುಭ ಹಾರೈಸುತ್ತೇನೆ.

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 40
Licensed to post without Prepayment License No. PMG BG/WPP-384/2023-2025.

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು.

## ಆಡಳಿತ ಮಂಡಳಿ ಸದಸ್ಯರು

## 2023 ನೂತನ ವರ್ಷದ ಹಾಗೂ ಸೌಹಾರ್ದ ಸಹಕಾರಿ ದಿನದ ಹಾರ್ದಿಕ ಶುಭಾಶಯಗಳು



| | | | | | |
|---|---|---|---|---|---|
| ಜಿ. ನಂಜನಗೌಡ<br>ಅಧ್ಯಕ್ಷರು | ಎ. ಆರ್ ಪ್ರಸನ್ನಕುಮಾರ<br>ಉಪಾಧ್ಯಕ್ಷರು | ಬಿ. ಹೆಚ್. ಕೃಷ್ಣಾರೆಡ್ಡಿ<br>ನಿರ್ದೇಶಕರು | ಗುರುನಾಥ ಜ್ಯಾಂತಿಕರ<br>ನಿರ್ದೇಶಕರು | ಜಗದೀಶ ಕವಟಗಿಮಠ<br>ನಿರ್ದೇಶಕರು | ಗುರುನಗೌಡ ಪಾಟೀಲ<br>ನಿರ್ದೇಶಕರು |
| ಆರ್. ತಿಮ್ಮಯ್ಯಶೆಟ್ಟಿ<br>ನಿರ್ದೇಶಕರು | ಜಿ. ಎಸ್. ಗುಂಡುರಾವ್<br>ನಿರ್ದೇಶಕರು | ಮಂಜುನಾಥ ಎಸ್.ಕೆ<br>ನಿರ್ದೇಶಕರು | ಜಿ. ಶ್ರೀಧರ<br>ನಿರ್ದೇಶಕರು | ನಾಗರಾಜ ಆರ್ ದೇಶಪಾಂಡೆ<br>ನಿರ್ದೇಶಕರು | ಕೆ. ಶಿವಲಿಂಗಪ್ಪ<br>ನಿರ್ದೇಶಕರು |
| ಭಾರತಿ ಜಿ. ಭಟ್<br>ನಿರ್ದೇಶಕರು | ಶೈಲಜಾ ತಪಲಿ<br>ನಿರ್ದೇಶಕರು | ಮಲ್ಲಿಕಾರ್ಜುನ ಅಜ್ಜಪ್ಪ ಹೊರಕೇರಿ<br>ನಿರ್ದೇಶಕರು | ಎಂ. ಆರ್ ಪ್ರಭುದೇವ್<br>ನಿರ್ದೇಶಕರು | ಹೆಚ್. ಜೆ ಹನುಮಂತಶೆಟ್ಟಿ<br>ನಿರ್ದೇಶಕರು | ರಘುರಾಮ ರೆಡ್ಡಿ<br>ನಿರ್ದೇಶಕರು |
| ವಿಜಯ್ ಸಿ. ಪಿ<br>ನಿರ್ದೇಶಕರು | ಮೋಹನದಾಸ ಜೆ. ನಾಯಕ್<br>ನಿರ್ದೇಶಕರು | ರಾಮನಗೌಡ ಬಿ. ಪಾಟೀಲ<br>ನಿರ್ದೇಶಕರು | ನಾರಾಯಣ ಬಾಬು ಡಿ. ಎನ್<br>ವೃತ್ತಿಪರ ನಿರ್ದೇಶಕರು | ಸುಭಾಷ್ ಇಂಡಿ<br>ವೃತ್ತಿಪರ ನಿರ್ದೇಶಕರು | ಶರಣಗೌಡ ಜಿ. ಪಾಟೀಲ<br>ವ್ಯವಸ್ಥಾಪಕ ನಿರ್ದೇಶಕರು |

**ಕೇಂದ್ರ ಕಛೇರಿ :** “ಸೌಹಾರ್ದ ಸಹಕಾರಿ ಸೌಧ” ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291

**ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ :** “ಸೌಹಾರ್ದ ಸಹಕಾರಿ ಸೌಧ”, ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34

**ಇ–ಸ್ಟಾಂಪಿಂಗ್ ವಿಭಾಗ :** “ಸೌಹಾರ್ದ ಸಹಕಾರಿ ಸೌಧ”, ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055

**ಬೆಂಗಳೂರು ಪ್ರಾಂತೀಯ ಕಛೇರಿ :** “ಸೌಹಾರ್ದ ಸಹಕಾರಿ ಸೌಧ”, ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.

**ಮೈಸೂರು ಪ್ರಾಂತೀಯ ಕಛೇರಿ :** ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299

**ಬೆಳಗಾವಿ ಪ್ರಾಂತೀಯ ಕಛೇರಿ :** 1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.

**ಕಲಬುರಗಿ ಪ್ರಾಂತೀಯ ಕಛೇರಿ :** ನಿವೇಶನ ಸಂಖ್ಯೆ 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003